ಶ್ರೀ ಎಂ. ನಾಗಪ್ಪ.—ಇದನ್ನು ವಿಚಾರ ಮಾಡುತ್ತೇವೆ ಎಂಬುದಾಗಿ ತಾವು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಇನ್ನೆಷ್ಟು ದಿವಸಗಳಲ್ಲಿ ಇದನ್ನು ರಿಲಾಕ್ಸ್ ಮಾಡುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಹೋದ ವರ್ಷವೇ ಅದನ್ನು ತೀರ್ಮಾನ ಮಾಡಿದ್ದೇವೆ. ಆದರೆ ಈ **class** I ಮತ್ತು class II ಇವರ ರಿಕ್ರೂಟ್‌ಮೆಂಟ್ ರೂಲ್ಸಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾಯಿತು. ಈ ಇನ್‌ಸರ್ವೀಸಿನಲ್ಲಿರತಕ್ಕವರಿಗೆ ಅನುಕೂಲ ಮಾಡತಕ್ಕ ಬಗ್ಗೆ ಹೇಗೆ ರೂಲ್ಸನ್ನು ಬದಲಾವಣೆ ಮಾಡಬೇಕೆಂಬ ವಿಚಾರವನ್ನು ಪರಿಶೀಲಿಸಲಾಗುತ್ತಿದೆ. ಇನ್‌ಸರ್ವೀಸಿನಲ್ಲಿರತಕ್ಕವರಿಗೆ 35 ವರ್ಷ ವಯಸ್ಸಿನವರೆಗೆ ಅವಕಾಶ ಮಾಡಬೇಕೆಂಬ ಉದ್ದೇಶವಿದೆ. ಅದನ್ನು ಆದಷ್ಟು ಬೇಗ ಜಾರಿಗೆ ತರಲು ಏನೇನು ಪ್ರಯತ್ನಗಳನ್ನು ಮಾಡಬೇಕೋ ಅವನ್ನು ಮಾಡಲಾಗುತ್ತಿದೆ.

ಶ್ರೀ ಎಸ್. ಎಸ್. ಅರಕೇರಿ.—ಹಿಂದೆ ತಾವು ನೋಟೀಸ್ ಕೊಟ್ಟು ಅದರಲ್ಲಿ ಯಾರಿಗೆ ಅನುಕೂಲವಾಗಲಿಲ್ಲವೋ ಅಂಥವರಿಗೆ ಅನುಕೂಲವಾಗುವಂತೆ ಆ ಸ್ಥಾನಗಳನ್ನು ಮುಂದಕ್ಕೆ ಕ್ಯಾರಿಫಾರ್ವರ್ಡ್ ಮಾಡಲಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸಾಧ್ಯವಿಲ್ಲ.

ಶ್ರೀ ಎಂ. ನಾಗಪ್ಪ.—ತಾವು ಹೊಸದಾಗಿ ರೂಲ್ಸನ್ನು ಫ್ರೇಂ ಮಾಡಿದ ನಂತರ ಮತ್ತೆ ಹೊಸದಾಗಿ ಅದಕ್ಕೆ ಒಂದು ಕಾಂಪಿಟಿಟೀವ್ ಎಗ್ಸಾಮಿನೇಷನ್ ಹೋಲ್ಡ್ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಈ 35 ವರ್ಷಗಳ ಅವಧಿ ಎಂದು ಜಾರಿಗೆ ತರುವುದು ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲವು ತೊಂದರೆಗಳು ಬಂದು ಅದು ನಮ್ಮ ಹೈಕೋರ್ಟಿನಲ್ಲಿ ತೀರ್ಮಾನವಾಗದೆ ಈಗ ಸುಪ್ರೀಂ ಕೋರ್ಟಿನಲ್ಲಿ ಪೆಂಡಿಂಗ್ ಇದೆ. ಆದರೆ ಇದರಿಂದ ಯಾರೊಬ್ಬರಿಗೂ ತೊಂದರೆಯಾಗದಂತೆ ರೂಲ್ಸನ್ನು ಫ್ರೇಂ ಮಾಡತಕ್ಕ ಬಗ್ಗೆ ಲೀಗಲ್ ಇಲಾಖೆಗೆ ಇದನ್ನು ಕಳುಹಿಸಿದ್ದೇವೆ. ಅವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಂ. ನಾಗಪ್ಪ.—ಹಾಗಾದರೆ ಇದು ಇನ್ನೆಷ್ಟು ವರ್ಷಗಳಲ್ಲಾಗಬಹುದು ?

ಶ್ರೀ ಎಸ್. ನಿಜಲಿಂಗಪ್ಪ.—ವರ್ಷಗಳೇನೂ ಬೇಕಾಗಿಲ್ಲ. ಇದೆಲ್ಲಾ ಕೆಲವು ವಾರಗಳ ಮಾತು.

ಉಪಾಧ್ಯಕ್ಷರು :—ಅಲ್ಪಕಾಲಾವಧಿ ಪ್ರಶ್ನೆಗಳ ವೇಳೆ ಮುಗಿಯಿತು.

QUESTION FOR ANSWER ON THE DAY

(but not taken up)

Procurement and Consumer Price of Foodgrains

315. Sri C. M. S. SASTRY (Chickmagalur).—

Will the Minister for Food and Civil Supplies be pleased to state :—

(*a*) whether they are aware of the huge difference between procurement price and consumer price of foodgrains ;

(*b*) the reasons for the difference ;

(*c*) whether the Government intend doing away with this compulsory procurement policy in view of providing incentive to the growers ?

A.—Sri B. D. JATTI (Minister for Food and Civil Supplies).—

(*a*) No. The costing of foodgrains is made on a "No-profit-No-Loss" basis.

(*b*) Does not arise in view of reply to clause (*a*).

(*c*) No.

NOTICE OF ADJOURNMENT MOTION BY SRI S. BANGARAPPA

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ನಾನು ತಮಗೊಂದು ಅಡ್ಜರ್ನ್‌ಮೆಂಟ್ ಮೋಷನ್ನಿನ ನೋಟೀಸನ್ನು ಕೊಟ್ಟಿದ್ದೆನು. ಅದು ಏನೆಂದರೆ ಸೊರಬಾ ತಾಲ್ಲೂಕ್ ಕೈಸೋಡಿ ಗ್ರಾಮದಲ್ಲಿ ಇತ್ತೀಚೆಗೆ ಬೆಂಕಿ ಬಿದ್ದು ಅಲ್ಲಿ 43 ಮನೆಗಳು ಸುಟ್ಟುಹೋಗಿವೆ. ಸುಮಾರು 500 ಕ್ವಿಂಟಾಲಿನಿಂದ ಒಂದು ಸಾವಿರ ಕ್ವಿಂಟಾಲಿನವರೆಗೂ ಬತ್ತ ಸುಟ್ಟು ಹೋಗಿದೆ. ಆ ಗ್ರಾಮದ ಜನರು ನಿರ್ಗತಿಕರಾಗಿದ್ದಾರೆ. ಅವರಿಗೆ ಈ ದಿವಸ ವಸತಿಗೂ ಅನುಕೂಲವಿಲ್ಲ—ತಿನ್ನಲಿಕ್ಕೂ ಇಲ್ಲ. ಹೀಗಾಗಿದೆ. ಅಲ್ಲಿನ ಸ್ಥಳೀಯ ಅಧಿಕಾರಿಗಳು ಇಲ್ಲಿಯತನಕ ಅವರಿಗೆ ಯಾವ ಒಂದು ಪರಿಹಾರವನ್ನೂ ಕೂಡ ಒದಗಿಸಿಲ್ಲ. ನಾನು ಆ ಉದ್ದೇಶದಿಂದ ಈ ನಿಲುವಳಿ ಸೂಚನೆಯನ್ನು ತಮ್ಮ ಕಡೆಗೆ ಕೊಟ್ಟಿದ್ದೆ. ಅದಕ್ಕಾಗಿ ತಾವು ಆ ಸುಟ್ಟು ಹೋಗಿರತಕ್ಕ ಕೈಶೋಡಿ ಗ್ರಾಮಕ್ಕೆ ಯಾವರೀತಿ ಪರಿಹಾರವನ್ನು ಒದಗಿಸಬೇಕು ಎಂಬುದನ್ನು ಕುರಿತು ಚರ್ಚೆ ಮಾಡುವುದಕ್ಕಾಗಿ ಅವಕಾಶ ಮಾಡಿಕೊಡಬೇಕಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. DEPUTY SPEAKER.—The member has also given a notice to call the attention. It has been admitted. There is no need to discuss on this. He may refer the points when we take up the demands of General Administration. Therefore the consent is not given.

ಶ್ರೀ ಎಸ್. ಬಂಗಾರಪ್ಪ.—ಕೊನೆಯಪಕ್ಷ ಒಂದು ಕಾಲ್ ಅಟೆನ್ಷನ್ ನೋಟೀಸಿಗಾದರೂ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು :—ಅದನ್ನು ಮಾಡೋಣ.

NOTICE OF BRANCH OF PRIVILEGE BY SRI M. NAGAPPA

† ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ಅಧ್ಯಕ್ಷರೇ, ನಾನು ರೂಲ್—178 ರ ಪ್ರಕಾರ ಒಂದು ಬ್ರಿಚ್ ಆಫ್ ಪ್ರಿವಿಲೇಜ್ ಮೋಷನ್ನನ್ನು ತಮಗೆ ಕಳುಹಿಸಿದ್ದೆ. ಅದು ಏನೆಂದರೆ :- ನಾನು ತಾ|| 26-2-1968 ರಲ್ಲಿ ಕಂಬೈಂಡ್ ಕಾಂಪಿಟೇಟೀವ್ ಎಗ್ಜಾಮಿನೇಷನ್ ಫಾರ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳ ವಿಚಾರವನ್ನು ಕುರಿತು ಒಂದು ಷಾರ್ಟ್ ನೋಟೀಸನ್ನು ಕಳುಹಿಸಿದ್ದೆ. ಇದೇ ವಿಷಯವನ್ನು ಕುರಿತು ಮೇಲ್ಮನೆಯ ಕಾಂಗ್ರೆಸ್ ಸದಸ್ಯರೊಬ್ಬರು ಅವರೊಂದು ಪ್ರಶ್ನೆಯನ್ನು ತಾ|| 27-2-1968 ರಲ್ಲಿ ಕಳುಹಿಸಿದ್ದಾರೆ ಎಂಬುದಾಗಿ ನನಗೆ ತಿಳಿದು ಬರುತ್ತದೆ. ಅವರು ಕಳುಹಿಸಿದ್ದು ಫೆಬ್ರವರಿ 27ರಲ್ಲಿ. ಆ ಮೇಲ್ಮನೆಯ ಕಾಂಗ್ರೆಸ್ ಸದಸ್ಯರು ಕಳುಹಿಸಿದ್ದ ಪ್ರಶ್ನೆಗೆ ಸರ್ಕಾರದವರು ಉತ್ತರವನ್ನು ಮೇಲ್ಮನೆಯಲ್ಲಿ ತಾ|| 20-3-1968 ರಲ್ಲಿ ಕೊಟ್ಟಿದ್ದಾರೆ. ನಾನು ಕಳುಹಿಸಿದ್ದ ಪ್ರಶ್ನೆಗೆ ಈ ದಿವಸ ಮಾತ್ರ ಉತ್ತರವನ್ನು ಒದಗಿಸಿದ್ದಾರೆ. ಇದಕ್ಕೆ ಉತ್ತರವನ್ನು ಒಂದು ಸೌಜನ್ಯತೆ ದೃಷ್ಟಿಯಿಂದ ಕೆಳಮನೆಗೆ ಮೊದಲು ಒದಗಿಸಬೇಕಾಗಿತ್ತು. ಅದರಲ್ಲೂ ನಾನು ಕಳುಹಿಸಿದ್ದುದು ಷಾರ್ಟ್ ನೋಟೀಸ್ ಕೊಶ್ಚನ್. ಆರ್ಡಿನರಿ ಕೊಶ್ಚನ್‌ಗಳಿಗಿಂತ ಮೊದಲು ಆದಷ್ಟು ಬೇಗ 5-10 ದಿನಗಳಲ್ಲಿ ಉತ್ತರವನ್ನು ಒದಗಿಸಬೇಕಾಗಿತ್ತು. ಇದಕ್ಕೆಲ್ಲಾ ಸಾಕಷ್ಟು ನಿಯಮಗಳನ್ನು ಮಾಡಲಾಗಿದೆ. ಅಷ್ಟೆಲ್ಲಾ ನೇಮಗಳಿದ್ದರೂ ಒಂದು ದುರುದ್ದೇಶದಿಂದ ನನ್ನ ಪ್ರಶ್ನೆಗೆ ಮೊದಲು ಉತ್ತರವನ್ನು ಒದಗಿಸದೆ ಕಾಂಗ್ರೆಸ್ ಸದಸ್ಯರು ಕಳುಹಿಸಿದ್ದ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಇವರ ಉದ್ದೇಶ ಏನೆಂದರೆ ವಿರೋಧ ಪಕ್ಷದವರು ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ, ಸಾರ್ವಜನಿಕರ ಹಿತವನ್ನು ರಕ್ಷಣೆ ಮಾಡುತ್ತಿಲ್ಲ ಎಂದು ಜನತೆಯಲ್ಲಿ ಕೆಟ್ಟ ಅಭಿಪ್ರಾಯ ಹುಟ್ಟಿಸಲೆಂದು. ಹಾಗೂ ಕಾಂಗ್ರೆಸ್ ಸದಸ್ಯರು ನಿಷ್ಠೆಯಿಂದ ಮಾಡುತ್ತಿದ್ದಾರೆ ಎಂಬುದನ್ನು ತೋರಿಸಲು ಹೀಗೆ ಮಾಡಿದ್ದಾರೆ......

Mr. DEPUTY SPEAKER.—I have understood it. There is no need to explain.

ಶ್ರೀ ಎಂ. ನಾಗಪ್ಪ.—ಅಧ್ಯಕ್ಷರೇ, ಇದರ ಪ್ರಾಮುಖ್ಯತೆ ಎಷ್ಟಿದೆ ಎಂಬುದನ್ನು ತಾವೂ ಬಲ್ಲಿರಿ. ನಾವು ಇಲ್ಲಿ ನೇರವಾಗಿ ಜನತಾಪಕ್ಷದಿಂದ ಆರಿಸಿ ಬಂದವರು. ಸರ್ಕಾರದವರು ಈ ಸಭೆಗೆ ಪ್ರಥಮತಃ ತಮ್ಮ ಒಂದು ಪಾಲಿಸಿ ವಿಚಾರವನ್ನಾಗಲೀ ಅಥವಾ ಬಜೆಟ್‌ನ್ನಾಗಲೀ ಮಂಡಿಸಬೇಕಾಗಿದೆ. ಈ ಮನೆಯಲ್ಲಿ ಪ್ರಶ್ನೋತ್ತರಗಳ ಕಾಲ ಒಂದು ಗಂಟೆಗೆ ಪ್ರಾರಂಭವಾದರೆ, ಮೇಲ್ಮನೆಯಲ್ಲಿ ಪ್ರಶ್ನೋತ್ತರಗಳ ಕಾಲ ಎರಡೂಕಾಲು ಗಂಟೆಗೆ ಪ್ರಾರಂಭವಾಗುತ್ತದೆ. ಇಲ್ಲಿ ಪಾಸಾದ ಎಲ್ಲ ಖಾಯಿದೆಗಳನ್ನೂ ಮೇಲ್ಮನೆಗೆ ಕಳುಹಿಸಲಾಗುತ್ತದೆ. ಅಲ್ಲಿ ಅವರು ಅದನ್ನು ಒಪ್ಪದಿದ್ದರೆ ಅದನ್ನು ನಾವು ಇಲ್ಲಿ ಪಾಸ್ ಮಾಡತಕ್ಕ ಅಧಿಕಾರ ನಮಗಿದೆ. ಹೀಗಿರುವಾಗ ನಾನು ಮೊದಲು ಪ್ರಶ್ನೆಯನ್ನು ಕಳುಹಿಸಿದ್ದರೂ ಅದಕ್ಕೆ ಉತ್ತರವನ್ನು ಒದಗಿಸದೆ ನನ್ನ ಪ್ರಶ್ನೆಯನ್ನು ಸಪ್ರೆಸ್‌ಮಾಡಿ ಕಾಂಗ್ರೆಸ್ ಸದಸ್ಯರ ಪ್ರಶ್ನೆಗೆ ಮೊದಲು ಉತ್ತರವನ್ನು ಕೊಡಲಾಗಿದೆ. ಅಷ್ಟೇ ಅಲ್ಲ ರೂಲ್ 194 ರ ಪ್ರಕಾರ ನಮಗಿರತಕ್ಕ ಒಂದು ವಾಕ್ ಸ್ವಾತಂತ್ರ್ಯವನ್ನೂ ಕೂಡ ಪ್ರತ್ಯಕ್ಷವಾಗಿ ಹಾಗೂ ಅಪ್ರತ್ಯಕ್ಷವಾಗಿ ಮೊಟಕು ಮಾಡಿದ್ದಾರೆ. ನೇಮಗಳನ್ನು ಉಲ್ಲಂಘನೆ ಮಾಡಿದ್ದಾರೆ. ರೂಲ್ 170 ಮತ್ತು ರೂಲ್ 180ರ ಪ್ರಕಾರ ನಾನು ಕೊಟ್ಟಂಥ ನೋಟೀಸನ್ನು ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಬಯಸುತ್ತೇನೆ. ಅದು ಈ ರೀತಿ ಇದೆ :

10.00 A. M.

I may be permitted to raise the question of breach of privilege against the Hon'ble Chief Minister of Mysore, for the reasons stated below:—

I have sent a notice of Short question, by post on 26-2-1968, regarding the relaxation of the age of the Government employees to appear for the combined competitive examination for recruitment to the post of Gazetted Probationers (Class I & II) in the Mysore State Civil Service during 1968.

I learnt that such a question has been put one of the Congress Members of the Legislative Council on 27-2-1968.

I am told that the Hon'ble Chief Minister was pleased to reply the question put by the Congress M. L. C. on the floor of the Legislative Council on 20-3-1968; whereas his Government has not cared to send a reply to my question which is more or less of a similar nature; even to this date despite a notice under Rule 312 that has deen given by me. The reasons for withholding reply to my question are obvious and the only inferences that can be drawn are as under: —

(i) To gain favouratism to the Congress organisation with such a malafide acts and omissions

(ii) And to defame and disrepute, directly or indirectly the elected members of this august House generally and in particular the members of the Opposition; thereby the Hon'ble Chief minister has committed the breach of privilege of this august House (Legislative Assembly) neglecting to answer the said question earlier than to the Legislative Council, because it is evident that always this House has a preferential rights over the Legislative Council in respect of placing policy matters and answering questions and introducing budgets and financial Bills as per the mandatory provisions of the constitution, established precedents and customs prevaling, generally in Indian Parliaments and House of Commons. Besides, I have sent a question earlier to the question sent by the Hon'ble Member of the Legislative Council.

Secondlly the Government is expected to reply to the Short Notice question as early as possible, so that it should not assume the character of the starred or unstarred question. In this particular case, the Government has failed to reply, even after three weeks. So the question could not get the character of a short notice question due to the negligence and indifferent attitude of the Government. Thereby the Government has committed breach of my privilege to get a reply in a short period as per rules framed. And my purpose of putting question is denied purposely delaying and wilfully withholding tho reply.

Hence in the circumstances aforesaid the breach of privilege consttiutes in the following manner :

(1) Indignity offered to character and proceedings of the Assembly ;

(2) Indignity offered to Members of this Assembly in connection with the performance of their duties ;

(3) Utterly disregarded the freedom of speech *i.e.* (asking a short notice question) and proceedings in the Assembly.

I therefore request the Honourable Speaker to give consent to beg the leave of the House to refer this matter to the Committee of privleges to punish the honourable Chief Minister since the matter, which has arisen in this sitting, requires the intervention of this august House, as it is a specific recent occurrence.

† SRI S. R. KANTHI (Minister for Law and Parlimentry Affairs).—Sir, the Hon'ble Member has given `notice under rule 178. Before you give your ruling, I wish to submit that the Hon'ble Member is not entitled to open his mouth in this House unless the Chair is satisfied that there is a *prima facie* case made out. I will read the relevant portion :

> "Provided further that the Speakr may if he is satisfied about the urgency of the matter allow a question of privilege to be raised at any time during the course of the sitting after the disposal of the question."

From this it is evident that the Chair has to be satisfied that there is urgency of the matter. Since the Chair has not said anything in this matter and the Chair is going to give a ruling, I submit humbly to the Chair that the Hon'ble Member was not entitled to open his mouth so far as the breach of privilege is concerned.

My friend Mr. Nagappa is not entitled to raise this question of privilege.

SRI H. SIDDAVEERAPPA (Harihar).—How can the Chair know about the urgency unless we open our mouth and explain ? Can we show by signs ?

Sri S. R. KANTHI.—It means he cannot raise the question before the Chair is convinced about the urgency of the matter. Then only the Chair will call upon the Member to state his case. The Chair has not yet done that and Sri Nagappa was not entitled to raise the question since the Chair is not convinced about the *prima facie* breach of privilege.

Mr. Nagappa has raised this question because the Chief Minister has not answered his short notice question. I ask him to read Rule 48 which is very clear. It says :

> "If the Minster concerned agrees to reply, such question shall be answered on the date to be indicated by the Minister."

That is why I say there is question of breach of privilege. Mr. Nagappa is not entitled to raise the question of privilege in this House because Rule 48 is quite clear, because the question relates to the fact to which the Chief Minister must agree to answer the question as such He has quoted Rule 194 which is irrelevant and I do not know whether the subject matter he has raised and what he has re adout just now constitutes a breach of privilege or a motion. He has written a long text which is not a motion at all because it contains arguments. So there is no motion and what he has read cannot be considered as a motion because it contains arguments. A motion must not have any arguments He is not entitled to raise this question unless the Chair allows him to do so. That is my point. Under Rule 48 the Chief Minister alone has to decide when he is going to give the answer.

Mr. DEPUTY SPEAKER.—I have heard the member as also the Minister for Parliamentary Affairs. I will now give my ruling.

Sri M. Nagappa gave notice of the Short Notice Question on 29th February 1968 and it is learnt that the notice by the member of the Council was given a day earlier, though this House is not concerned with the proceedings of the other House. It is, therefore, not correct to say that Sri Nagappa had given notice of the question earlier to the question given notice of by the member of the Council.

From a perusal of the two questions tabled in the two Houses it could be seen that there is a slight difference in the two questions though in substance they relate to the same subject matter, namely, relaxation of age limit for Government employees appearing for the competitive examainations.

The hon. member Sri Nagappa has also dealt with the question of the preferential rights of this House over the other House. While this may be true in respect of certain financial, matters it is not mandatory in respect of answering of questions as each House is governed by its own rules of procedure.

For these reasons, I hold that there is no breach of privilege and I do not give my consent for raising it.

Members' Representations

† Sri K. H. PATIL (Gadag).—I have one more submission to make. We have sent many questions and they have not at all been answered by Government. It is stated that answers to many questions have been sent by Government and they are in your Secretariat. I have no grouse against the Secretariat of this Legislature. I would like you to satisfy yourself whether Government have supplied the replies to the questions within the stipulated time and in cases where they have not been able to supply the answers in time whether they have asked for extension of time. It is with some purpose that a time limit has been fixed under the rules for Government to supply answers to questions. The idea is to see that by taking longer time the answers to questions are not manipulated. It is the privilege of this House to see that replies to questions are not manipulated by Government.

Then the second point I want to sumbit is this. Just now the Chief Minister has made out a case that anybody contravening a rule will be called "ದೇಶದ್ರೋಹಿ" or "ಸಮಾಜದ್ರೋಹಿ". May I in turn call this Government as *Samajadrohi* ? The entire Ministry headed by this Chief Minister is *Samajadrohi*. I am appealing to you to see whether the Government have complied with the rules.

Mr. DEPUTY SPEAKER.—The Hon'ble Member Sri Patil was not present yesterday when I said that the Government have sent answers and we have received sufficient answers. I am thinking of putting up at the rate of 20 or 30 questions per day.

Sri S. R. KANTHI.—May I state that the questions tabled so far are 974 and the answers given are 474 and answers pending with the Legislature Secretariat are 184 ?

Sri K. H. PATIL.—I would like to know whether Government have sent the answers within the stipulated time.

Sri S. R. KANTHI.—Questions within 15 days are 202 and questions which have crossed 15 days time for which we have requested for time are 150. None of them is more than one month old.

ಶ್ರೀ ಎಚ್. ಸಿದ್ಧವೀರಪ್ಪ.—ಕೆಲವರ ಪ್ರಶ್ನೆಗಳು ಬೆಳಕಿಗೇ ಬರುವುದಿಲ್ಲ. ಮುಖ್ಯವಾಗಿ ಶ್ರೀಮಾನ್ ಕೆ. ಎಚ್. ಪಾಟೀಲ್ ಅವರದ್ದು ಮತ್ತು ನನ್ನವು ಬೆಳಕಿಗೇ ಬರುತ್ತಿಲ್ಲ. ಈ ಬಗ್ಗೆ ನಾನು ಕೇಳುವುದನ್ನೇ ಬಿಟ್ಟುಬಿಟ್ಟಿದ್ದೇನೆ.

CALLING ATTENTION TO A MATTER OF URGENT PUBLIC IMPORTANCE

Sri DIGAMBARA RAO B. KALMANKAR (Aland).—I call the attention of the Minister for Revenue and Forests to the fire accident at Savaleshwar village in Aland Taluk.

Sri G. B. SHANKAR RAO (Deputy Minister for Revenue).—A fire accident occurred in Harijanwada at Savaleshwar village, Aland Taluk, Gulbarga District, at 10 A.M. on the 20th February 1968. The fire started in the hut of one Smt. Ratnavva when she had gone out to the field for labour. The grand-daughter of Smt. Ratnavva who was cooking in the hut went outside without extinguishing the fire in the hearth. This fire spread to the hut and also to the adjacent huts, which were all destroyed. One person lost 4 sheep and another person lost two sheep in the accident. Four persons in all suffered a total estimated loss of Rs. 1,000.

The Block Development Officer, Aland, has sanctioned immediate cash relief of Rs. 120 in all to the four sufferers. The amount has already been paid to the victims. The Block Development Officer has also been instructed to grant some monetary help to the sufferers out of Block funds for the purchase of sheep and also to take steps to grant permanent relief to rehabilitate the four families.

The Assistant Commissioner, Gulbarga, has also been instructed to take immediate necessary action to render relief to the sufferers.

BUDGET ESTIMATES FOR 1968-69—DEMANDS FOR GRANTS

Demand Nos. 1, 3, 5, 14, 16, 24, 34, 35, 36, 40, 41, 44, 52 and 54

(Debate Continued)

[MR. CHAIRMAN (SRI S. D. KOTHAVALE) in the Chair.]

Sri SIDDIAH KASHIMATH (Shirahatti).—I will commence my speech.

Mr. CHAIRMAN.—How much time will the Hon'ble Minister for Finance require for the reply ?

Sri RAMAKRISHNA HEGDE (Minister for Finance and Planning).—The Deputy Minister for Industries will also reply. We require at the minimum two hours.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, 11 ಗಂಟೆಯವರೆಗೆ ಎಷ್ಟು ಜನರಿಗೆ ಭಾಗವಹಿಸಲಿಕ್ಕೆ ಸಾಧ್ಯವಿದೆಯೋ ಅಲ್ಲಿಯವರೆಗೆ ನಡೆಸಿ ನಂತರ ಒಂದು ಗಂಟೆಯ ವರೆಗೆ ಉತ್ತರ ಕೊಡಬಹುದು.

Sri RAMAKRISHNA HEGDE.—No clarifications, Sir.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿನ್ನೆಯ ದಿವಸ ಈ ಮನೆಯಲ್ಲಿ ಮಾತನಾಡಿ ತಿಳಿಸಿದ್ದೇವೆ. ಇವತ್ತಿನ ದಿವಸ ನಿಮಗೆ ಅದನ್ನು ಬದಲಾಯಿಸಬೇಕೆಂದಿದ್ದರೆ, ನಿಮಗೆ ಬಹುಮತ ಇದೆ, ಮಾಡಬಹುದು, ಸಂತೋಷ ಸ್ವಾಮಿ.

Mr. CHAIRMAN.—If the Hon'ble Members can be satisfied with the extension of time by half-an-hour, I am doing it. The Finance Minister may begin reply at 11 O'clock. From the list furnished, I see a number of members desiring to speak. Even if most of them are given five to ten minutes each, I do not know whether the time will be sufficient to fulfil the requests of all. We shall try to accommodate as many as possible till 11 O'Clock. Let the Members be short and brief. Let the debate by Members conclude at 11 A.M.

Sri B. V. MAGAVI (Haveri).—There are a few members who want to talk on this demand. More than an hour has been spent on procedural wrangle. Kindly take note of that also.

(*Sri Siddiah Kashimath was standing*)

Mr. CHAIRMAN.—Sri Banakar will take only five minutes. I shall call next Mr. Siddiah Kashimath ; let him have some patience.

†**ಶ್ರೀ ಮಹದೇವ್ ಜಿ. ಬಣಕಾರ್** (ಬ್ಯಾಡಗಿ).—ಮಾನ್ಯ ಸಭಾಪತಿಯವರೇ, ಈ ದಿವಸ ಕೈಗಾರಿಕೆಗೆ ಸಂಬಂಧಪಟ್ಟ ಇಟ್ಟಿರತಕ್ಕಂಥಹ ಡಿಮ್ಯಾಂಡನ್ನು ನಾನು ಬಲವಾಗಿ ವಿರೋಧಿಸುತ್ತಾ, ಕೆಲವು ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ. ನಮ್ಮ ಆರ್ಥಿಕ ಮಂತ್ರಿಗಳು ಒಳ್ಳೆಯ ಬಣ್ಣದ ಚಿಟ್ಟೆಯೋಪಾದಿಯಲ್ಲಿರತಕ್ಕ ಮುದ್ರಿತ ಪ್ರತಿಗಳನ್ನು ನಮ್ಮ ಎದುರಿಗೆ ಇಟ್ಟು ಯಾವುದೋ ಒಂದು ಕಣ್ಣು ಒರೆಸತಕ್ಕ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಪರದೇಶಗಳಿಗೆ ಇವರು ಹೋಗುವುದರಿಂದ ಇಲ್ಲಿ ಆಗತಕ್ಕ ಪ್ರಯೋಜನಗಳು ಏನು? ಮೊನ್ನೆ ಇವರು ಪರದೇಶಗಳಿಗೆ ಹೋಗಿ ಪರ್ಯಟನ ಮಾಡಿಕೊಂಡು ಬಂದಿದ್ದಾರೆ. ಇಲ್ಲಿ ನಮ್ಮ ದೇಶದಲ್ಲಿರತಕ್ಕ ಎಲ್ಲಾ ಔದ್ಯೋಗಿಕ ಕೇಂದ್ರಗಳನ್ನು ಸ್ಮಶಾನ ಸದೃಶ್ಯದಲ್ಲಿದ್ದಾಗ, ಅವುಗಳನ್ನೆಲ್ಲಾ ಸುಧಾರಿಸುವುದು ಬಿಟ್ಟು, ಅವುಗಳಿಗೆ ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳದೆ, ನೇರವಾಗಿ ಪರದೇಶದ ಪರ್ಯಟನೆ ಮಾಡತಕ್ಕದ್ದು ಯಾವ ಉದ್ದೇಶದಿಂದ? ಇದು ಇವರ ವೈಯಕ್ತಿಕ ಉದ್ದೇಶದಿಂದಲೇ ಅಥವಾ ದೇಶದ ಹಿತದೃಷ್ಟಿಯ ಉದ್ದೇಶವೇ ಎಂಬುದು ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ. ಜೊತೆಗೆ ಕೇಂದ್ರ ಸರ್ಕಾರದವರ ಅನುಮತಿ ಪಡೆಯದೆ, ಅವರ ಒಪ್ಪಿಗೆ ಇಲ್ಲದೆ, ರಾಜ್ಯ ಸರ್ಕಾರಗಳು ನೇರವಾಗಿ ಪರದೇಶದವರೊಡನೆ ಯಾವುದೇ ರೀತಿಯ ಕಾರ್ಯಕ್ರಮವನ್ನಾಗಲಿ, ವ್ಯವಹಾರವನ್ನಾಗಲಿ, ಮಾಡುವುದಕ್ಕೆ ಬರುವುದಿಲ್ಲವೆಂಬ ವಿಧಿ ಇದ್ದರೂ ಅವುಗಳನ್ನೆಲ್ಲಾ ಕಡೆಗಣಿಸಿ ಪರದೇಶಕ್ಕೆ ಹೋಗಿರುವುದು ಏಕೆ, ಯಾವ ಕಾರಣಕ್ಕಾಗಿ ಎಂದು ಅರ್ಥವಾಗುತ್ತಿಲ್ಲ. ಹಿಂದೆ ನಮ್ಮ ರಾಜ್ಯದ ಔದ್ಯೋಗಿಕ ಪ್ರಗತಿಗೋಸ್ಕರ, ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಯವರು ಕಲ್ಕತ್ತಾ, ಬೊಂಬಾಯಿ ಮತ್ತು ಇತರ ದೊಡ್ಡ ದೊಡ್ಡ ಪಟ್ಟಣಗಳಿಗೆ ಹೋಗಿ ಕೈಗಾರಿಕೋದ್ಯಮಿಗಳನ್ನು ಬರಮಾಡಿಕೊಳ್ಳುತ್ತೇವೆಂದು ಮಾತನ್ನು ಕೊಟ್ಟಿದ್ದಾರೆ. ಈವರೆಗೆ ನಮ್ಮ ರಾಜ್ಯದಲ್ಲಿ ಎಷ್ಟು ಜನ ಕೈಗಾರಿಕೋದ್ಯಮಿಗಳು ಮುಂದೆ ಬಂದಿದ್ದಾರೆ, ಎಷ್ಟು ಜನರು ಲೈಸನ್ಸ್ ಕೇಳಿದ್ದಾರೆ, ಎಷ್ಟು ಜನರಿಗೆ ಬಂಡವಾಳ ಕೊಟ್ಟಿದ್ದಾರೆ, ಎಷ್ಟು ಜನ ಕೋರಿದ್ದಾರೆ, ಎನ್ನತಕ್ಕ ಒಂದು ವೈಟ್ ಪೇಪರ್ ಈ ಸಭೆಯ ಮುಂದಿಡದೆ ಕೇವಲ ಇವರು ಹೊರಗಿನವರ ಮೋಹಕ್ಕಾಗಿ, ಆಕರ್ಷಣೆಯನ್ನು ಜನತೆಗೆ ತೋರಿಸಿ, ನಮಗೆ ಬಲವಾದ ಅನ್ಯಾಯವನ್ನು ಈ ದೃಷ್ಟಿಯಲ್ಲಿ ಮಾಡುತ್ತಿದ್ದಾರೆ. ಜೊತೆಗೆ ಇವರು ಪರದೇಶಕ್ಕೆ ಹೋಗಿದ್ದಾಗ ಹೊನಲುಲು ಎಂಬ ಒಂದು ನಡುಗಡ್ಡೆ ಊರು ಇದೆ. ಇವರು ರೋಮಿಗೆ ಹೋಗುವವರು ಬೈರೂಟಾಗಿ ಅಲ್ಲಿಗೆ ಹೋಗಿದ್ದಾರೆ. ಅಲ್ಲಿ ಏನು ಕೈಗಾರಿಕೆ ಇದೆ? ಅದು ಕೇವಲ ಅಂತರರಾಷ್ಟ್ರೀಯ ಕಳ್ಳ ಸಾಗಾಣಿಕೆಯ ಕೇಂದ್ರವಾಗಿದೆ. ಅದೇ ರೀತಿ ಹಾಂಗ್‌ಕಾಂಗ್ ಬ್ರಿಟಿಷರ ವಸಾಹತು. ಅದು ಕೂಡ ಕಳ್ಳ ಸಾಗಾಣಿಕೆಯ ಕೇಂದ್ರವಾಗಿರುತ್ತದೆ. ಇವರು ಅಲ್ಲಿಗೆ ಹೋಗಿದ್ದು ಆಲೋಚನೆ ಮಾಡಿದರೆ ಇವರಿಗೆ ಕೈಗಾರಿಕೆಯ ಬಗ್ಗೆ ಯಾವ ರೀತಿಯ ಅಭಿಪ್ರಾಯ ಇದೆ ಎಂದು ತಿಳಿಯುತ್ತದೆ. ಹೊನಲುಲು ಕೇವಲ ಮದುವೆ ಆದ ಮೇಲೆ ಯಾರಾದರೂ ಹನಿಮೂನಿಗೆ ಹೋಗತಕ್ಕಂತಹ ಪ್ರದೇಶವಾಗಿದೆ. ಅಲ್ಲಿ ಒಂದು ಸೋಡಾ ಫ್ಯಾಕ್ಟರಿ ಕೂಡ ಇಲ್ಲದಂತಹ ಪ್ರದೇಶ.

(ಶ್ರೀ ಮಹದೇವ್ ಜಿ. ಬಣಕಾರ್)

ಅಲ್ಲಿ ಅವರು ಹೋಗಿ ಏನು ಮಾಡಿದರು ಎಂಬುದರ ಬಗ್ಗೆ ಒಂದು ಸಣ್ಣ ಪದ್ಯವನ್ನು ಬರೆದಿದ್ದೇನೆ. ಅದನ್ನು ಓದುತ್ತೇನೆ :

ಓ ಅರ್ಥ ಮಂತ್ರಿ :

ಜೊನಲೂಲ ಹೊನ್ನಹೊಗೆ ಹಡಗಿನಲಿ ಪಯಣಿಸುತ
ದಿಕ್ ಕನ್ಯೆಯರ ರನ್ನಗೆನ್ನೆಯೊಳವಿತ
ಮಧುಪಾನ ಸೇವಿಸುತ,

ಸೂರ್ಯರಶ್ಮಿಯ ಸ್ನಾನದಾನಂದವನು ಉಂಡ
ಓ ಅರ್ಥ ಮಂತ್ರಿ,
ನೀ ಬರಿಯ ಕಂತ್ರಿ.

ಮುಂದಾದ ಮುಖದಲ್ಲಿ ಮುಗುಳನಗೆ ಸೂಸಿ
ಹಾಳು ಮಾಡಿದಿ ನಮ್ಮ ಹಣದ ರಾಶಿ,
ಬರುವಾಗ ನಮಗೆಲ್ಲ ಏನೇನು ತಂದಿ ?
ಏನಿತ್ತೊ ಅದನ್ನೆಲ್ಲಾ ಒಬ್ಬನೇ ತಿಂದಿ !!

ಈ ರೀತಿಯಾಗಿ ಪರದೇಶಕ್ಕೆ ಹೋಗಿ ಮಾಡಿದ್ದಾರೆ. ಅದರ ಜೊತೆಯಲ್ಲಿ ಇಲ್ಲಿ ಇರತಕ್ಕಂತಹ ಕೈಗಾರಿಕೆಗಳ ಪ್ರಗತಿಯನ್ನು ಸಾಧಿಸಲು, ಎಲ್ಲಿ ಇವರು ಹಣವನ್ನು ಹಾಕಿದ್ದಾರೆ, ಅಲ್ಲಿ ಅದರ ಪ್ರಗತಿಗೆ ಸಾಕಷ್ಟು ಪ್ರಯತ್ನವನ್ನು ಮಾಡುತ್ತಿಲ್ಲ. ಮಂಡ್ಯಾ ಪೇಪರ್ ಮಿಲ್ಸ್, ಎಂ.ಎಸ್.ಕೆ. ಮಿಲ್‌ಗಳು ಸಾಕಷ್ಟು ಪ್ರಗತಿಯನ್ನು ತೋರಿಸುತ್ತವೆಯೇ ? ಇಷ್ಟಲ್ಲದೆ, ಭದ್ರಾವತಿ ಕಾರ್ಖಾನೆ ಏನಾಗಿದೆ ಎಂದು ಮಾನ್ಯ ಸಿದ್ಧವೀರಪ್ಪನವರು ಸವಿಸ್ತಾರವಾಗಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಔದ್ಯೋಗಿಕ ಪ್ರಗತಿಯನ್ನು ಸಾಧಿಸುತ್ತೇವೆ, ಒಂದು ಏಕಚಕ್ರಾಧಿಪತ್ಯವನ್ನು ಮಾಡುತ್ತೇವೆಂದು ಹೊರಟಿದ್ದಾರೆ. ಇಂದು ಒಂದು ಉದಾಹರಣೆಯನ್ನು ಕೊಡುತ್ತೇನೆ. ಜಿ. ವೀರಪ್ಪ ಎನ್ನತಕ್ಕಂತವರು ಮೈಸೂರು ಸ್ಟೇಟಿನ ವ್ಯವಹಾರದಲ್ಲಿ ಕೈಹಾಕಿದ್ದಾರೆ. ಅವರು ಯಾರೆಂದರೆ ಗಾಂಜೀ ವೀರಪ್ಪನವರ ಮಕ್ಕಳು. ಅವರು ಮೂವತ್ತಾರು ಲೈಸೆನ್ಸ್‌ಗೆ ಅರ್ಜಿ ಹಾಕಿದ್ದಾರೆ. ಇವರು ಚೈನಾ ಕ್ಲೇ, ಅಯರ್ನ್ ಓರ್ ಇರತಕ್ಕ ಭಾಗವನ್ನು ಕೇಳಿದ್ದಾರೆ. ಎಷ್ಟು ಕೇಳಿದ್ದಾರೆಂದರೆ, ಬಹಳ ಕಡಿಮೆ ಪ್ರಮಾಣವನ್ನು ಕೇಳಿದ್ದಾರೆ. ಒಟ್ಟು 6 056 ಎಕರೆ 39 ಗುಂಟೆ ಭೂಮಿ ಗಣಿ ಭಾಗವನ್ನು ಕೇಳಿದ್ದಾರೆ. ಇವರು ಸಾಮಾನ್ಯ ಜನರ ವಿಚಾರದಲ್ಲಿ ಆಸಕ್ತಿಯನ್ನು ವಹಿಸುತ್ತಾರೆಯೇ ಎಂದು ನಾನು ಕೇಳುತ್ತೇನೆ. ಇವರುಗಳಿಗೆ ಪತ್ರವ್ಯವಹಾರ ಮಾಡಿದ ತಾರೀಕು ಎಲ್ಲಾ ನನ್ನ ಹತ್ತಿರ ಇದೆ. ದಯವಿಟ್ಟು ತಾವು ನೋಡಬಹುದು. ಇವರು ದೇಶವನ್ನು ಹಗಲು ದರೋಡೆ ಮಾಡತಕ್ಕ ಜನರನ್ನು ಬದುಕಿಸುವುದಕ್ಕೆ ಹೋಗಿ, ಕೇವಲ ವೈಯಕ್ತಿಕ ಹಿತಸಾಧನೆಯನ್ನು ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ. ಇಂಡಸ್ಟ್ರೀಸ್ ಮತ್ತು ಆರ್ಥಿಕ, ಇವೆರಡನ್ನೂ ಒಂದು ಕಡೆ ಸೇರಿಸಿದ್ದು ಇನ್ನೂ ಅಪಾಯಕರ.

10–30 A.M.

ಈ ಸ್ವಜನ ಪಕ್ಷಪಾತ ಮಾಡುವುದು ಅಷ್ಟು ನಿಲ್ಲಬೇಕು. ಬೆಂಗಳೂರಿನಲ್ಲಿಯೇ ಎಲ್ಲ ಉದ್ದಿಮೆಗಳು ಇರುವುದನ್ನು ವಿಕೇಂದ್ರೀಕರಣ ಮಾಡಬೇಕು. ಇಂದು ಇಲ್ಲಿ ಉತ್ಪಾದನೆಯಾಗುವ ಕರೆಂಟನ್ನು ಬೇರೆಯವರಿಗೆ ಕೊಡುತ್ತಾ ಇದ್ದೀರಿ. ಯಾರಿಗೂ ಕೊಡದೇ ಹೋದರೂ ಚಿಂತೆಯಿಲ್ಲ ಅದನ್ನು ಸಂಪೂರ್ಣವಾಗಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳಿಗೆ ಕೊಡಬೇಕು. ನಮ್ಮ ದೇಶದ ಉದ್ಯಮಕ್ಕೆ ಪ್ರೋತ್ಸಾಹ ಕೊಡಬೇಕು. ಸಣ್ಣ ಕಾರು ತಯಾರ್ಮಾಡುವ ಬಗ್ಗೆ ಅನೇಕ ದಿವಸದಿಂದ ಹೇಳುತ್ತಾ ಇದ್ದಾರೆ. ನಾನು ಸಣ್ಣವನಾಗಿದ್ದಾಗಿನಿಂದ ಇದನ್ನು ಕೇಳುತ್ತಿದ್ದೇನೆ. ಈ ಉದ್ದಿಮೆ ಪ್ರಾರಂಭ ಮಾಡುವುದರಲ್ಲಿ ಇವರ ಯಾವ ದೊಡ್ಡತನ ಕಂಡುಬರುವುದಿಲ್ಲ. ಒಟ್ಟಿನಲ್ಲಿ ಅರ್ಥ ಮಂತ್ರಿಗಳು ದುಂದು ವೆಚ್ಚ ಮಾಡುವುದು ಸ್ವಜನ ಪಕ್ಷಪಾತ ಮಾಡುವುದನ್ನು ಬಿಟ್ಟು ರಾಷ್ಟ್ರದ

ಅಭಿವೃದ್ಧಿಗೋಸ್ಕರ ಅವರಿಗೆ ಇರತಕ್ಕ ಎರಡು ಪದವಿಗಳಲ್ಲಿ ಅರ್ಥ ಮಂತ್ರಿಯ ಪದವಿಯನ್ನಾಗಲೀ ಇಲ್ಲವೇ ಔದ್ಯೋಗಿಕ ಶಾಖೆಯನ್ನಾಗಲೀ ಒಂದನ್ನು ಮಾತ್ರ ಬಿಟ್ಟು ಕೊಟ್ಟು ದೇಶದ ಪ್ರಗತಿಗಾಗಿ ಹೆಣಗಾಡಬೇಕು. ಇಷ್ಟು ಹೇಳಿ ನನ್ನ ಮಾತು ಮುಕ್ತಾಯಗೊಳಿಸುತ್ತೇನೆ.

† Sri B. V. MAGAVI.—Mr. Speaker, Sir, within the short time at my disposal, I shall endeavour to deal with the points, though many in number, briefly. I have found that the Finance Minister has been realistic in his approach to the problems and exhibited a great zeal in improving the matters in a short period. The Government certainly deserve congratulation for their new ventures in industries as Copper Company in Chitradurga, Integrated Aluminium Project near Belgaum, Nitrogenous Fertiliser Project near Mangalore and expansion of Iron and Steel Works at Bhadravathi.

I wish to make a few observations regarding the public sector industries. In a socialistic pattern, we advocate for state running the industries so that the exchequer would get an additional revenue which otherwise would have gone to the private sector and enriched the capitalists. In other words, it is an additional source of revenue without any tax incidence. Generally, such public sector industries are on a large scale, requiring huge capital and get the Government protection. They almost enjoy a quasi monopolistic position and with the Government protection they should be able to make fantastic profits. But unfortunately the state of affairs are otherwise. It is ridiculous that the public sector industries are yielding a return of 6 per cent despite the quasi monopolistic position enjoyed by them. They should be able to make much more profit than what they are able to make at present. The Finance Minister has expressed his intention to take a number of measures to improve the plight of these industries. He has expressed the intention of the Government to appoint an Industrial Commissioner to give proper timely guidance to the industries. The problems of each industry are different and they are to be solved in their own way. Only a person having some experience in that particular industry alone can guide them.

While this is the case, who is this Industrial Commissioner? Is he the omniscient super man who can guide all the industries in the State? I am inclined to feel that our Finance Minister has a great affinity for these Commissioners. When he was a Minister for Development, he created a post of a Development Commissioner for the State. There are already sufficient number of officers—the Assistant Directors for Industries, Deputy Director of Industries, Joint Director of Industries and Director of Industries and Managing Directors of various State enterprises. Sufficient delay is already being caused in processing the proposal by the present unending bureaucratic set up and resultant red tape. I am afraid, this Industrial Commission is going to be a super structure on the present tower of bureaucracy and shall be another gold embroidered red tape. It has been our experience in administration that creation of more posts cause more delay than turn out any good

(Sri B. V. MAGAVI)

work. Instead, I would propose that we should have directors for each pattern of industry who would specialise in the problems of that particular industry, for example, Director in charge of Textile Industries, Director in charge of Sugar Mills so that he would be in a position to know something about the industry and spend some time for its improvement. One person cannot be an omniscient super man who has knowledge of each and every industry. Further more, some of these Directors appointed to be in charge of a particular industry should not act as mere forwarding agents but they should behave as travel agents who would cater to the entire needs of the entrepreneurs, including acquisition of land, procurement of raw materials, supply of power, import of required machinery, and procurement of finances through Government, if necessary. He should be able to cater to all the needs of these entrepreneurs not pointing out to Bangalore or elsewhere.

The other day I met a person in Hubli who belongs to a leading industrial concern in the country. He told me, he has been posted to Hubli with a car and sufficient money for the last two years. His job is only to move the papers in all offices, in Revenue offices regarding acquisition of land and so many other offices where all these formalities are to be completed. This is not the state of affairs that they should create. It is really appreciable that the Chief Minister and the Finance Minister visiting important industrial cities of the country to invite industrialists to start industries in our State assuring them of all help. What happens next ? An application takes years in our Government to get itself completely processed. A businessman is very calculative and he has got to be. They cannot afford to run their industries as we run our Government. Supposing an entrepreneur has invested Rs. 3 crores ; his interest would be Rs. 10,000 per day and at the rate the papers move in our offices at present, half of his investment would have been swallowed by the interest itself.

The next question is about management. The prime factor is that they are not manned by the right personnel. The regular Government officers who manage these industries have not got business acumen. It is said that the entrepreneurs are born and not made. To manage an industry, it requires certain amount of talent, tact, intelligence and business acumen which is peculiar to businessmen alone. Realising this, the Government of India created an Industrial Management pool as early as 1958 to attract business executives to take up management of public sector industries. They offered good salary and good scale of pay for those business executives. It is quite essential that such a business management pool should be established in our State. I do not think our regular officers have that business acumen. This is a technical job and it requires certain amount of experience.

Next the question of these archaic textile mills. To cite a few of them they are M.S.K. Mills of Gulberga, K.C.T. Mills of Hubli. I wish to warn the Hon. Minister that these have become rodents to the Exchequer. There was lot of criticism regarding M.S.K. Mills and mention was made about the report of the Committee appointed by the Central Government that these mills should not be revived. I know what the report contains.

It has recommended scrapping of all textile mills in which the machinery is old and outdated and which are impossible of economic running even after modernisation. It is suggested that if necessary, new mills may be set up in their place in order to provide employment to the workers. So, before allotting any more money on the textile mills, what I would appeal to the Government is that they should get this examined. If it is possible to do it, it is better that the present outmoded machinery is sold in the open market and by whatever is realised the Government can give not only 46 lakhs but even a crore of rupees to see that the industry is set up in an efficient manner and worked out to the satisfaction of the Government and the people.

I do not wish to get into details because I have no time. I shall merely state the points.

Finances of the State. It is still green in my memory when this young man took over finance portfolio he assured this House that he would put the State on sound financial footing. I can say with pride that he has stuck to his words. If others have congratulated him for having presented balanced budget. I congratulate him for having steered the state from the brink of bankruptcy to a State of economic stability. He has taken a number of bold steps in improving the State revenues by scrapping prohibition etc. Now I would call him to show the same courage in mopping up the rural resources.

Several members on the other side observed that the burden of taxes is more on the rural sector than the urban sector. I would like to point out that the latest estimate places the amount that would be pumped into the economy at Rs. 1,500 crores. The total tax payment of the urban sector is Rs. 670 crores as against the rural sector which is just 109 crores. Even the taxation on agriculture including land revenue is only 0.9 per cent as against industry which is 15 per cent. A sizable contribution to the funds for economic development must come from the country's main economic occupation is almost a natural law and to philosophise on this is futile.

I have many things to say about the sales tax but since there is no time, I shall close my speech.

† ಶ್ರೀ ಸಿದ್ದಯ್ಯ ಕಾಶಿಮಠ.—ಅಧ್ಯಕ್ಷರೇ ಮೈಸೂರು ರಾಜ್ಯದಲ್ಲಿ ದೊಡ್ಡದಾದ ಉದ್ಯಮಗಳನ್ನು ಸ್ಥಾಪಿಸಿ ಬೆಳೆಸಬೇಕು ಎನ್ನುವ ದೃಷ್ಟಿಯಿಂದ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಹಾಗೂ ಅರ್ಥಿಕ ಮಂತ್ರಿಗಳು ನಮ್ಮ ದೇಶದಲ್ಲಿರುವ ಮುಂಬೈ, ಕಲ್ಕತ್ತ, ಮುಂತಾದ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದರು. ಅಷ್ಟೇ ಅಲ್ಲದೆ ಆರ್ಥಿಕ ಮಂತ್ರಿಗಳು ಪರದೇಶಗಳಲ್ಲಿ ಸಹ ಸಂಚಾರ ಮಾಡಿ ಅನುಭವವನ್ನು ಪಡೆದುಕೊಂಡು ಬಂದಿದ್ದಾರೆ. ಇದು ಬಹಳ ಸ್ತುತ್ಯವಾದುದು ಎಂದು

(ಶ್ರೀ ಸಿದ್ದಯ್ಯ ಕಾಶೀಮಠ)

ನಾನು ಹೇಳಬಯಸುತ್ತೇನೆ. ಈಗ ಇದ್ದಂಥ ದೊಡ್ಡ ಉದ್ಯಮಗಳಿಗೆ ಹೆಚ್ಚಿನದಾದ ಆಸಕ್ತಿಯನ್ನು ತೋರಿಸದೆ ಅವು ಹಾಳಾಗತಕ್ಕ ಪರಿಸ್ಥಿತಿ ಇದೆ. ಅದರ ಬಗ್ಗೆ ಸಾಕಷ್ಟು ನಿಗಾ ವಹಿಸಬೇಕು. ಗುಲ್ಬರ್ಗದಲ್ಲಿರುವ ಮಿಲ್ ಮತ್ತು ಹುಬ್ಬಳ್ಳಿಯಲ್ಲಿರುವ ಮಿಲ್, ಇವುಗಳ ಜೀರ್ಣೋದ್ಧಾರಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಬೃಹದಾಕಾರವಾದ ಉದ್ಯಮಗಳನ್ನು ಸ್ಥಾಪಿಸುವಾಗ ಅವುಗಳನ್ನು ದೊಡ್ಡ ನಗರಗಳಲ್ಲಿ ಸ್ಥಾಪಿಸದೆ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಬೇಕು ಎನ್ನುವುದನ್ನು ನಾನು ಒತ್ತಿ ಹೇಳುತ್ತೇನೆ.

ಗ್ರಾಮೀಣ ಪ್ರದೇಶದಲ್ಲಿ ಉದ್ಯಮಗಳು ಬೆಳೆಯಬೇಕಾದರೆ ತಾಲ್ಲೂಕು ಮಟ್ಟದಲ್ಲಿ ಒಂದು ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿ ಎಂದು ಮಾಡಿಕೊಂಡಿದ್ದೀರಿ. ಅದರ ಮುಖಾಂತರ ಸರ್ಕಾರದವರು ಸಣ್ಣ ಕೈಗಾರಿಕೆಗಳಿಗೆ ಸಹಾಯ ಕೊಡುತ್ತಿದ್ದಾರೆ. ತಾಲ್ಲೂಕಿನಲ್ಲಿ ಒಬ್ಬ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರಿದ್ದಾರೆ. ಅವರು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂದು ನೋಡಬೇಕು. ತಾಲ್ಲೂಕು ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿಗಳಿಗೆ ಎಕ್ಸ್‌ಟೆನ್‌ಷನ್ ಆಫೀಸರನ್ನು ಸೆಕ್ರೆಟರಿಯಾಗಿ ಇಟ್ಟು ಅವರ ಮುಖಾಂತರ ಹಣವನ್ನು ಸಣ್ಣ ಉದ್ದಿಮೆಗಳಿಗೆ ಒದಗಿಸಿದರೆ ಹೆಚ್ಚಿನ ರೀತಿಯಲ್ಲಿ ಅವು ಬೆಳೆದು ನಮ್ಮಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸುವುದಕ್ಕೆ ಸಹಾಯವಾಗುತ್ತದೆ. ನಿನ್ನೆ ತಾನೇ ಮಾನ್ಯ ಉಪಮಂತ್ರಿಗಳು ಮಾತನಾಡುತ್ತಾ ನಮ್ಮ ರಾಜ್ಯದಲ್ಲಿ ಸಾಕಷ್ಟು ರೀತಿಯಿಂದ ಕಚ್ಚಾ ಮಾಲುಗಳನ್ನು ಒದಗಿಸುವುದಕ್ಕೆ ಪ್ರಯತ್ನ ನಡೆಸಿದ್ದೇವೆ, ಅದರಂತೆ ಮುಂದುವರಿಸುತ್ತೇವೆಂದು ಹೇಳಿದರು. ನಮ್ಮ ರಾಜ್ಯಕ್ಕೆ ಕೆಲವು ಉದ್ದಿಮೆಗಳಿಗೆ ಲೈಸೆನ್ಸ್ ಕೊಡಲು ಒತ್ತಾಯ ಪಡಿಸಿದರೂ ಕೇಂದ್ರ ಸರ್ಕಾರದವರು ಅದನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದು ವಿಷಾದದ ಸಂಗತಿ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ರೋಲರ್ ಫ್ಲೋರ್‌ಮಿಲ್ಲುಗಳನ್ನು [illegible]-10 ಲಕ್ಷ ರೂಪಾಯಿಗಳ ಬಂಡವಾಳ ಹಾಕಿ 14 ಮಿಲ್‌ಗಳನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ಅವುಗಳಿಗೆ ಲೈಸೆನ್ಸ್ ಕೊಡದೆ ಇರುವುದನ್ನು ನೋಡಿ ಬಹಳ ಕೆಟ್ಟತನದ ಪರಿಸ್ಥಿತಿ ಉಂಟುಮಾಡಿದ ಹಾಗೆ ಆಗಿದೆ. ಈ ಮಿಲ್ಲುಗಳಿಗೆ ರೊಕ್ಕ ಖರ್ಚು ಮಾಡಿದ್ದರೂ ಅವು ನಡೆಯದೆ ಇರುವುದರಿಂದ ತೊಂದರೆಯಾಗಿದೆ. ರಾಜ್ಯ ಸರ್ಕಾರದವರು ಈಗ ಸ್ಥಾಪಿತವಾಗಿರುವ ಮಿಲ್ಲುಗಳಿಗಾದರೂ ಕೇಂದ್ರ ಸರ್ಕಾರದವರು ಲೈಸೆನ್ಸ್ ಕೊಡುವಂತೆ ಒತ್ತಾಯ ಮಾಡಿ ಲೈಸೆನ್ಸ್ ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಇಂಡಸ್ಟ್ರಿಯಲ್ ಎಸ್ಟೇಟ್‌ಗಳ ಬಗ್ಗೆ ನಾವು ಎಲ್ಲ ಕಡೆಗೂ ನೋಡಿಕೊಂಡು ಬಂದಿದ್ದೇವೆ. ಕಟ್ಟಡಗಳನ್ನು ಕಟ್ಟಿದ್ದು, ಮೆಷಿನರಿ ಬಂದಿದ್ದು, ಕಚ್ಚಾ ಮಾಲು ಇಲ್ಲದೆ ಹಾಗೆಯೇ ನಿಂತಿರತಕ್ಕ ಪರಿಸ್ಥಿತಿ ಇದೆ. ಹೀಗೆ ಆಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ವ್ಯವಸಾಯಕ್ಕೆ ಬೇಕಾದ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ತಯಾರಿಸುವ ಒಂದೇ ಒಂದು ಕಾರ್ಖಾನೆ ನಮ್ಮ ದೇಶದಲ್ಲಿದೆ. ಈಗ ಆಧುನಿಕ ರೀತಿಯಿಂದ ವ್ಯವಸಾಯವನ್ನು ಮುಂದುವರಿಸಬೇಕಾಗಿದೆ ಎಂದು ಎಲ್ಲರೂ ಹೇಳತಕ್ಕದಾಗಿದೆ. ಅದಕ್ಕೆ ಬೇಕಾದ ಉಪಕರಣಗಳನ್ನು ಯಾವ ರೀತಿ ಒದಗಿಸತಕ್ಕದು ಎಂದು ನೋಡಬೇಕಾಗಿದೆ. ಆದ್ದರಿಂದ ಟ್ರಾಕ್ಟರ್ ತಯಾರು ಮಾಡಲಿಕ್ಕೆ ಮತ್ತು ಅದಕ್ಕೆ ಬೇಕಾದ ಸ್ಪೇರ್ ಪಾರ್ಟ್ಸ್ ತಯಾರು ಮಾಡಲಿಕ್ಕೆ ಒಂದು ಉದ್ದಿಮೆಯನ್ನು ಸರ್ಕಾರದ ವತಿಯಿಂದ ಸ್ಥಾಪನೆ ಮಾಡಬೇಕು. ಹಾಸನದಲ್ಲಿರುವ ಕೈಗಾರಿಕೆಯನ್ನು ರಿವೈವ್ ಮಾಡಬೇಕು ಮತ್ತು ಸಾಕಷ್ಟು ರೀತಿಯಿಂದ ಹೆಚ್ಚು ಹೆಚ್ಚು ವ್ಯವಸಾಯದ ಉಪಕರಣಗಳನ್ನು ತಯಾರು ಮಾಡಿ ಜನರಿಗೆ ತಾಲ್ಲೂಕು ಇಂಡಸ್ಟ್ರೀಸ್ ಮಾರ್ಕೆಟಿಂಗ್ ಸೊಸೈಟಿಗಳ ಮೂಲಕ ಮಾರುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಎನ್. ಜಿ. ಇ. ಎಫ್. ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇಷ್ಟು ದೊಡ್ಡದಾದ ಕಾರ್ಖಾನೆಯಲ್ಲಿ ಎಷ್ಟೋ ಸಾಮಾನುಗಳು ತಯಾರಾಗಿ ಮಾರಾಟವಾಗುತ್ತಿದ್ದರೂ ನಷ್ಟದಲ್ಲಿ ಅದು ನಡೆಯುತ್ತಿದೆ ಎಂದರೆ ಅದರಲ್ಲಿ ಏನೋ ಲೋಪದೋಷವಿದೆ ಎಂದು ಅರ್ಥವಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ಎಷ್ಟೋ ಕಾರ್ಖಾನೆಗಳು ನಮ್ಮಲ್ಲಿವೆ. ಅವುಗಳ ಮೇಲ್ವಿಚಾರಣೆ ಮಾಡುವುದಕ್ಕೆ ಒಂದು ಕಮಿಟಿಯನ್ನು ಮಾಡಿ ಆ ಕಮಿಟಿಯ ಮುಖಾಂತರ ಅಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೋದರೆ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ, ಉದ್ದಿಮೆಗಳು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಎಕ್ಸೈಜ್ ವಿಷಯ. ಈಗ ಟೆಂಡರ್ ಕರೆಯುವ ಪದ್ಧತಿ ಇದೆ. ತಾಲ್ಲೂಕು ಮಟ್ಟದಲ್ಲಿ ಕರೆಯುವುದರಿಂದ ಯಾರೋ ಸಾಹುಕಾರರಿಗೆ ಅವಕಾಶಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಅಂಗಡಿ ಮೂಲಕ ಲಿಲಾವು ಮಾಡುವುದನ್ನು ಜಾರಿಗೆ ತರಬೇಕು. ಕಂಟ್ರಾಕ್ಟರುಗಳಿಂದ ಬರುವ ಹಣ ಬಹಳವಾಗಿದೆ, ಅದನ್ನು ವಸೂಲು ಮಾಡುವುದಕ್ಕೆ ಯಾವ ರೀತಿಯಾದರೂ ಕ್ರಮ ತೆಗೆದುಕೊಂಡು ವಸೂಲು ಮಾಡಬೇಕು, ಹಣ ಬರುವುದಕ್ಕೆ ಏರ್ಪಾಡು ಮಾಡಬೇಕು.

ಉಪಾಧ್ಯಾಯರ ಪೆನ್‌ಷನ್ ಬಗ್ಗೆ ಹೇಳುವುದಾದರೆ ಈಗ ರಿಟೈರ್ ಆದವರಿಗೆ ಸಕಾಲದಲ್ಲಿ ಪೆನ್‌ಷನ್ ಸಿಕ್ಕುತ್ತಿಲ್ಲ. ಆದುದರಿಂದ 3 ತಿಂಗಳ ಮೊದಲೇ ಸೂಕ್ತ ಕ್ರಮ ಕೈಕೊಂಡು ನಿವೃತ್ತರಾದ ಕೂಡಲೇ ನಿವೃತ್ತಿ ವೇತನ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಹಾಗೆ ಮಾಡದಿದ್ದರೆ ಬೇರೆ ಆಧಾರವಿಲ್ಲದಿರುವವರಿಗೆ ಬಹಳ ತೊಂದರೆಯಾಗುತ್ತದೆ. ವೃದ್ಧರಿಗೆ ಪೆನ್‌ಷನ್ ಕೊಡಲು ಮಾನ್ಯ ಮಂತ್ರಿಗಳು ಏರ್ಪಾಡು ಮಾಡಿರುವುದು ಬಹಳ ಸೂಕ್ತವಾಗಿದೆ, ನಿಶ್ಯಕ್ತರಾಗಿರುವವರಿಗೆ ಇದರಿಂದ ಬಹಳ ಸಹಾಯವಾಗುತ್ತದೆ. ಇದನ್ನು ಇನ್ನೂ ಅರ್ಹರಾಗಿರುವ ಹೆಚ್ಚು ಜನರಿಗೆ ದೊರೆಯುವಂತೆ ಅವಕಾಶಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮ್ಯೂಸಿಯಂ ವಿಚಾರ. ಹಿಂದಿದ್ದ ಮ್ಯೂಸಿಯಂ ಈಗ ಹೆಚ್ಚಾಗಿ ಅಭಿವೃದ್ಧಿಯಾಗುವಂತೆ ಕ್ರಮ ತೆಗೆದುಕೊಂಡಿಲ್ಲ, ಅದು ಸರಿಯಾದ ರೀತಿಯಲ್ಲಿಲ್ಲ, ಹೊರ ದೇಶಗಳವರು ಬಹಳ ಜನರು ಬರುವುದರಿಂದ ಅದು ಈಗಿನ ಕಾಲಕ್ಕೆ ತಕ್ಕಂತೆ ಸ್ವಚ್ಛವಾಗಿ ಬೇಕಾದ ವಸ್ತುಗಳಿಂದ ಕೂಡಿರುವ ಹಾಗೆ ನೋಡಿಕೊಳ್ಳಬೇಕು, ಉದ್ಯಮಗಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕು ಎಂದು ಸಲಹೆ ಮಾಡಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Sri ABDUL KHUDDUS ANWAR (Bhadravathi).—Sir, while speaking on Demand No. 25—Industries, I beg to make a few points on the working of the Mysore Iron and Steel Works. As you know, Sir, this industry is a long-standing one which is giving the best production. Up to 1964, it was giving a profit of about Rs. 1½ crores and after 1964 up to the operation of the new steel plant, it is losing to the maximum extent. This year, according to the figures, the profits are only about 40 lakhs. In the new plant, the cost of steel comes to about Rs. 560 per ton while the selling rate is only Rs. 550 or 560. Thereby we are losing very heavily. In the course of his foreign tour, the Hon'ble Finance Minister would have seen in Germany that the Beseimer Process is the best process for manufacturing Special steel and our old open hearth furnace is very good for Manufacture of Special Steel. There they have furnces of 5 to 15 ton capacity wherein very good special steel can be produced but our people are continuing the old method. On account of lack of encouragement to the local officers there is discontent prevailing in the ranks of officers and labourers. There are a large number of officers who have absolutely no work. A civil engineer is posted to the mines and a Metallurgist is posted to the civil works. No proper posting is made. Consequently, people are discontented. Over and above that, we are thinking of appointing a Production Manager. Now there are already about 15 Managers for a small concern like this. Rourkela, Bhilai and Durgapur Steel factories have not got such a large number of Managers. Paper is tossed from one table to another. They have absolutely no work and no responsibility is fixed to them. Over and above that they are thinking of appointing a foreign technician on a salary of Rs. 25,000 per month. In addition to this, you have the S.Q.C., I.D.C. and the IBCON. The works are

(SRI ABDUL KHUDDUS ANWAR)

entrusted to outside agencies like the Mysore Construction and Madras Construction companies. It has become a heaven for these contractors who are swindling money like anything. During the last two years you have appointed 250 engineers in the works and particularly in the Rolling Mill Section. Whereas when I was working there I was managing the entire section single-handed, now you have got 4 Superintendents to manage it—one for finishing section, one for Roll-Turning Shop section, one for production section and one for furnace section. At this rate it will not be possible to get more profits and in course of time if you do not make alloy steel, by the end of 1969 the works have to be closed, it will become a heaven for these contractors. You have given the steel casting work to contractors on a contract basis and they are making money, rather swindling money. If you give on contract basis, there will be more rejections and these rejections and losses are not recorded therefore total staff which is in league with the Contractor will result in rejections without the knowledge of the superiors and thus get a higher percentage OK and thus swindle money. In a recent case a plate-sleeper Contractor by adopting this tacties has made ten thousand rupees by this fraud for which he is only fined Rs. 350. He is not black listed as some of the officers are partners in this deal resulting in heavy loss. If this work is given on piecework basis to the employes respectively, crores of rupees can be saved. May I kindly suggest to the Hon'ble Minister to do away with the S.Q.C., the I.D.C. and contract basis. The I.D.C. is taking 2 per cent commission and it has no capacity at all and about Rs. 10 lakhs are wasted on the S.Q.C. which is a quality control organisation and which is there since two and a half years. What is happening is that there is no encouragement to the local people. The IBCON people come and give suggestions. May I therefore suggest to the Hon'ble Minister to do away with the services of IBCON, I.D.C. and entrust this work to the local people in a department of our own consisting of an young and Talent. You may appoint more people and give sufficient work to our engineers who have got good talents. What is happening is that all our experts who have come from foreign countries are not given proper work and they are made to sit idle because they say that IDC is there over them to supervise them. The Hon'ble Member Sri Siddaveerappa has correctely pointed out the position existing there; he did not get the information from local officers. I am sure I can give him any information because I have worked in the industry for 30 years and know the ins and outs very well. I know how much money every contractor has made, who are the officers who can do work and so on and so forth. When the Hon'ble Industries Minister who is young and energetic and who has returned from his foreign tour, comes to Bhadravathi, I shall give him valuable suggestions which, I hope, he well take due note of and implement.

11-00 A.M.

ಶ್ರೀ ಎ. ಪಿ. ಅಪ್ಪಣ್ಣ (ಕೈಗಾರಿಕಾ ಶಾಖೆಯ ಉಪಮಂತ್ರಿಗಳು).—ಮಾನ್ಯ ಸಭಾಪತಿಗಳೆ, ದೊಡ್ಡ ಕೈಗಾರಿಕೆ ಮತ್ತು ಇತರ ಬಾಬುಗಳ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳು ಉತ್ತರಿಸುವುದರಿಂದ ನನಗೆ ಸಂಬಂಧಪಟ್ಟ ಸಣ್ಣ ಕೈಗಾರಿಕೆ, ಖನಿಜ ವಿಭಾಗ ಮತ್ತು ಖಾದಿ ಬೋರ್ಡಿನ ವಿಚಾರವಾಗಿ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಇಡಲು ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರು ತಮ್ಮ ಖೋತಾ ನಿರ್ಣಯಗಳ ಮೂಲಕ ಮತ್ತು ಈ ಸಭೆಯಲ್ಲಿ ಭಾಷಣ ಮಾಡುವಂತಹ ಸಂದರ್ಭಗಳಲ್ಲಿ ಎತ್ತಿದಂತಹ ಕೆಲವು ವಿಚಾರಗಳ ಆಧಾರದಮೇಲೆ ನನ್ನ ಈ ಉತ್ತರವನ್ನು ಈ ಮಾನ್ಯ ಸಭೆಗೆ ಕೊಡಲು ಇಚ್ಛೆಪಟ್ಟಿದ್ದೇನೆ. ಈ ಉತ್ತರವನ್ನು ಕೊಡುವಂತಹ ಸಂದರ್ಭನಲ್ಲಿ ಕಳೆದ ಬಜೆಟ್ ಅಧಿವೇಶನದಲ್ಲಿ ಈ ಮೈಸೂರು ರಾಜ್ಯದ ಸಣ್ಣ ಕೈಗಾರಿಕೆಗಳ ಪ್ರಗತಿಯನ್ನು ಅಂದರೆ, ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ಒಂದು ಪ್ರಗತಿಯನ್ನು ಸಾಧಿಸಿದ್ದೇವೆ ಎಂಬುದನ್ನು ಈ ಸಭೆಯ ಮುಂದೆ ಇಟ್ಟಿದ್ದೆ. ಅದನ್ನೇ ಪುನಃ ಇಲ್ಲಿ ಉಲ್ಲೇಖಿಸಲು ಇಚ್ಛೆಪಡುವುದಿಲ್ಲ, ಬದಲಾಗಿ ಕಳೆದ ಅಧಿವೇಶನದಿಂದ ಇಷ್ಟರವರೆಗೂ ಯಾವ ರೀತಿಯ ಒಂದು ಪ್ರಯತ್ನವನ್ನು ಈ ಸಣ್ಣ ಕೈಗಾರಿಕೆಯ ಕ್ಷೇತ್ರದಲ್ಲಿ ನಾವು ಮಾಡಿದ್ದೇವೆ ಎಂಬುದನ್ನು ಈ ಸಭೆಯ ಮುಂದೆ ಇಡಲು ಇಚ್ಛೆಪಟ್ಟಿದ್ದೇನೆ. ಈ ಉತ್ತರವನ್ನು ಈ ಸಭೆಯ ಮುಂದೆ ಇಡುವಂತಹ ಸಂದರ್ಭದಲ್ಲಿ ಮದರಾಸಿನಲ್ಲಾಗಲಿ, ಆಂಧ್ರದಲ್ಲಾಗಲಿ ಯಾವ ಒಂದು ಪ್ರಗತಿಯನ್ನು ಸಾಧಿಸಿದ್ದಾರೆ, ಆ ಪ್ರಗತಿಯನ್ನು ನಾವು ಮೀರಿದ್ದೇವೆ ಎಂಬ ಒಂದು ಜಂಭವನ್ನು ಇಟ್ಟುಕೊಂಡು ಮಾತನಾಡುವಂತಹ ಪ್ರಯತ್ನವನ್ನು ಮಾಡುತ್ತಾ ಇಲ್ಲ, ಅವರ ಮಟ್ಟಕ್ಕೆ ಬರಬೇಕೆಂಬ ದೃಷ್ಟಿಯಿಂದ ನಾವು ಮಾಡಿದ್ದೇವೆ ಎಂದು ಹೇಳಲು ಇಚ್ಛಿಸುತ್ತೇನೆ. 1966-67ನೇ ಇಸವಿಯಲ್ಲಿ ಇಟ್ಟಂಥ ಹಣದಲ್ಲಿ ಎಷ್ಟನ್ನು ಖರ್ಚು ಮಾಡಿದ್ದರೋ ಅದಕ್ಕಿಂತ ಹೆಚ್ಚಿನ ಪರ್ಸೆಂಟೇಜಿನಲ್ಲಿ 67-68ರಲ್ಲಿ ನಾವು ಖರ್ಚು ಮಾಡಿದ್ದೇವೆ. 1968-69ರಲ್ಲೂ ಸಹ ಅದೇ ಒಂದು ನಿಯಮವನ್ನು ಇಟ್ಟುಕೊಂಡು ಹೆಚ್ಚಿನ ಹಣವನ್ನು ಈ ಸಣ್ಣ ಕೈಗಾರಿಕೆಗಾಗಿ ಇಟ್ಟಿದ್ದು ಆಗಿದೆ. ಕಳೆದ ವರ್ಷ ಸಾಧಾರಣ 95 ಲಕ್ಷ ರೂಪಾಯಿಗಳನ್ನು ಈ ಸಣ್ಣ ಕೈಗಾರಿಕೆಯ ಅಭಿವೃದ್ಧಿಗೆ ತೆಗೆದುಕೊಂಡದ್ದು ಆಗಿದ್ದರೆ ಈ ವರ್ಷ 100 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಈ ಸಣ್ಣ ಕೈಗಾರಿಕೆಯ ಅಭಿವೃದ್ಧಿಯ ಅಂಗವಾಗಿ ಇದ್ದಂಥ ನ್ಯಾಷನಲ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಹೈರ್‌ಪರ್ಚೇಸ್ ಮೆಷಿನರಿಯನ್ನು ಮೈಸೂರು ರಾಜ್ಯದಲ್ಲಿ ಹೆಚ್ಚಿನದಾಗಿ ತೆಗೆದುಕೊಂಡು ಇಲ್ಲಿಯ ಕೈಗಾರಿಕೋದ್ಯಮಿಗಳು ಹಣವನ್ನು ಕೊಡಲು ಬಾಕಿ ಇದ್ದುದ್ದರಿಂದ 1967ನೇ ಇಸವಿಯ ಫೆಬ್ರವರಿಯಿಂದ ಹೊಸ ಹೈರ್‌ಪರ್ಚೇಸ್ ಮೆಷಿನರಿಯನ್ನು ಕೊಡುವುದಿಲ್ಲ ಎಂಬ ಒಂದು ಅಂತಕವನ್ನು ನ್ಯಾಷನಲ್ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ತಂದಿದ್ದರು. ಇದರ ವಿಚಾರವಾಗಿ ಮಾನ್ಯ ಕೈಗಾರಿಕಾ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳವರು ಸಹ ಕೇಂದ್ರ ಸರ್ಕಾರದವರೊಡನೆ ವ್ಯವಹರಿಸಿ ಈಗ ಒಂದು ತಿಂಗಳಿನಿಂದ ಆ ಒಂದು ಬ್ಯಾನ್‌ನ್ನು ಆ ಕಾರ್ಪೊರೇಷನ್‌ನವರು ಈ ರಾಜ್ಯದಿಂದ ತೆಗೆದುಹಾಕಿದ್ದಾರೆ. ಈ ರಾಜ್ಯದಲ್ಲಿ ಇರುವಂತಹ ಬೆಂಗಳೂರು ಜಿಲ್ಲೆಯನ್ನು ಮಾತ್ರ ಬಿಟ್ಟು ಬಾಕಿ ಎಲ್ಲಾ ಜಿಲ್ಲೆಗಳಿಂದಲೂ ಹೈರ್ ಪರ್ಚೇಸ್ ಮೆಷನರಿಗೆ ಅರ್ಜಿಯನ್ನು ನ್ಯಾಷನಲ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ಗೆ ಇನ್ನು ಮುಂದೆ ಕಳುಹಿಸಬಹುದು, ಅದನ್ನು ಪರಿಶೀಲನೆ ಮಾಡಿ ಅವರು ಹೈರ್ ಪರ್ಚೇಸ್ ಮೆಷಿನರಿಯನ್ನು ಕೊಡುತ್ತಾರೆ. ಆ ಒಂದು ಆದೇಶವನ್ನು ಅವರು ಕೊಟ್ಟಿದ್ದಾರೆ. ಈ ಒಂದು ಅಂಗದಿಂದ ಕಳೆದ ಒಂದು ವರ್ಷ ಪಟ್ಟಂತಹ ತೊಂದರೆಯನ್ನು ಈ ವರ್ಷ ನಿವಾರಣೆ ಮಾಡಿದ್ದೇವೆ ಎಂದು ಹೇಳಲು ಸಂತೋಷಪಟ್ಟಿದ್ದೇನೆ. ಅಲ್ಲದೇ ಈ ಸಣ್ಣ ಕೈಗಾರಿಕೆಯ ಅಭಿವೃದ್ಧಿಯ ಅಂಗವಾಗಿ ಇರುವಂತಹ ಈ ಇಂಡಸ್ಟ್ರಿಯಲ್ ಎಸ್ಟೇಟ್ ವಿಚಾರವಾಗಿ ಶ್ರೀಮಾನ್ ಸಿದ್ಧವೀರಪ್ಪನವರು ಪ್ರಶ್ನೋತ್ತರ ಕಾಲದಲ್ಲಿ ಒಂದು ಪ್ರಶ್ನೆಯನ್ನು ಕೇಳಿದರು. ಈ ರಾಜ್ಯದಲ್ಲಿ ಈ ಇಂಡಸ್ಟ್ರಿಯಲ್ ಎಸ್ಟೇಟ್ಸ್‌ನ್ನು ತೆರೆಯುವಂತಹ ಯಾವ ಒಂದು ಪಾಲಿಸಿಯನ್ನು ಇಟ್ಟುಕೊಂಡಿದ್ದೀರಿ ಅದನ್ನು ಅದರ ಅನುಭವದಿಂದ ಯಾವುದಾದರೂ ರೀತಿಯ ಬದಲಾವಣೆಯನ್ನು ಮಾಡಲಿಕ್ಕೆ ನೀವು ಯೋಚನೆ ಮಾಡಿದ್ದೀರಾ ಎಂಬ ಪ್ರಶ್ನೆಯನ್ನು ನಮ್ಮ ಮುಂದೆ ಇಟ್ಟರು. ಈ ರಾಜ್ಯದಲ್ಲಿ 3ನೇ ಪಂಚವಾರ್ಷಿಕ ಯೋಜನೆಯಲ್ಲಿ 39 ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ತೆರೆಯಬೇಕೆಂಬ ಒಂದು ತೀರ್ಮಾನವನ್ನು ಕೈಕೊಂಡಿದ್ದರು. ಅದರ ಪ್ರಕಾರ ಇಷ್ಟರವರೆಗೆ 18 ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಟ್ಟಿ ಮುಗಿಸಿದ್ದೇವೆ. ಇನ್ನು 3 ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಈಗಾಗಲೇ ಕಟ್ಟುವಂತಹ ಕೆಲಸ ನಡೆಯುತ್ತಿದೆ. ಇನ್ನು ಕೆಲವೇ ಸಮಯದಲ್ಲಿ ಪೂರ್ತಿಗೊಳ್ಳುತ್ತವೆ. ಆದ್ದರಿಂದ 39 ರ ಪೈಕಿ 29 ನ್ನು ಸ್ಥಾಪನೆಮಾಡುವಂತಹ ನಿರ್ಧಾರವನ್ನು ಕೈಕೊಂಡು ಅದನ್ನು ಕಾರ್ಯ

(ಶ್ರೀ ಎ. ಪಿ. ಅಪ್ಪಣ್ಣ)

ರೂಪಕ್ಕೆ ತಂದಿದ್ದೇವೆ. ಮುಂದೆ ಇನ್ನೂ 18 ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ತೆರೆಯಲಿಕ್ಕೆ ಹೊರಟಿರುವ ಪ್ರಶ್ನೆಯನ್ನು ನಾವು ಪರ್ಯಾಲೋಚನೆ ಮಾಡಿ ಈ ರೀತಿಯ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಈ ರಾಜ್ಯದಲ್ಲಿ ಕಟ್ಟಿದರೆ ಇದರಿಂದ ಪ್ರಯೋಜನವಾಗಲಾರದು ಎಂಬ ನಿರ್ಧಾರಕ್ಕೆ ಬಂದಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗೆ ಪ್ರೋತ್ಸಾಹ ಮಾಡಬೇಕು ಅದಕ್ಕೋಸ್ಕರ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಅಲ್ಲಿ ಕಟ್ಟಬೇಕೆಂಬ ಮಾತನ್ನು ಕೆಲವರು ಹೇಳುತ್ತಾ ಇದ್ದಾರೆ. ಆ ಭಾವನೆಯಿಂದ ಸರ್ಕಾರ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ಸ್‌ನ್ನು ಕಟ್ಟಲಿಕ್ಕೆ ಹಣವನ್ನು ಹಾಕಿ ಅದರಿಂದ ಯಾವ ರೀತಿಯ ಒಂದು ಪ್ರಯೋಜನವನ್ನು ಜನತೆ ಹೊಂದಬಹುದಾಗಿತ್ತೋ, ಸರ್ಕಾರ ಪಡೆಯಬಹುದಾಗಿತ್ತೋ, ಅದನ್ನು ಪಡೆಯಲಿಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಆ ದೃಷ್ಟಿಯಿಂದ ಇವತ್ತು ನಾವು ಮುಂದೆ ಇಂಡಸ್ಟ್ರಿಯಲ್ ಎಸ್ಟೇಟ್ಸ್‌ನ್ನು ಕಟ್ಟುವಂತಹ ಒಂದು ನಿಯಮವನ್ನು ರೂಪಿಸಿಕೊಂಡಿದ್ದೇವೆ. ಯಾವ ಗ್ರಾಮಾಂತರದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಬೇಕೋ ಅದಕ್ಕೆ ತಮ್ಮ ಅಪ್ಲಿಕೇಷನ್ ಹಾಕಿ ಕೆಲವು ಡಿಪಾಸಿಟ್ ಕೊಡುವವರೆಗೂ ಇಂಡಸ್ಟ್ರಿಯಲ್ ಎಸ್ಟೇಟ್ಸ್ ಅಲ್ಲಿ ಕಟ್ಟುವಂತಹ ಒಂದು ಯೋಚನೆಯನ್ನು ಮಾಡುವುದಿಲ್ಲ ಎಂಬುದನ್ನು ಹೇಳಲು ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ಯಾವ ರೀತಿ ಆ ಧೋರಣೆಯನ್ನು ತಳೆದಿದ್ದೀರಿ ಎಂದು ಕೇಳಬಹುದು. 3ನೇ ಪಂಚವಾರ್ಷಿಕ ಯೋಜನೆ ಕಳೆದನಂತರ ಪ್ಲಾನಿಂಗ್ ಕಮಿಷನ್‌ನವರು ಈ ಇಂಡಸ್ಟ್ರಿಯಲ್ ಎಸ್ಟೇಟ್ಸ್ ಕಟ್ಟುವುದನ್ನು ಕೈ ಬಿಡಬೇಕು, ಬದಲಾಗಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್‌ಗಾಗಿ ಪ್ಲಾಟ್ಸ್ ಕೊಡುವಂತಹ ಕ್ರಮ ಕೈಕೊಳ್ಳಬೇಕು ಎಂದು ಆದೇಶ ಕೊಟ್ಟಿದ್ದಾರೆ. ಇನ್ನು ಮುಂದೆ ಇಂಡಸ್ಟ್ರಿಯಲ್ ಎಸ್ಟೇಟ್ಸ್‌ನ್ನು ರಾಜ್ಯದಲ್ಲಿ ಕಟ್ಟಬೇಕಾದರೆ ಅದು ಬರೀ ನಮ್ಮ ಸರ್ಕಾರದ ಹಣದಿಂದ ಆಗಬೇಕು, ಕೇಂದ್ರಸರ್ಕಾರದಿಂದ ಹೆಚ್ಚಿನ ಹಣ ಅದಕ್ಕೆ ಬರುತ್ತದೆ ಎಂದು ನಿರೀಕ್ಷಿಸಲು ಅಸಾಧ್ಯ, ಆ ದೃಷ್ಟಿಯಿಂದ ಇವತ್ತು ಎಲ್ಲಾದರೂ ಇಂಡಸ್ಟ್ರಿಯಲ್ ಎಸ್ಟೇಟ್ ಕಟ್ಟಬೇಕೆಂದಾದರೆ ಅಲ್ಲಿಯ ಜನತೆ ಮತ್ತು ಅಲ್ಲಿಯ ಕೈಗಾರಿಕೋದ್ಯಮಿಗಳ ಸಹಾಯದೊಡನೆ ಏರ್ಪಡಿಸುವಂತಹ ಕಾರ್ಯವಾಗಬಹುದೇ ವಿನಾ ಒತ್ತಾಯದ ದೃಷ್ಟಿಯಿಂದಾಗಲಿ ಬೇರೆ ಕಾರಣದಿಂದಾಗಲಿ ಆಗತಕ್ಕ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಇನ್ನು ಮುಂದೆ ಈ ರಾಜ್ಯದಲಿ ಯಾವ ಭಾಗದಲ್ಲೂ ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಈಗಾಗಲೇ ಸಾಧಾರಣವಾಗಿ ಒಂದು ಕೋಟಿ 50 ಲಕ್ಷ ರೂಪಾಯಿಗಳಷ್ಟು ಹಣವನ್ನು ನಮ್ಮ ರಾಜ್ಯದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಟ್ಟಲಿಕ್ಕೆ ಹಾಕಿದ್ದೇವೆ. ಆ ಒಂದು ಕೋಟಿ 50 ಲಕ್ಷದಲ್ಲಿ ಸಾಧಾರಣವಾಗಿ 258 ಇಂಡಸ್ಟ್ರಿಯಲ್ ಷೆಡ್‌ಗಳನ್ನು ಕಟ್ಟಿದ್ದೇವೆ. ಇದರಲ್ಲಿ ಈಗ ಬರೀ 207 ಷೆಡ್ಸ್ ಕೆಲಸಮಾಡುತ್ತಾ ಇವೆ. ಬಾಕಿ ಇರುವಂಥ ಷೆಡ್‌ಗಳಲ್ಲಿ ಇನ್ನೂ ಕೆಲಸ ಶುರುವಾಗಿಲ್ಲ. ಇದನ್ನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, ಅನೇಕ ಸದಸ್ಯರುಗಳು 3ನೇ ಪಂಚವಾರ್ಷಿಕ ಯೋಜನೆಯಲ್ಲಿ 39 ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಟ್ಟುವುದರಲ್ಲಿ ಒಳಪಟ್ಟ ಸ್ಥಳದಲ್ಲಿರತಕ್ಕ ಜನರು ಅವರ ಏರಿಯಾದಲ್ಲಿಯೂ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಟ್ಟಬೇಕೆಂದು ಒತ್ತಾಯವನ್ನು ಹೇರುತ್ತಿದ್ದಾರೆ. ನಾನು ಈ ಸಭಾಸದಸ್ಯರಿಗೆ ನಿಮ್ಮ ಮೂಲಕ ಒಂದು ಮಾತನ್ನು ಹೇಳುತ್ತೇನೆ. ನಾನು ಆಗಲೇ ಹೇಳಿದಹಾಗೆ, ಎಲ್ಲಾ ಕಡೆಗಳಲ್ಲಿ ಈ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಟ್ಟುವುದಕ್ಕೆ ಬಹಳ ಸಂತೋಷ. ಆದರೆ ಅದನ್ನು ಕಟ್ಟಿದಮೇಲೆ ಅದನ್ನು ಉಪಯೋಗಿಸುವಂತಹ ಭರವಸೆಯನ್ನು ಯಾರೂ ಒತ್ತಾಯದಿಂದ ತೋರುತ್ತಾ ಇಲ್ಲ. ಸುಮ್ಮನೆ ಬಾಯಿಂದ ಆ ಭರವಸೆಯನ್ನು ಕೊಟ್ಟರೆ ಸಾಲದು. ಅದನ್ನು ಕಾರ್ಯರೂಪದಲ್ಲಿ ತೋರಿಸಬೇಕು. ಆ ರೀತಿ ಕಾರ್ಯರೂಪದಲ್ಲಿ ಭರವಸೆಕೊಟ್ಟರೆ ನನಗೆ ಬಹಳ ಸಂತೋಷ. ಆ ರೀತಿ ಮಾಡುವುದಾದರೆ ಹಳ್ಳಿಗಳಲ್ಲಿ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಮುಂದೆ ತೆರೆಯುವುದಕ್ಕೆ ನಾವು ತಯಾರು ಇದ್ದೇವೆ. ಆ ಕಡೆಯಿಂದ ಮತ್ತೆ ಬೇಕಾದಷ್ಟು ಜನರು ಬರುತ್ತಾರೆ. ನಾವು ಸಹ ಸಹಾಯ ಮಾಡುತ್ತೇವೆಂಬ ಮಾತನ್ನು ಹೇಳುತ್ತಿದ್ದೇವೆ. ಆದರೆ ನಾವು ಇದರಿಂದೇನೂ ಪ್ರಯೋಜನ ಪಡೆಯುವುದಿಲ್ಲವೆಂದು ಹೇಳಿ ಆಮೇಲೆ ಇತರರಿಗೆ ತೊಂದರೆ ಮಾಡಬಾರದು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಪಟ್ಟಣಗಳಲ್ಲಿ ಕೈಗಾರಿಕೆಗಳನ್ನು ಮಾಡುವವರಿಗೆ ಹಳ್ಳಿಗಳಲ್ಲಿ ಹೋಗಿ ಅದನ್ನು ಮಾಡಿ ಎಂಬುದಾಗಿ ಹೇಳಿ ಅವರಿಗೂ ಒಂದು ಅವಕಾಶವನ್ನು ಕಲ್ಪಿಸಿಕೊಡಿ.

ಶ್ರೀ ಎ. ಪಿ. ಅಪ್ಪಣ್ಣ.—ಪಟ್ಟಣಗಳಲ್ಲಿರುವವರು ಹಳ್ಳಿಗಳಲ್ಲ ಇಂಡಸ್ಟ್ರಿಯಲ್ ಎಸ್ಟೇಟ್ ಮಾಡುತ್ತಾರೆಂದು ಹೇಳುವುದು ಮಾನ್ಯ ಶ್ರೀ ಶಾಸ್ತ್ರಿಯವರಿಗೆ ಕನಸು. ಗುಲ್ಬರ್ಗಾದಲ್ಲಿರುವವರನ್ನು, ರಾಯಚೂರಿನಲ್ಲಿರುವವರನ್ನು, ಬೆಂಗಳೂರಿನಿಂದ 35 ಮೈಲಿಗಳ ದೂರದಲ್ಲಿರುವ ರಾಮನಗರಕ್ಕೆ ಹೋಗಿ ಅಂದರೆ ಹೇಗೆ ಹೋಗುತ್ತಾರೆ? ಇವತ್ತು ಬೆಂಗಳೂರು – ಮೈಸೂರು ರೋಡ್‌ನಲ್ಲಿರುವ ಅಡರಲ್ಲಿಯೂ ರಸ್ತೆಯ ಪಕ್ಕದಲ್ಲಿರುವ, ಆ ಸ್ಥಳದಲ್ಲಿ ಎಲ್ಲಾ ಸೌಲಭ್ಯವಿರುವ ರಾಮನಗರದಲ್ಲಿರತಕ್ಕ ಇಂಡಸ್ಟ್ರಿಯಲ್ ಷೆಡ್ಡನ್ನು ಇನ್ನೂ ಪೂರ್ತಿಯಾಗಿ ಉಪಯೋಗ ಮಾಡಲಿಲ್ಲ. 35 ಮೈಲಿಗಳ ದೂರದಲ್ಲಿರುವ ರಾಮನಗರಕ್ಕೆ ಹೋಗಿ ಅಂದರೆ ಹೋಗದೆ ಬೆಂಗಳೂರಿನಲ್ಲಿಯೇ ಇಂಡಸ್ಟ್ರಿಯಲ್ ಎಸ್ಟೇಟುಬೇಕು, ಇಂಡಸ್ಟ್ರಿಯಲ್ ಷೆಡ್ ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿಗಳಲ್ಲಿ ಮಾತ್ರಬೇಕು, ಬೇರೆ ಯಾವ ಕಡೆಯಲ್ಲಿಯೂ ಬೇಕಾಗಿಲ್ಲವೆಂಬ ಮನೋಭಾವ ಇವತ್ತಿನ ದಿವಸ ಗ್ರಾಮದಲ್ಲಿರುವವರಿಗೆ ಬಂದಿದೆ. ಪಟ್ಟಣದಲ್ಲಿರುವವರನ್ನು ಹಳ್ಳಿಗೆ ಹೋಗಿ ಎಂಬುದಾಗಿ ಬಲಾತ್ಕರಿಸುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇಂತಹ ಮನೋಭಾವನೆ ಅವರಲ್ಲಿ ಬೆಳೆಯುವುದಕ್ಕೆ ಈ ಸರ್ಕಾರದ ನೀತಿಯೇ ಕಾರಣವಾಗಿದೆಯಲ್ಲವೇ ?

ಶ್ರೀ ಎ. ಪಿ. ಅಪ್ಪಣ್ಣ.—ಆ ರೀತಿಯ ಮನೋಭಾವನೆ ಬೆಳೆಯುವುದಕ್ಕೆ ಕೆಲವು ಕಾರಣಗಳು ಉಂಟು. ಇವತ್ತು ಬೆಂಗಳೂರಿನಲ್ಲಿ ಎಲ್ಲಾ ರೀತಿಯ ಸೌಲಭ್ಯಗಳಿವೆ. ಮಕ್ಕಳಿಗೆ ಓದಲಿಕ್ಕೆ ಇಲ್ಲಿ ಶಾಲೆಗಳಿವೆ. ಬೇಕಾದಷ್ಟು ಇತರ ಸೌಕರ್ಯಗಳಿವೆ. ಹಳ್ಳಿಗಳಲ್ಲಿರುವವರಿಗೆ ಇಲ್ಲಿಯೇ ವಾಸಮಾಡ ಬೇಕೆಂಬ ಮನೋಭಾವ ಬೆಳೆದಿದೆ.

Sri G. N. PATIL (Hoovinahippargi).—Is it the Policy of the Government to encourage People who have settled down in Cities?

Sri A. P. APPANNA.—The policy of the Government is not as if that we are going to encourage people who have settled down in Cities. It is the feeling of some people that they want to come and settle down in Bangalore or Mysore or Hubli which has got to be considered.

ಈ ಮನೋಭಾವ ಬೆಳೆದಿದ್ದಕ್ಕೆ ಸರ್ಕಾರವನ್ನೇ ಆಗಲೀ, ಅಥವಾ ಇತರರನ್ನೇ ಆಗಲೀ ದೂರಿ ಪ್ರಯೋಜನವಿಲ್ಲ. ಇವತ್ತೂ ಹೇಳುತ್ತಿದ್ದೇನೆ, ಗ್ರಾಮಾಂತರ ಪ್ರದೇಶಗಳಲ್ಲಿ ಈ ಇಂಡಸ್ಟ್ರಿಯಲ್ ಎಸ್ಟೇಟನ್ನು ತೆರೆಯಬೇಕೆಂದು ಸಲಹೆ ಇಟ್ಟಲ್ಲಿ ಅದನ್ನು ಈಡೇರಿಸಲಿಕ್ಕೆ ತಯಾರು ಇದ್ದೇವೆ. ಆದರೆ ಅದನ್ನು ಕಟ್ಟಿದಮೇಲೆ ಅದು ಹಾಗೆಯೇ ಬಿದ್ದಿದ್ದು ಯಾರೂ ಉಪಯೋಗಿಸದೇ ಇರುವುದು ನಮಗೆ ಇಷ್ಟವಿಲ್ಲ. ಈ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಪ್ಲಾನಿಂಗ್ ಕಮಿಷನ್ನಿನಿಂದ ಬರುವ ಹಣದಿಂದ ಲಾಗಲೀ, ಅಥವಾ ನಮ್ಮ ಜನರು ಕೊಡುವ ಕಂದಾಯದಿಂದ ಕಟ್ಟುತ್ತೇವೆ. ಆದರೆ ಬಡ್ಡಿ ಕೊಡು ವುದಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿ ಹಣವನ್ನು ಅದರಲ್ಲಿ ಹಾಕಿ ಕಟ್ಟುವುದಕ್ಕೆ ಇಷ್ಟವಿಲ್ಲ.

ಶ್ರೀ ಸಿ. ಎಂ ಎಸ್. ಶಾಸ್ತ್ರಿ.—ತಾವು ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಮಾಡತಕ್ಕ ಕಾಲ ದಲ್ಲಿ ದೊಡ್ಡ ಪಟ್ಟಣಗಳಿಗೆ ಎಷ್ಟು ಗಮನ ಕೊಡುತ್ತೀರೋ ಅಷ್ಟೇ ಗಮನವನ್ನು ಸಣ್ಣ ಪಟ್ಟಣ ಗಳಿಗೂ ಮತ್ತು ಗ್ರಾಮಾಂತರ ಪ್ರದೇಶಗಳಿಗೂ ಕೊಡಬೇಕು. ಆ ರೀತಿಯಾಗಿ ಈಗ ನೀವು ಕೊಡುತ್ತಾ ಇಲ್ಲ. ಅದಕ್ಕೆ ಬೇಕಾದರೆ ಕೆಲವು ನಿದರ್ಶನಗಳನ್ನು ಕೊಡುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ.—ದಯವಿಟ್ಟು ಕ್ಷಮಿಸಿ. ಅಲ್ಲಿಯೂ ಕಟ್ಟಬೇಕೆಂದರೆ ಕಟ್ಟುತ್ತೇವೆ. ಈ ದೃಷ್ಟಿಯಿಂದ ಮುಂದೆ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯಲು ಇಷ್ಟವಿದ್ದರೂ ಕೂಡ ಅಷ್ಯೂರೆನ್ಸ್ ಕೊಡಲಿ, ನಾವು ತೆರೆಯುವುದಕ್ಕೆ ತಯಾರಿದ್ದೇವೆಂದು ಹೇಳು ತ್ತೇನೆ. ಆದ್ದರಿಂದಲೇ ಈ ವರ್ಷದಲ್ಲಿ 39 ಸ್ಥಳಗಳಲ್ಲಿ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕೊಡುವ ವಿಚಾರವನ್ನು ವಿನಿಮಯಮಾಡಿ ಇಂತಹ ಕಡೆಗಳಲ್ಲಿಯೇ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ತೆರೆಯ ಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಬೆಂಗಳೂರಿನಲ್ಲಿ ಇನ್ನೊಂದು 40 ಷೆಡ್ಡುಗಳ ಇಂಡಸ್ಟ್ರಿಯಲ್ ಎಸ್ಟೇಟನ್ನು ಮಾಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ. ಇದರಲ್ಲಿ ನಾವು ಶೇಕಡ 50 ರಷ್ಟು ಷೆಡ್ಡುಗಳನ್ನು ಡಿಪ್ಲೈನ್ಸ್ ಪ್ರಕಾರ ಕಟ್ಟುತ್ತೇವೆ. ಬಾಕಿ ಶೇಕಡ 50 ರಷ್ಟನ್ನು ಯಾರಾದರೂ ಕೈಗಾರಿಕೋದ್ಯಮಿಗಳು ಬಂದರೆ ಅವರವರ ಇಷ್ಟಕ್ಕೆ ಅನುಗುಣವಾದ ಪ್ರಕಾರ ಕಟ್ಟುವುದಕ್ಕೆ ತಯಾರು ಇದ್ದೇವೆ. ಕೆಲವರಿಗೆ ನಾವು ಹಾಕಿರತಕ್ಕದ್ದು 'ಎ' ಟೈಪ್ ಮತ್ತು 'ಬಿ' ಟೈಪ್ ಷೆಡ್ಡುಗಳು. ಇನ್ನು ಅವರೇ ತೆರೆಯುವ ಕೈಗಾರಿಕೆಗಳಿಗೂ ಇಂಥಾದ್ದೇ ಷೆಡ್ಡುಗಳನ್ನು

(ಶ್ರೀ ಎ. ಪಿ. ಅಪ್ಪಣ್ಣ)

ತೆರೆಯಬೇಕು ಎಂದರೆ, ಆರೀತಿ ನಿಯಮಗಳಿಗೆ ಒಳಪಟ್ಟಂತೆ ಮಾಡುವುದಕ್ಕೆ ನಾವು ತಯಾರು ಇದ್ದೇವೆ ಬೆಂಗಳೂರಿನಲ್ಲಿ ಕಟ್ಟುವ ಇಂಡಸ್ಟ್ರಿಯಲ್ ಎಸ್ಟೇಟಿಗೆ ನಾವು ಮೊದಲೇ ಅರ್ಜಿಗಳನ್ನು ತರಿಸಿಕೊಂಡು ಒಂದು ವರ್ಷಕ್ಕಾಗುವ ಡಿಪಾಜಿಟ್ ಹೊಂದಿ ಇಂಡಸ್ಟ್ರಿಯಲ್ ಎಸ್ಟೇಟನ್ನು ಒಂದು ವರ್ಷದಲ್ಲಿಯೇ ಮುಗಿಸಿಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅಲ್ಲದೆ ಬೆಳಗಾಂನಲ್ಲಿ ಈಗಾಗಲೇ ಅಲ್ಯೂಮಿನಿಯಂ ಫ್ಯಾಕ್ಟರಿ ಬರುತ್ತಾ ಇದೆ. ಅದಕ್ಕೆ ಸಂಬಂಧಪಟ್ಟಂತೆ ಒಂದು ಫಂಕ್ಷನಲ್ ಇಂಡಸ್ಟ್ರಿಯಲ್ ಎಸ್ಟೇಟನ್ನು ತೆರೆಯಬೇಕೆಂದು ತೀರ್ಮಾನವನ್ನು ಕೈಗೊಂಡು ಬೆಳಗಾಂನಲ್ಲಿ ಈಗ 6 ಷೆಡ್ಡುಗಳ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ತೆರೆಯುತ್ತಿದ್ದೇವೆ. ಹುಬ್ಬಳ್ಳಿಯಲ್ಲಿರತಕ್ಕ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿ 23 ಷೆಡ್ಡುಗಳಿದ್ದರೂ ಅವನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡಿದ್ದೇವೆ. ಅಲ್ಲಿ ಇನ್ನೂ ಬೇಡಿಕೆಗಳು ಈ ಬಗ್ಗೆ ಇರುವುದರಿಂದ ಪುನಃ ಅಲ್ಲಿ 6 ಷೆಡ್ಡುಗಳನ್ನು ತೆರೆಯಬೇಕೆಂದು ತೀರ್ಮಾನವನ್ನು ಕೈಗೊಂಡಿದ್ದೇವೆ. ಅಲ್ಲದೆ ಈ ರಾಜ್ಯದಲ್ಲಿ ಸದ್ಯಕ್ಕೆ 8 ಸ್ಥಳಗಳಲ್ಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಏರಿಯಾವನ್ನು ತೆರೆಯಬೇಕೆಂದು ತೀರ್ಮಾನಮಾಡಿದ್ದೇವೆ. ಹಾಸ್ಪೇಟ್, ಗದಗ್, ಹಾಸನ, ಮಂಡ್ಯ, ಕೊಳ್ಳೇಗಾಲ, ಕಾರವಾರ, ರಾಯಚೂರು, ಬಾಗಲಕೋಟೆ—ಈ 8 ಸ್ಥಳಗಳಲ್ಲಿಯೂ ಈ ವರ್ಷ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಏರಿಯಾವನ್ನು ತೆರೆಯಬೇಕೆಂದು ತೀರ್ಮಾನವನ್ನು ಕೈಗೊಂಡಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಚಿಕ್ಕಮಗಳೂರು ಜಿಲ್ಲೆ ಬಿಟ್ಟುಹೋಗಿದೆ. ಸುಮಾರು 10 ವರ್ಷಗಳಿಂದಲೂ ಅಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟಿಗಾಗಿ ಒಂದು ಭವ್ಯವಾದಂಥ ಕಟ್ಟಡ ಇದೆ. ಆದರೆ ಸಂಬಂಧಪಟ್ಟ ಇಲಾಖೆಯವರಿಗೆ ಆ ಜಾಗ, ಕಟ್ಟಡ ಎಲ್ಲಿದೆ ಎಂಬುದೇ ಗೊತ್ತಾಗಲಿಲ್ಲ.

Sri D. M. SIDDIAH (Beligere).—The Hon'ble Member may be requested to put questions afterwards.

ಶ್ರೀ ಎ. ಪಿ. ಅಪ್ಪಣ್ಣ.—ಅನೇಕ ಸದಸ್ಯರುಗಳು ಈ ಇಂಡಸ್ಟ್ರಿಯಲ್ ಎಸ್ಟೇಟುಗಳಲ್ಲಿ ಎಷ್ಟೋ ಜನರು ಕೈಗಾರಿಕೆಗಳನ್ನು ಮಾಡುತ್ತಿದ್ದಾರೆ. ಅವನ್ನು ಉಪಯೋಗಿಸುತ್ತಿದ್ದಾರೆ. ಇನ್ನು ಯಾರಾದರು ಮುಂದೆ ಬರುತ್ತಾರೋ ಇಲ್ಲವೋ ಗೊತ್ತಿಲ್ಲವೆಂದು ಹೇಳಿದರು. ಆದರೆ ಇವನ್ನು ಎಲ್ಲಾ ಕಡೆಗಳಗಲ್ಲಿಯೂ ತೆರೆಯುವುದಕ್ಕಾಗುವುದಿಲ್ಲ. ಕೆಲವು ನಿಯಮಗಳನ್ನು ಹೊಂದಿದ್ದರೆ ಮಾತ್ರ ಅವನ್ನು ತರಬೇಕೆಂಬ ದೃಷ್ಟಿ ಇಟ್ಟುಕೊಂಡು ಮಾಡಿದ್ದೇವೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇವನ್ನು ತೆರೆಯಬಾರದು ಎಂಬ ಧೋರಣೆಯನ್ನು ನಾವು ಹೊಂದಿಲ್ಲ. ಈಗ ಪುನಃ ಆ ವಿಚಾರವಾಗಿ ಪರ್ಯಾಲೋಚನೆಮಾಡಿ ಅವನ್ನು ಅಲ್ಲಿ ತೆರೆಯುವಂಥ ಕ್ರಮವನ್ನು ಕೈಗೊಳ್ಳುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ. ಮತ್ತು ಇಂಡಸ್ಟ್ರಿಯಲ್ ಷೆಡ್ಸ್ ಕೆಲವು ಕಡೆಗಳಲ್ಲಿರುವುದನ್ನು ಹೈರ್ ಪರ್ಚೇಜ್‌ನಲ್ಲಿ ಜನರಿಗೆ ಕೊಟ್ಟು ಅದರಿಂದ ಬರುವಂಥ ಹಣವನ್ನು ಪುನಃ ಇಂಡಸ್ಟ್ರಿಯಲ್ ಷೆಡ್‌ಗಳನ್ನು ಕಟ್ಟುವ ಕೆಲಸಕ್ಕೆ ಉಪಯೋಗಿಸಬೇಕೆಂಬ ದೃಷ್ಟಿಯಿಂದ ಮೊನ್ನೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಬೆಂಗಳೂರು, ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ—ಈ ಕಡೆಗಳಲ್ಲಿರುವಂಥಾ ಇಂಡಸ್ಟ್ರಿಯಲ್ ಷೆಡ್ಡುಗಳನ್ನು ಡಿಪ್ರಿಸಿಯೇಷನ್ ಪ್ರಕಾರ ಮಾರ್ಕೆಟ್ ವ್ಯಾಲ್ಯುಮಾಡಿ 7 ಅಥವಾ 8 ವರ್ಷಗಳ ಕಂತಿನ ಪ್ರಕಾರ ಹೈರ್ ಪರ್ಚೇಜ್‌ನಂತೆ ಕೊಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿದೆ. ಈ ದರ ಯಾವರೀತಿ ಆಗಬೇಕೆಂಬ ಬಗ್ಗೆ ವಿಚಾರ ವಿನಿಮಯಮಾಡಿ ಇನ್ನು ಕೆಲವೇ ವರ್ಷಗಳಲ್ಲಿ ಇಂಡಸ್ಟ್ರಿಯಲ್ ಎಸ್ಟೇಟುಗಳನ್ನು ಕಂತುಗಳ ಪ್ರಕಾರ ತೆಗೆದುಕೊಳ್ಳುವಂಥ ಕ್ರಮ ಜಾರಿಗೆ ಬರುತ್ತದೆ. ಇನ್ನು ಬೆಂಗಳೂರು, ಹುಬ್ಬಳ್ಳಿ, ಬೆಳಗಾಂ, ಮಂಗಳೂರು ಮತ್ತು ಮೈಸೂರುಗಳಲ್ಲಿ ಇದನ್ನು ಮಾರ್ಕೆಟ್ ರೇಟ್ ಮೈನಸ್ ಡಿಪ್ರಿಸಿಯೇಷನ್‌ನ್ನು ನಿರ್ಧಾರ ಮಾಡತಕ್ಕ ವಿಷಯದಲ್ಲಿ ಬೇರೆ ಕಡೆಗಳಲ್ಲಿ ಯಾವರೀತಿ ಮಾಡದ್ದಾರೆ ಅದನ್ನು ನೋಡಿ ನಾವು ಇಲ್ಲಿ ಯಾವ ರೀತಿ ಮಾಡಬೇಕು, ಯಾವ ತೀರ್ಮಾನವನ್ನು ಕೈಗೊಳ್ಳಬೇಕು ಅನ್ನುವುದನ್ನು ನಿರ್ಧರಿಸಲು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಇನ್ನು ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳನ್ನು ತೆರೆಯತಕ್ಕ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮವನ್ನು ಕೈಗೊಂಡಿಲ್ಲ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದವರ ಒಂದು ನೇರವಾದ ಆಶ್ರಯದಲ್ಲಿ ಮೈಸೂರು ಸರ್ಕಾರದವರು ಮೂರು ರೂರಲ್ ಇಂಡಸ್ಟ್ರಿಯಲ್ ಪ್ರಾಜೆಕ್ಟ್‌ಗಳನ್ನು ಕೈಗೊಂಡಿದ್ದಾರೆ. ಅವು ಧಾರ್ವಾಡ, ತುಮಕೂರು ಮತ್ತು ಭದ್ರಾವತಿಯಲ್ಲಿ ಕೆಲಸಮಾಡುತ್ತಿವೆ. ಮಾನ್ಯ ಶ್ರೀ ಅಗ್ನಿಹೋತ್ರಿಯವರು

ಒಂದು ಚೌರದ ಕತ್ತಿಗಳನ್ನಾಗಲೀ ಅಥವಾ ಒಂದು ಡೈರಿಯನ್ನಾಗಲೀ ಅಥವಾ ಯಾವುದಾದರೊಂದು ಟೂರ್ಸ್‌ನ್ನಾಗಲೀ ಮಾಡಿದರೆ ಸರಿಯಲ್ಲ ಎಂದು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇವು ಇಲ್ಲಿಯತನಕ ಯಾವುದೋ ಒಂದು ಟೂಲ್ ಮಾಡುವುದು ಇಲ್ಲವೇ ಟೂರ್ ಮಾಡುವುದು ಇಷ್ಟಕ್ಕೆ ಮಾತ್ರ ಅವಕಾಶ ಮಾಡಿಕೊಟ್ಟಿವೆ. ಆದರೆ ಸರ್ಕಾರದವರು ಇದನ್ನು ಒಂದು ಸಣ್ಣ ಕೈಗಾರಿಕೆ ಎಂದು ಒಪ್ಪುವುದಕ್ಕೆ ಅವು ಈ ಕೈಗಾರಿಕೆಯ ನೀತಿಯಲ್ಲಿ ಬರುವುದಿಲ್ಲ. ಆದುದರಿಂದ ಸರ್ಕಾರದವರು ಅವನ್ನು ಒಂದು ಸಣ್ಣ ಕೈಗಾರಿಕೆ ಅನ್ನುವುದನ್ನು ಒಪ್ಪುವುದಿಲ್ಲ. ನಿಜವಾಗಿಯೂ ಇವುಗಳನ್ನು ಒಂದು ಸಣ್ಣ ಕೈಗಾರಿಕೆ ಅನ್ನುವಂಥ ಒಂದು ದೃಷ್ಟಿಯಲ್ಲಿ ಅವನ್ನು ನಡೆಸಬೇಕಾಗಿದ್ದರೆ ಆ ಕೇರಳ ರಾಜ್ಯದಲ್ಲಿ ಇವುಗಳನ್ನು ಯಾವ ಮಾರ್ಗದಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೋ ಅದೇ ಮಾರ್ಗದಲ್ಲಿ ನಾವು ಇವುಗಳನ್ನು ಅಲ್ಲಿಗೆ ಹೊಂದಾವಣಿಕೆ ಆಗತಕ್ಕ ರೀತಿಯಲ್ಲಿ ನಮ್ಮ ಮೂರು ರೂರಲ್ ಇಂಡಸ್ಟ್ರಿಯಲ್ ಪ್ರಾಜೆಕ್ಟ್‌ಗಳನ್ನು ನಡೆಸಿಕೊಂಡು ಹೋಗಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ಇಂಡಸ್ಟ್ರಿಗಳಲ್ಲಿ ಸರ್ಕಾರದವರು ಈಗ 3 ಲಕ್ಷ ರೂಪಾಯಿಗಳ ಬಂಡವಾಳವನ್ನು ಹಾಕಿದ್ದಾರೆ. ಏನೋ ಕೆಲವರಿಗೆ ಒಂದ ಹತ್ತು ಸಾವಿರ ರೂಪಾಯಿಗಳ ಸಾಲ ನೀಡುವುದಾಗಲೀ, ಅಥವಾ ಕೆಲವರಿಗೆ ಕೆಲವು ಟೂರ್ಸ್‌ಗಳನ್ನು ಕೊಡುವುದಾಗಲೀ ಇಷ್ಟು ಸಹಾಯ ನೀಡಿ ನೀವು ಅವುಗಳನ್ನು ನಡೆಸಿಕೊಂಡು ಹೋಗಿ ಎಂದರೆ ಇಂಥ ನೀತಿಯಿಂದ ಖಂಡಿತವಾಗಿಯೂ ನಮ್ಮ ಸಣ್ಣ ಕೈಗಾರಿಕೆಗಳು ಅಭಿವೃದ್ಧಿಯಾಗುವುದಿಲ್ಲ. ಇದರಿಂದ ನಮ್ಮ ಆಸೆ ಆಕಾಂಕ್ಷೆಗಳು ಈಡೇರುವುದಿಲ್ಲ. ಆದುದರಿಂದ ಕೆಲವು ಸಣ್ಣ ಕೈಗಾರಿಕೆಗಳನ್ನು ನಾವು ಯಾವ ರೀತಿ ನಡೆಸಬೇಕು ಅನ್ನುವುದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತಿದ್ದೇವೆ.

ಇನ್ನು ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಬ್ಯಾಂಕುಗಳ ವಿಚಾರಕ್ಕೆ ಬಂದರೆ ಕೆಲವು ಮಾನ್ಯ ಸದಸ್ಯರು ಅಂದರೆ ಶ್ರೀ ಕೆ. ಎಂ. ಪುಟ್ಟಸ್ವಾಮಿಯವರು ಇವುಗಳಿಗೆ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ನಾವು ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ. ಆದರೆ ಅವುಗಳೆಲ್ಲಾ ಸಮರ್ಪಕವಾದ ರೀತಿಯಲ್ಲಿ ಕೆಲಸಮಾಡಿಕೊಂಡು ಬರುತ್ತವೆ ಎಂದು ಹೇಳುವುದಕ್ಕೆ ನಾನು ಸಿದ್ಧವಾಗಿಲ್ಲ. ಅವುಗಳ ಬಗ್ಗೆ ನಾವು ಒಂದು ಕ್ರಮವಾದ ಶಿಸ್ತನ್ನು ಕೈಗೊಳ್ಳದಿದ್ದರೆ ಮುಂದೆ ಅವು ಬಹಳ ಶೋಚನೀಯ ಸ್ಥಿತಿಗೆ ಬರಬಹುದು. ಈ ಕೈಗಾರಿಕೆಗಳಿಗೆ ಹಣ ಸಾಲದು ಎನ್ನುವ ಮಾತನ್ನು ನಾನೂ ಒಪ್ಪುತ್ತೇನೆ. ಕೋಲಾರದಲ್ಲಿ ಒಂದು ಇಂಡಸ್ಟ್ರಿಯಲ್ ಕೋ-ಆಪರೇಟೀವ್ ಬ್ಯಾಂಕ್ ಇದೆ. ಅದು ಅಲ್ಲಿ ಬ್ರಿಕ್‌ಮೇಕಿಂಗು ಕೆಲಸ ಮಾಡತಕ್ಕ 83 ಜನರಿಗೆ ಸಾಲ ಕೊಟ್ಟಿದೆ. ಆ ಸಾಲದ ಹಣವನ್ನು ಈ ಹೊತ್ತಿಗೂ ಅವರು ವಸೂಲ್ಮಾಡಿಲ್ಲ. ಹೀಗೆ ಹಣವನ್ನು ಕೊಡತಕ್ಕ ವಿಧಾನ, ಮತ್ತು ಅದರ ಮೌಲ್ಯ ಹಾಗೂ ಕೊಟ್ಟದ್ದನ್ನು ವಸೂಲ್ಮಾಡದೆ ಇರತಕ್ಕದ್ದನ್ನು ನೋಡಿದರೆ ಯಾವ ಸರ್ಕಾರಕ್ಕೆ ತಾನೆ ಇವುಗಳಿಗೆ ಇನ್ನಷ್ಟು ಹಣ ಕೊಡಲು ಮನಸ್ಸು ಬರುತ್ತದೆ? ಕೊಡಬೇಕಾದ ಕೈಗಾರಿಕೆಗಳಿಗೆ ಹಣವನ್ನು ಕೊಡದೆ ಕೊಡಬಾರದವರಿಗೆಲ್ಲಾ ಹಣವನ್ನು ಕೊಡುತ್ತಿದ್ದರೆ ಆ ಕೈಗಾರಿಕೆಗಳು ಮುಂದೆ ಬರುವುದಾದರೂ ಹೇಗೆ ಮತ್ತು ಅಂಥ ಕೈಗಾರಿಕೆಗಳಿಗೆ ಸರ್ಕಾರ ಇನ್ನಷ್ಟು ಉತ್ತೇಜನ ಕೊಡುವುದಾದರೂ ಹೇಗೆ ! ಆ ಬ್ಯಾಂಕುಗಳಲ್ಲಿ ಅನೇಕರು ಶಾಸನ ಸಭೆಗಳ ಸದಸ್ಯರು ಅಧ್ಯಕ್ಷರಾಗಿರುತ್ತಾರೆ. ಅವರು ಬಾಕಿ ಬಿದ್ದಿರತಕ್ಕ ಹಣವನ್ನು ವಸೂಲ್ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಕೂಡಲೆ ಕೈಗೊಳ್ಳಬೇಕು. ಹೀಗೆ ಅನಾವಶ್ಯಕವಾದ ಜನರಿಗೆ ಹಣವನ್ನು ಕೊಟ್ಟು ಯಾವ ಉದ್ದೇಶವನ್ನು ಸಾಧಿಸಬೇಕಾಗಿತ್ತೋ ಅದನ್ನು ಸಾಧಿಸದೆ ಅಸಡ್ಡೆ ಮಾಡಿದಾಗ ಅದೇ ಸ್ಥಳಕ್ಕೆ ಮತ್ತು ಜನರಿಂದ ಕಂದಾಯದ ರೂಪದಲ್ಲಿ ವಸೂಲ್ಮಾಡಿದ ಹಣವನ್ನು ಹಾಕಬೇಕು ಅಂದರೆ, ಅದು ಖಂಡಿತ ಸಾಧ್ಯವಾಗದ ಮಾತು. ಹಾಗೆ ಮಾಡಿದರೆ ಅದರಿಂದ ಬಹಳ ತೊಂದರೆಗಳು ಬರುತ್ತವೆ. ಇನ್ನು ಮುಂದಾದರೂ ಈ ಬ್ಯಾಂಕುಗಳು ಒಂದು ಒಳ್ಳೇ ದೃಷ್ಟಿಯನ್ನಿಟ್ಟು ಕೆಲಸ ಮಾಡಬೇಕು, ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡಬಾರದು ಎಂದು ಹೇಳುತ್ತೇನೆ. ಈ ವರ್ಷ ನಾವು ನಮ್ಮ ಈ ಸ್ಟೇಟ್ ಏಯಿಡ್ ಟು ಇಂಡಸ್ಟ್ರೀಸ್‌ಗೆ ಕೊಡತಕ್ಕ ಉತ್ತೇಜನ ಒಂದೊಂದು ಇಂಡಸ್ಟ್ರಿಗೂ 10 ಸಾವಿರ ಎಂದು ಇದ್ದುದನ್ನು 25 ಸಾವಿರಕ್ಕೆ ಹೆಚ್ಚಿಸಬೇಕೆಂಬ ನಿರ್ಧಾರ ಮಾಡಿದ್ದೇವೆ. ಅಷ್ಟೇ ಅಲ್ಲದೆ ಈ ಸಾಲವನ್ನು ಪಡೆಯತಕ್ಕ ಬಗ್ಗೆ ನೇರವಾಗಿ ಅಪ್ಲಿಕೇಷನ್‌ಗಳನ್ನು ಅವರು ಸರ್ಕಾರಕ್ಕೆ ಕೊಡಬೇಕಾದ್ದಿಲ್ಲ. ಈ ಅಧಿಕಾರವನ್ನು ಕೆಲವು ಆಯಾಯ ಹಂತದಲ್ಲಿರತಕ್ಕ ಅಧಿಕಾರಿಗಳಿಗೆ ಕೊಡಲಾಗಿದೆ. ಮೊದಲಿದ್ದ ಹಾಗೆ ಈಗ ತೊಂದರೆಗಳೇನೂ ಇರಲಾರವು.

ಇನ್ನು ಈ ಇಂಡಸ್ಟ್ರಿಯಲ್ ಎಸ್ಟೇಟುಗಳ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಮೊದಲು ಈ ಇಂಡಸ್ಟ್ರಿಯಲ್ ಎಸ್ಟೇಟನ್ನು ಕಟ್ಟಲು ಎಲ್.ಐ.ಸಿ. ಅವರು ಹಣವನ್ನು ಕೊಡುತ್ತಿದ್ದರು. ಇತ್ತೀಚೆಗೆ ಅದನ್ನು ಅವರು ಹಿಂದಕ್ಕೆ ತೆಗೆದುಕೊಂಡಿದ್ದರು. ಮತ್ತೆ ಅವರೀಗ ಮುಂದೆ ಬಂದಿದ್ದಾರೆ.

(ಶ್ರೀ ಎ. ಪಿ. ಅಪ್ಪಣ್ಣ)

ಈ ದಿವಸ ಬೆಂಗಳೂರಿನಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟನ್ನು ಕಟ್ಟಲಿಕ್ಕೆ ಹಣವನ್ನು ಕೊಡಲು ಎಲ್.ಐ.ಸಿ. ಅವರು ಮುಂದೆ ಬಂದಿದ್ದಾರೆ. ಅದಕ್ಕೆ ನಮ್ಮ ಸರ್ಕಾರ ಗ್ಯಾರಂಟಿ ಕೊಟ್ಟಿದೆ. ಇದೇ ರೀತಿ ಇನ್ನು ಯಾರಾದರೂ ಅವುಗಳನ್ನು ಅವರಿಗೆ ತೆರೆಯುವುದಕ್ಕೆ ಖಾಸಗೀ ಜನರು ಮುಂದೆ ಬಂದರೆ ಅವರ ಬಂಡವಾಳ ನೋಡಿಕೊಂಡು ನಾವು ಅವರಿಗೆ ಎಲ್.ಐ.ಸಿ. ಅವರಿಂದಾಗಲಿ ಅಥವಾ ಬೇರೆ ಇನ್ನಾವ ಬ್ಯಾಂಕುಗಳಿಂದಾಗಲೀ ಗ್ಯಾರಂಟಿ ಕೊಟ್ಟು ಅವರಿಗೆ ಬೇಕಾಗತಕ್ಕ ಹಣವನ್ನು ಕೊಡಿಸ ಬೇಕೆಂದು ತೀರ್ಮಾನ ಮಾಡಿದ್ದೇವೆ. ಸಣ್ಣ ಕೈಗಾರಿಕೆಗಳನ್ನು ಮುಂದೆ ಹೆಚ್ಚು ಹೆಚ್ಚು ರೀತಿಯಲ್ಲಿ ಬೆಳಸಕ್ಕೆ ಬಗ್ಗೆ ಛೇಂಬರ್ ಆಫ್ ಕಾಮರ್ಸ್ ಅಥವಾ ದೊಡ್ಡ ದೊಡ್ಡ ಬಂಡವಾಳಗಾರರು ಮುಂದೆ ಬಂದರೆ ಅವರಿಗೆ ಸಾಧ್ಯವಾದ ಎಲ್ಲ ಸೌಲಭ್ಯಗಳನ್ನೂ ಒದಗಿಸುವುದಕ್ಕೆ ಸರ್ಕಾರದವರು ತಯಾರಾಗಿದ್ದಾರೆಂದು ನಾನು ತಮಗೆ ಒಂದು ಭರವಸೆಯನ್ನು ಕೊಡುವುದಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ.

ಇನ್ನು ಮೈನಿಂಗ್ ಮತ್ತು ಜಿಯಾಲಜಿ ಈ ಖಾತೆಯ ಬಗ್ಗೆ ಯಾರೂ ಏನೂ ಹೇಳಿಲ್ಲ. ಆದರೆ ಕೆಲವರು ಬಿ.ಎಂ.ಡಿ. ಬಗ್ಗೆ ಮಾತನಾಡಿದ್ದಾರ. ಅದು ಯಾವ ರೀತಿ ನಡೆಯ ಬೇಕಾಗಿತ್ತೋ ಆ ರೀತಿ ನಡೆಯಿಲಲ್ಲ ಅನ್ನುವುದನ್ನು ನಾನೂ ಸಹಾ ಒಪ್ಪುತ್ತೇನೆ. ಮತ್ತು ಅದನ್ನೀಗ ರದ್ದುಮಾಡುವುದಕ್ಕೂ ಕೂಡ ಎಲ್ಲ ಸಿದ್ಧತೆಗಳಾಗಿದೆ. ಅದು ಚೆನ್ನಾಗಿ ಕೆಲಸ ಮಾಡುವುದಿಲ್ಲ. ಅನ್ನುವುದು ನಮಗೆ ಚೆನ್ನಾಗಿ ಮನವರಿಕೆಯಾದ ಮೇಲೆ ಅದನ್ನು ಮುಚ್ಚಿ ಬೇರೊಂದು ಸಂಸ್ಥೆಯನ್ನು ತೆರೆಯಲಾಗಿದೆ. ಆದರೆ ಆ ಬಿ.ಎಂ.ಡಿ. ಮುಚ್ಚಿ ಅಲ್ಲಿದ್ದ ಕೆಲಸ ಗಾರರನ್ನೆಲ್ಲಾ ಆ ಹೊಸ ಸಂಸ್ಥೆಯಲ್ಲಿ ಸೇರಿಸಬೇಕಾಗಿತ್ತೆಂದು ಕೆಲವರು ಹೇಳಿದರು. ಹಾಗೆ ಮಾಡಿದ್ದರೆ ಆ ಬೋರ್ಡ್ ಆಫ್ ಮಿನರಲ್ ಡೆವಲಪ್‌ಮೆಂಟ್ ಯಾವ ದುರವಸ್ಥೆಗೆ ಈಡಾಯಿತೋ ಅದೇ ಸ್ಥಿತಿ ಇದಕ್ಕೂ ಬರುತ್ತಿತ್ತು. ಅಲ್ಲಿ ಕೆಲಸಗಾರರು ಒಂದಕ್ಕೆ ಡಬ್ಬಲ್ಲಾಗಿದ್ದುದರಿಂದ ಉತ್ಪತ್ತಿಗಿಂತ ಖರ್ಚು ಹೆಚ್ಚಾಗಿ ಅದನ್ನು ಮುಚ್ಚಬೇಕಾಯಿತು. ಆ ಹೊಸದನ್ನು ಈ ಸ್ಥಿತಿಗೆ ತರುವುದು ಬೇಡ ಎಂದು ಆ ಕೆಲಸಗಾರರಲ್ಲಿ ಒಳ್ಳೆ ನುರಿತವರನ್ನು ಆ ಮೈಸೂರ್ ಮಿನರಲ್ಸ್‌ಗೆ ತೆಗೆದುಕೊಳ್ಳಲಾಯಿತು. ಅಲ್ಲಿ ಎಷ್ಟು ಸಿಬ್ಬಂದಿ ಅಗತ್ಯವೋ ಅಷ್ಟನ್ನು ಮಾತ್ರವೇ ಇಟ್ಟು ಕೊಂಡಿದೆ. ಆದರೆ ಹಾಗೆ ರಿಟ್ರೆಂಚ್ ಆದವರಲ್ಲಿ ಇನ್ನುಳಿದವರನ್ನು ಅಂದರೆ ಅದರಲ್ಲಿ ಕೆಲವು ಮಂದಿ ಯನ್ನು ಎಕ್ಸೈಜ್ ಇಲಾಖೆಗೆ ತೆಗೆದುಕೊಳ್ಳುವಂತೆ ಆದೇಶ ನೀಡಲಾಗಿದೆ. ಆದರೆ ಅಲ್ಲಿ 1967ರಲ್ಲಿ ರಿಟ್ರೆಂಚ್ ಆದವರ ಪೈಕಿ ಅಂದರೆ ಆ 1200 ಜನರಲ್ಲಿ ಶೇಕಡ 60ರಷ್ಟು ಜನರನ್ನು ಆ ಹೊಸ ಮೈಸೂರು ಮಿನರಲ್ಸ್ ಲಿಮಿಟೆಡ್ಡಿಗೆ ತೆಗೆದುಕೊಳ್ಳಲಾಗಿದೆ.

11-30 A.M.

ಈ ಸಂದರ್ಭದಲ್ಲಿ ಶ್ರೀಮಾನ್ ಬಣಕಾರ್‌ರವರು ಕಡೇ ಘಳಿಗೆಯಲ್ಲಿ ಒಂದು ಅಪಾದನೆಯನ್ನು ಮಾಡಿದರು. ಮೇಲ್ಮನೆಯ ಸದಸ್ಯರಾದ ಶ್ರೀಮಾನ್ ಗಾಂಜೀವಿರಪ್ಪನವರ ಮಗ ಶ್ರೀಮಾನ್ ರುದ್ರಪ್ಪನವರಿಗೆ 6056 ಎಕರೆ 39 ಗುಂಟೆಯಷ್ಟು ಗಣಿ ಪ್ರದೇಶವನ್ನು ಸರ್ಕಾರದವರು ಕೊಟ್ಟಿ ದ್ದಾರೆ ಅಥವಾ ಕೊಡುವುದರಲ್ಲಿ ಇದ್ದಾರೆ ಎಂದು. ಶ್ರೀಮಾನ್ ರುದ್ರಪ್ಪನವರು ಈವೊತ್ತಿನ ಪರಿಸ್ಥಿತಿಯಲ್ಲಿ he is not holding the certificate for approval ಆ ಕಾರಣದಿಂದ ಅವರಿಗೆ ಲೀಸಿಗೆ ಕೊಡುವುದಕ್ಕೆ ಸಾಧ್ಯವೇ ಇಲ್ಲ. ಅದೂ ಅಲ್ಲದೆ ಶ್ರೀಮಾನ್ ರುದ್ರಪ್ಪನವರು ಧಾರವಾಡ ಡಿಸ್ಟ್ರಿಕ್ಟನಲ್ಲಿ 5·67 ಹೆಕ್ಟಾರ್ ಒಂದು ಚೈನಾ ಕ್ಲೇ ಮೈನ್ ಲೀಸ್ ನಂ. 550 ಇಟ್ಟುಕೊಂಡಿ ದ್ದಾರೆ. ಮತ್ತೆ ಇದರ ಜೊತೆಗೆ ಎರಡು ಮೈನಿಂಗ್ ಲೀಸ್ ಇದ್ದು ಅದನ್ನು ಅವರು ಸರಿಯಾಗಿ ನಡೆಸದೇ ಇದ್ದುದರಿಂದ ಆದರ ಪೈಕಿ ಹಣ ಪಾವತಿ ಮಾಡಲಿಲ್ಲ. ಈ ಮೈನ್ಸ್‌ನಲ್ಲಿ ಅವರು ಸರಿಯಾಗಿ ಕೆಲಸ ಮಾಡದೇ ಇದ್ದುದರಿಂದ ನಾವು ಅದನ್ನು ಈಗಾಗಲೇ ರದ್ದುಪಡಿಸಲಾಗಿದೆ. ಅದು ಬಿಟ್ಟು ಇವರಿಂದ ಮೈನಿಂಗ್ ಲೀಸ್‌ಗೆ ಯಾವ ಅಪ್ಲಿಕೇಷನ್ನೂ ಇಲ್ಲ. ಅವರಿಗೆ ಸರ್ಟಿಫಿಕೇಟ್ ಫಾರ್ ಅಪ್ರೂವಲ್ ಎಂದು ಇಲ್ಲದೇ ಇರುವುದರಿಂದ ಮೈನಿಂಗ್ ಲೀಸನ್ನು ಇಂದು ಕೊಡುವುದಕ್ಕೆ ಸಾಧ್ಯವೇ ಇಲ್ಲ. 5 67 ಹೆಕ್ಟಾರ್ಸ್ ಒಂದೇ ಒಂದು ಅವರು ಇಟ್ಟುಕೊಂಡಿರುವಂಥಾದ್ದು ಅದು ಬಿಟ್ಟು ಬೇರೆ ಯಾವುದೂ ಇಲ್ಲ. ಅವರು ಬೇರೆ ಮಾಡುತ್ತಾ ಇರುವಂಥಾದ್ದನ್ನು ಈಗಾಗಲೇ ಕ್ಯಾನ್ಸಲ್ ಮಾಡಲಾಗಿದೆ.

ಇನ್ನು ಮೈನ್ಸ್ ಅಂಡ್ ಜಿಯಾಲಜಿ ವಿಷಯದಲ್ಲಿ ನಾನು ಸಂತೋಷದಿಂದ ಹೇಳುವುದು ಏನೆಂದರೆ, ಈ ಡಿಪಾರ್ಟ್‌ಮೆಂಟಿನವರು ರೈತರಿಗೆ ಸಹಾಯವಾಗುವ ರೀತಿಯಲ್ಲಿ ಒಂದು ಗ್ರೌಂಡ್ ವಾಟರ್ ಸೆಲ್‌ನ್ನು ನಿರ್ಮಾಣ ಮಾಡಿದ್ದಾರೆ. ಈ ಗ್ರೌಂಡ್ ವಾಟರ್ ಸೆಲ್ ಬಹಳ ಉಪಯೋಗ ವಾಗತಕ್ಕಂಥ ರೀತಿಯಲ್ಲಿ ಕೆಲಸ ಮಾಡಿದೆ.

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ ಅವರು ನಕ್ಕರು)

ಶ್ರೀ ಸಿ. ಎಂ. ಎಸ್. ಶಾಸ್ತ್ರಿಗಳವರು ನಗಬಹುದು. ಆದರೆ ಈ ಸೆಲ್ ನೀರು ಎಲ್ಲಿ ಸಿಕ್ಕುತ್ತದೆ ಎಂದು ಕಂಡುಹಿಡಿದು ಇಡೀ ರಾಜ್ಯದಲ್ಲಿ ಒಂದು ಸರ್ವೆ ಮಾಡಿದ್ದಾರೆ. ಅದೇರೀತಿಯಾಗಿ ಈ ಗ್ರೌಂಡ್‌ವಾಟರ್ ಸೆಲ್ ನೀರು ಎಲ್ಲಿ ಸಿಕ್ಕುತ್ತದೆ ಎನ್ನುವುದನ್ನು ಕಂಡು ಹಿಡಿದು ಒಂದು ಸರ್ವೆ ಮಾಡಿದಮೇಲೆ ಅಗ್ರಿಕಲ್‌ಚರ್ ಡಿಪಾರ್ಟ್‌ಮೆಂಟಿನವರು ಇದರ ಒಂದು ಜವಾಬ್ದಾರಿಯನ್ನು ಹೊರಬೇಕಾಗಿದೆ. ಅದಕ್ಕೋಸ್ಕರ ಮೈಸೂರು ಸರ್ಕಾರದವರು ಇದನ್ನು ನೇಮಕ ಮಾಡಿದ್ದಾರೆ. ಈ ಕೆಲಸಕ್ಕೆ ಕೇಂದ್ರ ಸರ್ಕಾರದವರೂ ಸಹಿತ ತಮ್ಮ ಅಭಿನಂದನೆಯನ್ನು ಕಳುಹಿಸಿದ್ದಾರೆ ಮತ್ತು ಗ್ರೌಂಡ್ ವಾಟರ್ ಸೆಲ್ ಬೇರೆ ರಾಜ್ಯದಲ್ಲೂ ಮಾಡಬೇಕು ಎಂಬ ಅಭಿಲಾಷೆಯನ್ನೂ ಸೂಚಿಸಿದ್ದಾರೆ. ಅದಕ್ಕೆ ಕೊಟ್ಟಿರತಕ್ಕಂಥ ಹಣವನ್ನೂ ಸರಿಯಾದ ರೀತಿಯಲ್ಲಿ ಉಪಯೋಗಿಸಿದ್ದಾರೆ ಮತ್ತು ಅದರ ಸರ್ವೆ ರಿಪೋರ್ಟ್‌ನ್ನು ಬೇರೆ ಬೇರೆ ಪ್ರದೇಶಗಳಿಗೂ ಸಂಬಂಧಪಟ್ಟ ಇಲಾಖೆಗಳಿಗೂ ಕೊಟ್ಟಿದ್ದಾರೆ. ಇದಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ಕೊಟ್ಟು ಕೆಲಸ ಮಾಡಿದರೆ ಇದರಿಂದ ರೈತರಿಗೆ ತುಂಬಾ ಪ್ರಯೋಜನ ಇರುತ್ತದೆ. ಈ ವರ್ಷ 59 ಬೋರ್‌ವೆಲ್‌ಗಳನ್ನು ಮಾಡಿ ನೀರನ್ನು ಬರಮಾಡಿದಮೇಲೆ ಎಕ್ಸ್‌ಪೆರಿಮೆಂಟಲ್ ಆಗಿ ಮಾಡಿದ ಬೋರ್‌ವೆಲ್‌ಗಳನ್ನೂ ಕೂಡ ನಾವು ಮುಚ್ಚದೆ ರೈತರ ವಶಕ್ಕೆ ಕೊಟ್ಟಿದ್ದೇವೆ. ಯಾವ ಪ್ರದೇಶದಲ್ಲಿ ನೀರು ಸುಲಭವಾಗಿ ಸಿಕ್ಕುತ್ತದೆ ಎನ್ನುವುದನ್ನು ಜಿಯಾಲಾಜಿಕಲ್ ಡಿಪಾರ್ಟ್‌ಮೆಂಟಿನವರು ಸರ್ವೆ ಮಾಡಿ ಅದರ ಫಲಿತಾಂಶವನ್ನು ಆಯಾಯ ಡಿಪಾರ್ಟ್‌ಮೆಂಟಿನ ಅಧಿಕಾರಿಗಳಿಗೆ ಕಳುಹಿಸುತ್ತಾರೆ. ಎಲ್ಲರಿಗೂ ನೀರು ಕೊಡುವ ವ್ಯವಸ್ಥೆಯನ್ನು ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿನಿಂದ ಮಾಡಿಸಬೇಕಾಗಿದೆ. ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಕೊನೆಯದಾಗಿ ಎರಡು ಮಾತನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಮೈನಿಂಗ್ ಲೀಸನ್ನು ಕೊಡುವ ವಿಚಾರದಲ್ಲಿ ಇದಕ್ಕೆ ಅಧಿಕವಾದ ಪ್ರಮಾಣದಲ್ಲಿ ಹಣವನ್ನು ಹಾಕಬೇಕಾಗುತ್ತದೆ. ಅನೇಕ ನಿಬಂಧನೆಗಳನ್ನೂ ಹಾಕಿದೆ. ಇದನ್ನು ದೊಡ್ಡ ದೊಡ್ಡ ಕಾರ್ಯಕರ್ತರಿಗೆ ಕೊಡಬೇಕು ಎನ್ನುವ ಯೋಚನೆ ಇಟ್ಟುಕೊಂಡಿದ್ದೇವೆ. ದೋಣಿಮಲ್ ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದು ಒಂದು ದೊಡ್ಡ ಸಂಸ್ಥೆ. ಅವರು ಅನೇಕ ಕೋಟ್ಯಾಂತರ ರೂಪಾಯಿಗಳನ್ನು ಇದರ ಮೇಲೆ ಖರ್ಚು ಮಾಡಬೇಕಾಗುತ್ತದೆ. ಅಂತೆಯೇ ಅವರು ಒಂದು ದೊಡ್ಡ ಪ್ರಮಾಣದಲ್ಲಿ ಈ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಮಹದೇವ್ ಜಿ. ಬಣಕಾರ್.—ಧಾರವಾಡ ಡಿಸ್ಟ್ರಿಕ್ಟ್‌ನಲ್ಲಿ ಚೈನಾ ಕ್ಲೇ ಅಷ್ಟು ಉತ್ತಮವಾದುದಲ್ಲ. ಈಗ ರುದ್ರಪ್ಪನವರಿಗೆ ಕೊಟ್ಟಿರತಕ್ಕಂಥ ಪ್ರದೇಶ ಬೊಂಬಾಯಿ ರಾಜ್ಯದಲ್ಲಿ ಇದ್ದಾಗ ಅದನ್ನು ಖಾಸಗೀ ಮನುಷ್ಯರಿಗೆ ಕೊಡದೆ ಸರ್ಕಾರದವರು ನಡೆಸಬೇಕೆಂಬ ಬಗ್ಗೆ ರಿಕಾರ್ಡ್ ಇಲ್ಲವೇ ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದು ಬಂದಿದ್ದ ಪಕ್ಷದಲ್ಲಿ ಅದನ್ನು ಏತಕ್ಕೆ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ನಡೆಸಬಾರದು.

ಶ್ರೀ ಎ. ಪಿ. ಅಪ್ಪಣ್ಣ.—ಅದು ನಮ್ಮ ಗಮನಕ್ಕೆ ಬಂದಿಲ್ಲ. ಅದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಚೈನಾ ಕ್ಲೇ ಆಗಲಿ ಅಥವಾ ಐರನ್‌ಓರ್ ಆಗಲಿ ಅದನ್ನು ಸರ್ಕಾರದವರೇ ಪೂರ್ಣವಾದ ಜವಾಬ್ದಾರಿ ವಹಿಸಿಕೊಂಡು ನೇರವಾಗಿ ಮಾಡಬೇಕು ಎಂದರೆ ಸಾಧ್ಯ ಇಲ್ಲ. ಅದಕ್ಕೆ ಆಗುವಷ್ಟು ಹಣ ಮತ್ತು ಅನುಭವ ಸರ್ಕಾರದಲ್ಲಿ ಸಿಕ್ಕುವುದಿಲ್ಲ ; ಆದುದರಿಂದ ಅದನ್ನು ನೇರವಾಗಿ ನಡೆಸುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಮೈಸೂರು ಮಿನರಲ್ಸ್ ಲಿಮಿಟೆಡ್‌ನವರು ಇದನ್ನು ಎಲ್ಲಿ ಸಾಧ್ಯವೋ ಅಲ್ಲಿ ಮಾಡುತ್ತಾರೆ. ದೊಡ್ಡ ಪ್ರಮಾಣದಲ್ಲಿ ದುಡ್ಡು ಹಾಕಿ ಖಾಸಗೀ ಮನುಷ್ಯರೇ ಆಗಲಿ, ಯಾರಾದರೂ ಮುಂದೆ ಬಂದರೆ ಅವರಿಗೆ ಉತ್ತೇಜನ ಸರ್ಕಾರದವರು ಕೊಡಬೇಕು. ಆಗಲೇ ಅದನ್ನು ಸರಿಯಾದ ರೀತಿಯಲ್ಲಿ ರೂಢಿಸುವುದಕ್ಕೆ ಸಾಧ್ಯ. ಅದು ಇಲ್ಲದೆ ಸರ್ಕಾರದವರೇ ನಡಸಬೇಕು ಎಂದರೆ ಹಣದ ಕೊರತೆ ಇರುವುದರಿಂದ ಅದನ್ನು ಪೂರ್ತಾ ರೂಢಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರದವರು ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟನ್ನು ಸ್ಥಾಪಿಸಿ, ಬೇಕಾದಷ್ಟು ದುಡ್ಡನ್ನು ಅದರಲ್ಲಿ ಬಂಡವಾಳ ಹಾಕಿದ್ದಾರೆ. ಅವರು ಇದನ್ನು ನಡೆಸುತ್ತಾ ಇದ್ದಾರೆ. ಅದೂ ಅಲ್ಲದೆ

(ಶ್ರೀ ಎ. ಪಿ. ಅಪ್ಪಣ್ಣ)

ಇಂಟರ್‌ನ್ಯಾಷನಲ್ ಏಜನ್ಸಿ ಅವರು ಕೊಲಾಬರೇಷನ್ ಮಾಡುತ್ತಾ ಇದ್ದಾರೆ. ಅವರು ಕುದುರೆ ಮುಖ ಪ್ರಾಜೆಕ್ಟನ್ನು ತೆಗೆದುಕೊಂಡು ನಡೆಸುತ್ತಾ ಇದ್ದಾರೆ. ಅದೇ ರೀತಿಯಲ್ಲಿ ದೋಣಿ ಮಲೆಯನ್ನು ಸಹ ಗೌರ್ನಮೆಂಟ್ ಏಜೆನ್ಸೀಸ್‌ನಿಂದ ಮಾಡುತ್ತಿದ್ದಾರೆ. ಇದು ಸಾಧ್ಯ ಇಲ್ಲದೇ ಹೋದರೆ ಖಾಸಗಿಯವರಿಗೆ ಕೊಟ್ಟುಬಿಡುತ್ತೇವೆ. ಇದನ್ನು ಸಾಧ್ಯವಾದಷ್ಟು ಜಾಗ್ರತೆ ಎಕ್ಸ್‌ಪ್ಲಾಯಿಟ್ ಮಾಡಿ ಅದರಿಂದ ಪ್ರಯೋಜನವನ್ನು ಒದಗಿಸಬೇಕೆಂಬುದೇ ಸರ್ಕಾರದ ಅಭಿಲಾಷೆ ಮತ್ತು ನಮ್ಮ ರಾಜ್ಯದ ಪೋರ್ಟುಗಳು ಅಭಿವೃದ್ಧಿ ಹೊಂದಬಹುದು ಎನ್ನುವ ದೃಷ್ಟಿಯಿಂದ ಈ ರೀತಿ ಮಾಡುತ್ತಾ ಇದ್ದೇವೆ.

ಇನ್ನು ಕಾರವಾರದ ವಿಚಾರ. ಬಿಳಿಗೆರೆ ಮತ್ತು ಕಾರವಾರ ಪೋರ್ಟುಗಳ ವಿಚಾರದಲ್ಲಿ ಹೇಳುವುದಾದರೆ ಅಕ್ಟೋಬರ್ 1967ರಲ್ಲಿ ಎಂ. ಎಂ. ಟಿ. ಸಿ. ಯವರು ಐರನ್‌ಓರ್‌ನ್ನು ಕಾರವಾರ ಮತ್ತು ಬಿಳಿಗೆರೆ ಪೋರ್ಟ್‌ನಿಂದ ಕಳುಹಿಸುವುದಕ್ಕೆ ಜವಾಬ್ದಾರಿ ತೆಗೆದುಕೊಂಡಿದ್ದಾರೆ. ಫೆಬ್ರವರಿ 20 ರಿಂದ ಎಂ. ಎಂ. ಟಿ. ಸಿಯವರು ಇದನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದಕ್ಕೆ ಮೈಸೂರು ಮಿನರಲ್ಸ್ ಲಿಮಿಟೆಡ್‌ನವರು ಈ ಜವಾಬ್ದಾರಿ ಹೊತ್ತು ಈಗಾಗಲೇ ಕಾರವಾರ್ ಮತ್ತು ಬಿಳಿಗೆರೆಯಿಂದ 5 ಸಾವಿರ ಟನ್‌ಓರ್ ಹೊರಕ್ಕೆ ಹೋಗಿದೆ. ಮತ್ತು ಈ ಪೋರ್ಟ್‌ನಿಂದ ಸೆಪ್ಟೆಂಬರ್ ಒಳಗೆ 1 ಲಕ್ಷ ಟನ್ ಹೋಗುವುದರಲ್ಲಿ ಇದೆ. ಇಷ್ಟು ಹೇಳಿದಮೇಲೆ ಇನ್ನು ಖಾದೀಬೋರ್ಡ್ ಮತ್ತು ವಿಲೇಜ್ ಇಂಡಸ್ಟ್ರೀಸ್ ಬಗ್ಗೆ ಎರಡು ಮಾತುಗಳನ್ನು ಹೇಳಲು ಬಯಸುತ್ತೇನೆ.

ಶ್ರೀ ಮಹದೇವ್ ಜಿ. ಬಣಕಾರ್.—ಧಾರವಾಡದ ಹಿರೆಕೇರೂರ್ ತಾಲ್ಲೂಕಿನಲ್ಲಿ ಇಟ್ಟಿರತಕ್ಕಂಥ ಚೈನಾ ಕ್ಲೇ ವಿಚಾರವಾಗಿ ಏನು ಮಾಡಿದ್ದೀರಿ ಸ್ವಾಮಿ?

ಶ್ರೀ ಎ. ಪಿ. ಅಪ್ಪಣ್ಣ.—ಈಗಾಗಲೇ ಸರ್ಕಾರದವರು ಪಿ. ಡಬ್ಲ್ಯು. ಡಿ. ಮುಖಾಂತರ ರಸ್ತೆಯನ್ನು ಹಾಕಿಸಿದ್ದಾರೆ ಮತ್ತು ರಾಜ್ಯ ಸರಕಾರದವರು ಕೇಂದ್ರ ಸರಕಾರಕ್ಕೆ ಈ ಚೈನಾ ಕ್ಲೇ ಅನ್ನು ಅವರೇ ತೆಗೆದುಕೊಂಡು ಅವರೇ ನಿರ್ವಹಿಸಬೇಕಾಗಿದೆ ಎಂದು ಈಗಾಗಲೇ ಶಿಫಾರಸ್ಸು ಮಾಡಿದ್ದಾರೆ.

ಇನ್ನು ಖಾದಿ ಬೋರ್ಡ್ ವಿಚಾರದಲ್ಲಿ ಹೇಳುವುದಾದರೆ, ಈ ಖಾದಿ ಬೋರ್ಡಿಗೆ ಈ ಒಂದು ದೋಷ ಏತಕ್ಕೆ ಬಂತೋ ಎನ್ನುವ ಅನುಮಾನ ನನಗೆ ಬಂದಿದೆ. ನನಗೆ ಖಾದಿ ವ್ಯಾಮೋಹ ಇರುವುದರಿಂದ ಈ ಬೋರ್ಡ್‌ನ್ನು ಉಳಿಸಿಕೊಳ್ಳಬೇಕೆಂದು ವಾದ ಮಾಡುವವನು ನಾನಲ್ಲ. ಖಾದಿ ಒಂದು ಅಂಗ. ಇದರಲ್ಲಿ ಅನೇಕ ಕಾಟೇಜ್ ಇಂಡಸ್ಟ್ರಿಗಳು ಮತ್ತು ವಿಲೇಜ್ ಇಂಡಸ್ಟ್ರಿಗಳು ಅಳವಡಿಸಿಕೊಂಡಿವೆ. ಇದರ ಹೆಸರನ್ನು ಏನಾದರೂ ಬದಲಾವಣೆ ಮಾಡಿದರೆ ಇದಕ್ಕಿರುವ ಕಳಂಕ ತಪ್ಪುತ್ತದೋ ಎನ್ನುವ ಒಂದು ಯೋಚನೆ ಇದೆ. ಕಳೆದ ಸಾಲಿನಲ್ಲಿ ಈ ಖಾದಿ ಬೋರ್ಡಿನಲ್ಲಿ ಎಷ್ಟು ಹಣ ದುರುಪಯೋಗವಾಗಿದೆ, ಎಷ್ಟು ಕೇಸುಗಳನ್ನು ಹಾಕಲಾಗಿದೆ ಮತ್ತು ಇನ್‌ವೆಸ್ಟಿಗೇಷನ್ ಯಾವ ಯಾವ ಹಂತದಲ್ಲಿ ನಡೆಯುತ್ತಿದೆ ಎಂಬುದನ್ನೆಲ್ಲಾ ಈ ಸಭೆಗೆ ತಿಳಿಸಿದ್ದೆ. ಈಗ ಒಂದು ಮಾತನ್ನು ಹೇಳುತ್ತೇನೆ. ಖಾದಿ ಮತ್ತು ವಿಲೇಜ್ ಇಂಡಸ್ಟ್ರಿಗಳಿಂದ ಈ ಬೋರ್ಡಿಗೆ ಹಣ ಬರುತ್ತದೆ. ನಮ್ಮ ಸರ್ಕಾರದವರು ಈ ಬೋರ್ಡಿಗೆ ಗ್ರ್ಯಾಂಟ್-ಇನ್-ಏಡ್ ಕೊಡುತ್ತಾರೆ. ಕಳೆದ ವರ್ಷ 16 ಲಕ್ಷ ರೂಪಾಯಿಗಳನ್ನು ಗ್ರ್ಯಾಂಟ್-ಇನ್-ಏಡ್ ರೂಪದಲ್ಲಿ ಕೊಟ್ಟಿದ್ದೇವೆ. 5 ಲಕ್ಷ ರೂಪಾಯಿಗಳನ್ನು ಇದುವರೆಗೆ ಸಾಲ ಕೊಟ್ಟಿದ್ದೇವೆ. ಈ ಹಣ ಇನ್ನೂ ಮರುಪಾವತಿಯಾಗಿಲ್ಲ. ಇದುವರೆಗೆ ಖಾದಿ ಬೋರ್ಡ್ ಯಾವ ರೀತಿ ನಡೆದುಕೊಂಡು ಬಂದಿದೆಯೋ ಅದೇ ರೀತಿ ಮುಂದೆಯೂ ನಡೆದುಕೊಂಡು ಹೋಗಬೇಕೆಂದು ಹೇಳುವವನು ನಾನಲ್ಲ. ಮತ್ತು ಈ ಬೋರ್ಡಿನಲ್ಲಿ ಯಾವ ಅನ್ಯಾಯಗಳೂ ನಡೆದಿಲ್ಲವೆಂದು ಹೇಳುವವನು ನಾನಲ್ಲ. ಏನೋ ನಡೆದಿದೆ. ಮುಂದೆ ಈ ರೀತಿ ನಡೆಯದಂತೆ ನೋಡಿಕೊಳ್ಳಬೇಕಾಗಿದೆ. ಯಾರು ಯಾರು ತಪ್ಪು ಮಾಡಿದ್ದಾರೆ ಅವರಮೇಲೆ ಕ್ರಮ ಕೈಕೊಳ್ಳಬೇಕಾಗಿದೆ. ಈ ಒಂದು ದೃಷ್ಟಿಯಲ್ಲಿ ಮಾನ್ಯ ಸದಸ್ಯರುಗಳು ವಾದ ಮಾಡಬೇಕೇ ಹೊರತು ಇಡೀ ಖಾದಿ ಬೋರ್ಡನ್ನೇ ಮುಚ್ಚಬೇಕೆಂದು ವಾದ ಮಾಡುವುದು ಸರಿಯಲ್ಲ. ಈ ಬೋರ್ಡನ್ನು ಮುಚ್ಚುವುದರಿಂದ ಅಲ್ಲಿ ಕೆಲಸ ಮಾಡುತ್ತಿರುವವರಿಗೆ ತೊಂದರೆ ಬರುತ್ತದೆ. 1967-68 ಅಂಕಿಅಂಶಗಳನ್ನು ನೋಡುವುದಾದರೆ ಖಾದಿ ಬೋರ್ಡ್ ಮೂಲಕ ಆದಂಥ ಟೋಟಲ್ ಪ್ರೊಡಕ್ಷನ್ 4.5 ಕೋಟಿ ರೂಪಾಯಿಗಳಷ್ಟು. ಅದೇ ರೀತಿ ಸೇಲ್ಸ್ ಆಗಿದ್ದು 5.4 ಕೋಟಿ ರೂಪಾಯಿಗಳಷ್ಟು ಇದೇ ವರ್ಷದಲ್ಲಿ ಉದ್ಯೋಗ ಪಡೆದಂಥ ಸಂಖ್ಯೆ 63 ಸಾವಿರ ಜನರು. ಇವರಿಗೆ ಕೊಟ್ಟ ಸಂಬಳ 53 ಲಕ್ಷ ರೂಪಾಯಿಗಳು. ಖಾದಿ ಬಟ್ಟೆ ಬಹಳ ಹಳೆಯಕಾಲದ್ದು, ಅದನ್ನು ಏತಕ್ಕೆ

ಉಪಯೋಗಿಸಬೇಕೆಂದು ಮಾನ್ಯ ಸದಸ್ಯರುಗಳು ಕೇಳಬಹುದು, ಈ ಬೋರ್ಡನ್ನು ಮುಚ್ಚು ವುದರಿಂದ ನಿರುದ್ಯೋಗಿಗಳಾಗುವ 63 ಸಾವಿರ ಜನಕ್ಕೆ ಬೇರೆ ಉದ್ಯೋಗ ಒದಗಿಸಿಕೊಡುವ ಸ್ಥಿತಿ ಯಲ್ಲಿ ಸರ್ಕಾರ ಈಗ ಇಲ್ಲ. ಇವರಿಗೆ ಬೇರೆ ಉದ್ಯೋಗವನ್ನು ಒದಗಿಸುವ ಕಾಲ ಬಂದಾಗ ಮಾತ್ರ ಈ ಬೋರ್ಡನ್ನು ತೆಗೆದುಹಾಕಬಹುದು. ಅಲ್ಲಿಯವರಿಗೆ ಇದನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುವುದು ಸರ್ಕಾರದ ಕರ್ತವ್ಯ. ಈ ಒಂದು ದೃಷ್ಟಿಯಿಂದ ಮಾನ್ಯ ಸದಸ್ಯರುಗಳು ಈ ಬೋರ್ಡ್‌ನ್ನು ಮುಚ್ಚಿಬಿಡಬೇಕೆಂದು ವಾದ ಮಾಡುವುದು ಸರಿಯಲ್ಲ.

ಇನ್ನು ಮೇಲ್ಮನೆಯಲ್ಲಿ ಶ್ರೀಮಾನ್ ಶ್ರೀನಿವಾಸ ಶೆಟ್ಟರು ಪಾಮ್ ಗಿಡಗಳನ್ನು ಬೆಳೆಸಲು ಸರ್ಕಾರದವರು ಲಕ್ಷಗಟ್ಟಲೆ ಹಣ ಖರ್ಚು ಮಾಡುತ್ತಿದ್ದರೂ ಸಹ ಇದುವರೆಗೆ ಒಂದು ಗಿಡವೂ ಬೆಳೆದಿಲ್ಲವೆಂದು ಆರೋಪಣೆ ಮಾಡಿದರು. ಆ ಬಗ್ಗೆ ವಿವರ ಕೊಡಬೇಕೆಂದರೆ :

1961-62	...	13 ಸಾವಿರ ರೂಪಾಯಿಗಳು,
1962-63	...	24 ಸಾವಿರ ರೂಪಾಯಿಗಳು,
1963-64	..	16 ಸಾವಿರ ರೂಪಾಯಿಗಳು,
1964-65	...	32 ಸಾವಿರ ರೂಪಾಯಿಗಳು,
1965-66	...	30 ಸಾವಿರ ರೂಪಾಯಿಗಳು,

ಇಷ್ಟು ಹಣವನ್ನು ಮಂಜೂರು ಮಾಡಿದ್ದರೂ ಸಹ ಇಲ್ಲಿಯವರಿಗೆ ಖರ್ಚಾಗಿರುವುದು 1077 ರೂಪಾಯಿಗಳು 90 ಪೈಸೆ ಮಾತ್ರ. ಮತ್ತು 2 ಆಟೋರಿಕ್ಷಾಗಳು ನಾಪತ್ತೆಯಾಗಿವೆ ಎಂದು ಕೂಡ ಆರೋಪಣೆ ಮಾಡಿದರು. ಈಗ ಖಾದಿ ಬೋರ್ಡಿನವರು 6,470 ರೂಪಾಯಿಗಳಿಗೆ ಒಂದರಂತೆ 5 ಆಟೋರಿಕ್ಷಗಳನ್ನು ಕೊಂಡುಕೊಂಡಿದ್ದಾರೆ. ಈ ಐದನ್ನು ಈ ಕೆಳಗಿನ ಸೊಸೈಟಿ. ಗಳಿಗೆ ಕೊಡಲಾಗಿದೆ :

(1) ಮನಿಲ ಕೋಆಪರೇಟೀವ್ ಸೊಸೈಟಿ, ಬೆಂಗಳೂರು,
(2) ಅಪೆಕ್ಸ್ ಕೋಆಪರೇಟೀವ್ ಸೊಸೈಟಿ, ಬೆಂಗಳೂರು,
(3) ಸರಂಜಾಮ್ ಕಾರ್ಯಾಲಯ, ಬೆಂಗಳೂರು,
(4) ನಿರಾಪಾಮ್‌ಗರ್ ಕೋಆಪರೇಟೀವ್ ಸೊಸೈಟಿ, ಸೀರಾ,
(5) ನೀರಾ ಪಾಮ್‌ಗರ್ ಕೋಆಪರೇಟೀವ್ ಸೊಸೈಟಿ, ಕಡೂರು,

ಇದರ ಜೊತೆಗೆ ಕೂಡಗನೂರಿನಲ್ಲಿ ಒಂದು ಕಟ್ಟಡವನ್ನು ಖರೀದಿ ಮಾಡಿದ್ದಾರೆಂದು ಆರೋಪಣೆ ಮಾಡಿದರು. ಇದನ್ನು 1962—63ರಲ್ಲಿ ಶ್ರೀಮಾನ್ ಎಂ. ನಾಗೇಶ್ವರರಾವ್, ಹಿಂದಿ ಪಂಡಿತ್ ಅವರಿಂದ ಕೊಂಡುಕೊಳ್ಳಲಾಗಿದೆ, ಈ ಬಗ್ಗೆ ಖಾದಿ ಬೋರ್ಡಿನಲ್ಲಿ ಡಾಕ್ಯುಮೆಂಟ್ ಇದೆ ಯಾರು ಬೇಕಾದರೂ ಹೋಗಿ ನೋಡಬಹುದು. ಟ್ರೈನಿಂಗ್ ಸೆಂಟರ್‌ಗಳಿಗೆ ಬಹಳ ಹಣ ಖರ್ಚು ಮಾಡಿದ್ದಾರೆ ಆ ಬಗ್ಗೆ ಅಂಕಿಅಂಶಗಳನ್ನು ಇಟ್ಟಿಲ್ಲವೆಂದು ಆರೋಪಣೆ ಮಾಡಿದರು. 1962ರಿಂದ ಇದುವರೆಗೆ ಟ್ರೈನಿಂಗಿಗಾಗಿ ಮಂಜೂರು ಮಾಡಿರತಕ್ಕ ಹಣ 2ಲಕ್ಷದ 58 ಸಾವಿರ ರೂಪಾಯಿಗಳು. ಆದರೆ ಖರ್ಚು ಮಾಡಿರುವುದು 58,707 ರೂಪಾಯಿಗಳು ಮಾತ್ರ. ಇದುವರೆಗೆ 278 ಜನರು ಟ್ರೈನಿಂಗ್ ಪಡೆದಿದ್ದಾರೆ. ಮೇಲ್ಮನೆಯಲ್ಲಿ ಈ ಆರೋಪಗಳನ್ನು ಶ್ರೀಮಾನ್ ಶ್ರೀನಿವಾಸ ಶೆಟ್ಟರು ಮಾಡಿದಾಗ ಮಾಹಿತಿ ಇಲ್ಲದಿದ್ದರಿಂದ ಈ ಸಭೆಯ ಮೂಲಕ ಈ ಮಾಹಿತಿಗಳನ್ನು ಈಗ ಕೊಡು ತ್ತಿದ್ದೇನೆ.

ಇನ್ನು ಕೊನೆಯದಾಗಿ ಹೇಳುವುದೆಂದರೆ :

The Ministry of Food, Agriculture, Community Development and Co-operation, in their letter dated 17-2-1968 to all the Registrars of Co-operative Societies has stated like this :

"While the position of audit is fairly good in Mysore State and Gujarat, it is in heavy arrears in Bihar, Orissa and U.P. Precise information in regard to other States is not available, but the Khadi and Village Industries commission are of the view that audit may be in arrears there also."

(ಶ್ರೀ ಎ. ಪಿ. ಅಪ್ಪಣ್ಣ)

ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದ ಖಾದಿ ಬೋರ್ಡಿನಲ್ಲಿ ಉತ್ತಮವಾಗಿ ಕೆಲಸಗಳು ನಡೆದಿವೆ ಎಂಬುದನ್ನು ಹೇಳುವುದಕ್ಕಾಗಿ ಈ ವಿಚಾರವನ್ನು ಹೇಳಿದ್ದೇನೆ. ಅಂದರೆ ಎಲ್ಲವೂ ಸರಿಯಾಗಿ ನಡೆಯುತ್ತಿದೆಯೆಂದು ಸಮರ್ಥನೆ ಮಾಡುತ್ತಿಲ್ಲ. ಆಗಿರತಕ್ಕಂಥ ತಪ್ಪುಗಳನ್ನು ತಿದ್ದಿಕೊಂಡು ಇನ್ನೂ ಚೆನ್ನಾಗಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಲಾಗುತ್ತದೆಂದು ಹೇಳುತ್ತೇನೆ. ಈಗಿರ ತಕ್ಕಂಥ ಖಾದಿ ಬೋರ್ಡಿನಲ್ಲಿ ಯಾರು ಯಾರು ಹಣವನ್ನು ದುರುಪಯೋಗ ಮಾಡಿದ್ದಾರೆ, ಅವರ ಬಗ್ಗೆ ಅಡ್ಮಿನಿಸ್ಟ್ರೇಟೀವ್ ಆಫೀಸರ್ ಅವರು ಎನ್‌ಕ್ವೈರಿ ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರದವರು ಕೊಡತಕ್ಕಂಥ ಸಹಾಯಧನವನ್ನು ಉಪಯೋಗಿಸಿಕೊಂಡು ಈ ಬೋರ್ಡನ್ನು ನಡೆಸುತ್ತಿರುವುದ ರಿಂದ, ಮಾನ್ಯ ಸದಸ್ಯರುಗಳಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ, ಈ ಖಾದಿ ಬೋರ್ಡನ್ನು ಮುಚ್ಚಬೇಕೆಂದು ಹೇಳುವುದು ಸರಿಯಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಹಾದೇವ್ ಜಿ. ಬಣಕಾರ್.— ಹಣವನ್ನು ದುರುಪಯೋಗ ಮಾಡಿಕೊಂಡ ಬಗ್ಗೆ ಎಷ್ಟು ಜನರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಪಿ. ಅಪ್ಪಣ್ಣ.—ಈಗ 21 ಕೋಆಪರೇಟಿವ್ ಸೊಸೈಟಿಗಳ ಮೇಲೆ ಕ್ರಿಮಿನಲ್ ಕೇಸ್ ಫೈಲ್ ಮಾಡಿದ್ದೇವೆ. ಈ ಬಗ್ಗೆ 1,05,551 ರೂಪಾಯಿಗಳು ಬರಬೇಕಾಗಿದೆ. 36 ಖಾದಿ ಬೋರ್ಡಿನ ನೌಕರರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಈ ಬಗ್ಗೆ 1,98,484 ರೂಪಾಯಿಗಳು ಬರಬೇಕಾ ಗಿದೆ. 238 ಆಫೀಸರ್‌ಗಳನ್ನು ರಿಟ್ರೆಂಚ್ ಮಾಡಿದ್ದೇವೆ. 20 ಜನ ನೌಕರರನ್ನು ಟರ್ಮಿನೇಟ್ ಮಾಡಿ ದ್ದೇವೆ. 200 ಕೇಸ್‌ಗಳಲ್ಲಿ ಲಯಬಿಲಿಟಿ ಫಿಕ್ಸ್ ಮಾಡುವುದಕ್ಕೆ ಕ್ರಮ ಕೈಕೊಳ್ಳುತ್ತಿದ್ದೇವೆ.

ಶ್ರೀ ಎಂ. ಜಿ. ಬಣಕಾರ್.—ಸರ್ಕಾರದ ಮಂಜೂರಾತಿಯನ್ನು ಪಡೆಯದೆ 27 ಸಾವಿರ ರೂಪಾಯಿಗಳನ್ನು ಟಿ. ಎ. ಮತ್ತು ಡಿ. ಎ. ರೂಪದಲ್ಲಿ ಪಡೆದಂಥ ಹಳೆಯ ಅಧ್ಯಕ್ಷರಾದ ಮಾನ್ಯ ಗುದ್ಲೆಪ್ಪನವರಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಪಿ. ಅಪ್ಪಣ್ಣ.—ಈಗ ಹೇಳುವುದಕ್ಕೆ ಸಾಧ್ಯವಿಲ್ಲ. ಅಡ್ಮಿನಿಸ್ಟ್ರೇಟಿವ್ ಆಫೀಸರ್ ಅವರು ವಿಚಾರ ಮಾಡಿ ಒಂದು ಕೊನೆಯ ಹಂತಕ್ಕೆ ಬಂದಮೇಲೆ ಹೇಳಬಹುದೇ ಹೊರತು ಈಗ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

Sri DIGAMBARA RAO B. KALMANKAR.—What about the manipulation of records there ?

Mr. CHAIRMAN.—It has come up before the House. Members know everything about it.

Sri DIGAMBARA RAO B. KALMANKAR.—These things are not being placed before the House.

Sri RAMAKRISHNA HEGDE.—Mr. Speaker Sir, may I, at the outset, express my grateful thanks to the hon. Members who participated in this discussion, and contributed............

ಒಬ್ಬ ಮಾನ್ಯ ಸದಸ್ಯರು.—ಕನ್ನಡದಲ್ಲಿ ಮಾತನಾಡಿ ಸ್ವಾಮಿ. ಕರ್ನಾಟಕ ಇಲ್ಲದಿದ್ದರೆ ರಾಜ್ಯಕ್ಕೆ ಚ್ಯುತಿ ಬರುತ್ತದೆ.

Sri P. B. NANDIHALI (Uchagaon).—You speak in English, Sir. Otherwise we cannot follow.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ನಾನು ನನ್ನ ಬೇಡಿ ಕೆಗಳ ಮೇಲೆ ನಡೆದಂತಹ ಚರ್ಚೆಯಲ್ಲಿ ಯಾವ್ಯಾವ ಸದಸ್ಯರು ಮಾತನಾಡಿ ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೋ, ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಾನು ಸಭೆಯ ಮುಂದಿಟ್ಟಂತಹ ಎಲ್ಲಾ ಬೇಡಿಕೆಗಳ ಮೇಲೆ ಮಾತನಾಡತಕ್ಕಂತಹ ಅಗತ್ಯವಿಲ್ಲ. ಈಗಾಗಲೇ ಸಣ್ಣ ಕೈಗಾರಿಕೆ, ಖಾದಿ

ಬೋರ್ಡ್ಸ್, ಮೈನ್ಸ್, ಜಿಯಾಲಜಿ ಮತ್ತು ಇಂಡಸ್ಟ್ರಿಯಲ್ ಎಸ್ಟೇಟ್, ಇವುಗಳಿಗೆ ಸಂಬಂಧಪಟ್ಟಂತಹ ಚರ್ಚೆಗೆ ಬಹಳ ಯೋಗ್ಯ ರೀತಿಯಿಂದ, ಪರಿಣಾಮಕರವಾಗಿ ನನ್ನ ಸ್ನೇಹಿತರಾದ ಶ್ರೀ ಅಪ್ಪಣ್ಣನವರು ಉತ್ತರ ಕೊಟ್ಟಿದ್ದಾರೆ. ಈ ಬೇಡಿಕೆಗಳಲ್ಲಿ ಸೇರಿದ ಸೆರಿಕಲ್ಚರ್ ವಿಚಾರವಾಗಿ ಕೂಡ ನಾನು ಏನೂ ಹೇಳುವುದಕ್ಕೆ ಬಯಸುವುದಿಲ್ಲ. ಇದು ಕೈಗಾರಿಕಾ ಇಲಾಖೆಗೆ ಒಳಪಟ್ಟಿದ್ದಾದರೂ ಅದನ್ನು ನೋಡಿಕೊಳ್ಳತಕ್ಕಂತಹ ಮತ್ತೊಂದು ಸಚಿವರಿದ್ದಾರೆ. ಅವರು ತಮ್ಮ ಬೇಡಿಕೆಗಳಮೇಲೆ ಉತ್ತರ ಕೊಡುವಾಗ ವಿವರಗಳನ್ನೂ ಕೊಟ್ಟಿದ್ದಾರೆ. ಮೊಟ್ಟಮೊದಲನೆಯದಾಗಿ ಎಂ. ಎಸ್. ಕೆ. ಮಿಲ್ಲಿನ ವಿಚಾರವಾಗಿ ಮಾತನಾಡಬಯಸುತ್ತೇನೆ. ಶ್ರೀಮಾನ್ ಸಿದ್ದವೀರಪ್ಪನವರು ಕಳೆದ ಸಾರಿ ಎರಡು ದಿವಸಗಳ ಹಿಂದೆ ಬಜೆಟ್ ಮೇಲೆ ಸಾಮಾನ್ಯ ಚರ್ಚೆಗೆ ನಾನು ಉತ್ತರ ಕೊಟ್ಟಮೇಲೆ ಕೆಲವೊಂದು ಪ್ರಶ್ನೆಯನ್ನು ಕೇಳಿದರು. ಆಗಲೂ ಕೂಡ ಅವರಿಗೆ ಬರವಸೆ ಕೊಟ್ಟಿದ್ದೇನೆ–ನನ್ನ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಚರ್ಚೆಯಾಗುವಾಗ ಅದಕ್ಕೆ ಸಂಬಂಧಪಟ್ಟ ವಿವರಗಳನ್ನು ಕೊಡುತ್ತೇನೆ ಎಂದು. ಅವರು ಒಂದೇ ಒಂದು ಬಹಳ ಪ್ರಾಮುಖ್ಯವಾದ ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಉತ್ತರ ಕೊಟ್ಟರೆ ಸಾಕೆಂದು ಕಾಣುತ್ತದೆ. ಇಷ್ಟು ಮಾತ್ರ ವಿವರವನ್ನು ಮುಂದಿಡುತ್ತೇನೆ. ಅದೇನೆಂದರೆ, ಎಂ. ಎಸ್. ಕೆ ಮಿಲ್ಲಿಗೆ ಸರ್ಕಾರ ಬಹಳ ದೊಡ್ಡ ಮೊತ್ತವನ್ನು, ಸಾಲ ರೂಪವಾಗಿ ಕೊಟ್ಟಿದೆ, ಅದು ಸ್ಟೇಟ್ ಏಯಿಡ್‌ಟು ಇಂಡಸ್ಟ್ರೀಸ್ ಆಕ್ಟಿನ ಪ್ರಕಾರ ಸರಿಯಾಗಿದೆಯೋ, ಇಲ್ಲವೇ ಎನ್ನತಕ್ಕಂತದ್ದು; ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಹಳ ಸ್ಟ್ರಿಕ್ಟಾಗಿ ನಾವು ಅದನ್ನು ಇಂಟರ್‌ಪ್ರಿಟ್ ಮಾಡಿದರೆ, ಇದು ಸ್ಟೇಟ್ ಏಯಿಡ್‌ಟು ಇಂಡಸ್ಟ್ರೀಸ್ ಆಕ್ಟಿನಲ್ಲಿ ಯಾವ್ಯಾವ ಷರತ್ತುಗಳನ್ನು ಹಾಕಿದ್ದಾರೆ, ಆ ಷರತ್ತುಗಳಿಗೆ ಅನುಗುಣವಾಗಿ ಇಲ್ಲ. ಆದರೆ ಒಂದು ವಿಚಾರ ಮಾತ್ರ ನಾವು ನೆನಪಿನಲ್ಲಿಡಬೇಕು. ಸ್ಟೇಟ್ ಎಯಿಡ್‌ಟು ಇಂಡಸ್ಟ್ರೀಸ್ ಆಕ್ಟಿನಲ್ಲಿ ಎರಡು ತರದ ಕೈಗಾರಿಕೆಗಳು ಬರುತ್ತದೆ. ಒಂದು ಖಾಸಗೀ ಜನರಿಂದ ನಡೆಸಲ್ಪಟ್ಟಂತಹ ಖಾಸಗೀ ಬಂಡವಾಳದಿಂದ ನಡೆಸುವಂತಹ ಮತ್ತು ಸರ್ಕಾರದ ಯಾವುದೇ ಪ್ರತ್ಯಕ್ಷವಾದ ಹತೋಟಿ ಇರದಿದ್ದ ಕೈಗಾರಿಕೆಗಳು. ಮತ್ತೊಂದು ಸರ್ಕಾರದ ಹತೋಟಿಗೆ ಒಳಪಟ್ಟ ಮತ್ತು ಸರ್ಕಾರದ ಕೈಯಲ್ಲಿ ಮೆಜಾರಿಟಿ ಷೇರ್ ಇರತಕ್ಕ ಕೈಗಾರಿಕೆಗಳು. ಎಂ. ಎಸ್. ಕೆ. ಮಿಲ್ ಎರಡನೇ ವರ್ಗಕ್ಕೆ ಸೇರಿದಂತಹ ಕೈಗಾರಿಕೆ. ನಾನು ಎಂ. ಎಸ್. ಕೆ. ಮಿಲ್ಲಿನ ವಿಚಾರದಲ್ಲಿ ಸರ್ಕಾರದವರು ಕೈಗೊಂಡಂತಹ ನಿರ್ಣಯ ಸಂಪೂರ್ಣವಾಗಿ ಸರಿಯಾಗಿದೆ ಎಂದು ಸಮರ್ಥನೆ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಮಾಡತಕ್ಕಂತಹ ನಿರ್ಣಯಗಳಲ್ಲಿ ಅನೇಕ ನಿರ್ಣಯಗಳು ಸರಿಯಾಗಿರಬಹುದು, ಕೆಲವೊಂದು ನಿರ್ಣಯಗಳು ತಪ್ಪಾಗಿರಬಹುದು. ಆದರೆ ಈ ನಿರ್ಣಯವನ್ನು ಮಾಡುವಾಗ ಸದುದ್ದೇಶದಿಂದ ಸರ್ಕಾರ ಮಾಡಿದೆಯೇ, ಅಥವಾ ಬೇರೆ ಉದ್ದೇಶದಿಂದ ಮಾಡಿದೆಯೇ ಎಂಬುದು ಮುಖ್ಯವಾದುದು. ಎಂ. ಎಸ್. ಕೆ. ಮಿಲ್ಲು ಬಹಳ ಹಳೆಯ ಮಿಲ್ಲು. ಇದು ಸುಮಾರು 1961ನೇ ಇಸವಿಗಿಂತ ಸ್ವಲ್ಪ ಮೊದಲು ಬಹಳ ಅಸಮರ್ಪಕವಾದ ರೀತಿಯಲ್ಲಿ ನಡೆಯುತ್ತಿತ್ತು. ಅಲ್ಲಿ ಜನರು ಮತ್ತು ಆ ಭಾಗದಿಂದ ಆರಿಸಿ ಬಂದಂತಹ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ಪದೇ ಪದೇ ಸಹಾಯ ಕೊಡಬೇಕೆಂದು ಒತ್ತಾಯ ಮಾಡಿರುವುದರಿಂದ ಮೊಟ್ಟಮೊದಲಿಗೆ 1961ನೇ ಇಸವಿಯಲ್ಲಿ 10–5–61ನೇ ತಾರೀಕಿಗೆ ಸರ್ಕಾರ ಒಂದು ನಿರ್ಣಯ ಮಾಡಿತು. ಪಂಜಾಬ್ ನ್ಯಾಷನಲ್ ಬ್ಯಾಂಕ್ ಸಾಲ ಇದೆ, ಅದಕ್ಕೆ ಗ್ಯಾರಂಟಿ ಕೊಡಬೇಕು ಮತ್ತು ಡಿಬೆಂಚರ್ ಸಾಲ ಎತ್ತುತ್ತೇವೆ, ಅದಕ್ಕೆ ಸಾಲ ಪೂರ್ತಿಯಾಗಿ ಕೊಡಬೇಕು, ಮತ್ತು ವರ್ಕಿಂಗ್ ಕ್ಯಾಪಿಟಲಿಗೆ ಸಹಾಯ ಮಾಡಬೇಕು ಎನ್ನತಕ್ಕಂತದ್ದು. ಆಮೇಲೆ 62ನೇ ಇಸವಿ ಡಿಸೆಂಬರ್ 12ನೇ ತಾರೀಕಿಗೆ ಮಿಲ್ ಮುಚ್ಚಿಹೋಯಿತು. ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಡುವುದಾದರೆ, ಇದೇ ಸಭೆಯಲ್ಲಿ ಮತ್ತು ಮೇಲ್ಮನೆಯಲ್ಲಿ, ಈ ಸಂದರ್ಭದಲ್ಲಿ ಈ ಸರ್ಕಾರ ಕಣ್ಣು ಮುಚ್ಚಿಕೊಂಡು ಕೂತಿದ್ದಾರೆ ಎಂದು ಹಲವರು ಹೇಳಿದ್ದಾರೆ. ಮತ್ತು ಸುಮಾರು ಮೂರು ನಾಲ್ಕು ಸಾವಿರ ಜನ ಕೂಲಿಗಾರರು ನೌಕರಿಯಿಂದ ತೆಗೆದು ಹಾಕಲ್ಪಟ್ಟಿದ್ದಾರೆ, ಅವರು ಬಹಳ ಕಷ್ಟದಲ್ಲಿದ್ದಾರೆ, ಅದಕ್ಕಾಗಿ ಸರ್ಕಾರ ಸಹಾಯ ಮಾಡಬೇಕೆಂದು ಬಹಳ ಒತ್ತಾಯ ಮಾಡಿದಂತಹ ಭಾಷಣಗಳು ಕೂಡ ಇವೆ. ಆದರೆ ಅದನ್ನು ಓದಲಿಕ್ಕೆ ಹೋಗುವುದಿಲ್ಲ. ನಾವು ಕೇವಲ ಅರ್ಥಿಕದೃಷ್ಟಿಯಿಂದ ಇದನ್ನು ನೋಡಿದರೆ, ಇದರಲ್ಲಿ ಹಾಕಿದಂತಹ ಹಣ ಅದು ಅಷ್ಟೊಂದು ಸರಿಯಲ್ಲ, ಅದನ್ನು ನಾನು ಒಪ್ಪುತ್ತೇನೆ. ಆದರೆ ಸರ್ಕಾರ ಜವಾಬ್ದಾರಿಯಿಂದ ಹಾಕಿದ್ದು, ಇದು ಕೇವಲ ಒಬ್ಬನ ಜವಾಬ್ದಾರಿಯಲ್ಲ. ಸರ್ಕಾರದ ಹತ್ತಿರ ಇರತಕ್ಕಂತಹ ಹಣ ಅದು ಸಾರ್ವಜನಿಕರ ಹಣ, ರೈತರ ಹಣ. ಅದರಿಂದ ಬರತಕ್ಕ ಹಣ ಸರಿಯಾಗಿ ಬಂದು ಅದರ ವಿನಿಯೋಗವಾಗುತಂತೆ ನಾವು ಸಾಕಷ್ಟು ಮುಂಜಾಗ್ರತೆಯನ್ನು ವಹಿಸಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಆದರೂ ಕೆಲವೊಂದು ಸಂದರ್ಭಗಳಲ್ಲಿ ಜನತೆಗೆ ಅನಿಷ್ಟವಾಗುವಂತದನ್ನು ತಪ್ಪಿಸುವುದಕ್ಕೋಸ್ಕರ ಒಂದೊಂದು ಸಲ ನಾವು ಪೂರ್ಣವಾಗಿ ವ್ಯಾಪಾರ ದೃಷ್ಟಿಯಿಂದ ನೋಡುವುದಕ್ಕೂ ಆಗುವುದಿಲ್ಲ.

(ಶ್ರೀ ರಾಮಕೃಷ್ಣ ಹೆಗಡೆ)

12–00 NOON.

ಪ್ರಾರಂಭದಿಂದಲೇ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಒಂದು ಪ್ರಶ್ನೆ ಕೇಳಿದರು. ಇದನ್ನು ಫೈನಾನ್ಸ್ ಮಿನಿಸ್ಟರ್ ಅವರು ಹೇಗೆ ಒಪ್ಪಿದರು ಎಂದು. ಫೈನಾನ್ಸ್ ಮಿನಿಸ್ಟರ್ ಬೇರೆ ಇಂಡಸ್ಟ್ರೀಸ್ ಮಿನಿಸ್ಟರ್ ಬೇರೆ ಎಂದು ಇರುವುದಿಲ್ಲ. ಫೈನಾನ್ಸ್ ಮಿನಿಸ್ಟರ್ ಆಗಿ ನನ್ನ ಅಭಿಪ್ರಾಯ ಯಾವುದೇ ಇರಲಿ ಒಟ್ಟಿನಲ್ಲಿ ಮಂತ್ರಿಮಂಡಳದ ಅಥವಾ ಸರಕಾರದ ಅಭಿಪ್ರಾಯ ಒಂದು ಕೆಲಸವನ್ನು ಸಾರ್ವಜನಿಕ ದೃಷ್ಟಿಯಿಂದ ಒಳ್ಳೆಯದು ಮಾಡಬೇಕೆಂದು ಇರುವಾಗ ಆ ಕೆಲಸ ಮಾಡಲೇ ಬೇಕಾಗುತ್ತದೆ. ಮಾನ್ಯ ಸಿದ್ಧವೀರಪ್ಪನವರು ಮತ್ತೊಂದು ಪ್ರಶ್ನೆ ಕೇಳಿದರು. ಈ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿಯನ್ನು ಕೂಲಂಕಷವಾಗಿ ವಿಚಾರ ಮಾಡಲು ಅನೇಕ ಕಮಿಟಿಗಳನ್ನು ಏರ್ಪಡಿಸಿದ್ದರು ಅವರು ಇದನ್ನು ಮುಚ್ಚಬೇಕು ಎಂದು ಹೇಳಿಲ್ಲವೇ ಎಂದು. ನನಗೆ ಗೊತ್ತಿದ್ದಮಟ್ಟಿಗೆ ಮೂರು ತಿಂಗಳೊಳಗೆ ಮುಚ್ಚಬೇಕು ಎಂದು ಹೇಳಿದೆ. ಕೊನೆಯ ಕಮಿಟಿಯ ವರದಿ ಓದಿ ಹೇಳುತ್ತೇನೆ. ಸ್ಪಷ್ಟವಾಗಿ ಅವರು ಹೇಳಿಲ್ಲ. ಲಿಕ್ವಿಡೇಟ್ ಮಾಡಬೇಕೆಂದು ಹೇಳಿಲ್ಲ. ಮೊದಲನೆಯದು ಕೇಂದ್ರ ಸರಕಾರದವರು ಈ ಕಮಿಟಿ ನೇಮಿಸಿದರು. ಅದು ಹೀಗೆ ಇದೆ :

> "As per the Ministry of Commerce and Industries, Government of India in Notification dated 17th November 1959, a Committee with Sri Sundaram as Chairman, Sri Rajgopal as Member and Sri A. K. Das Gupta as Secretary was constituted to enquire into the affairs of the M. S. K. Mills, Gulbarga."

ಈ ಕಮಿಟಿಯವರು ತಾತ್ಕಾಲಿಕವಾಗಿ ಇಂಟೆರಿಯಂ ರಿಪೋರ್ಟ್ ಕೊಟ್ಟರು. ಅವರು ಹೇಳಿದ್ದು ಹೀಗೆ ಇದೆ :

> "For the purpose of working the company properly, the following immediate steps are to be taken :
>
> The work load must be properly assessed ; excess workmen will have to be retrenched with the co-operation of the workmen and the State Government ; there should be no attempt at any decrease of the wage rate ; unserviceable machinery must be scrapped certain machinery will have to be replaced for efficient working and the workable must be kept in good repair. The Management of the Company must be placed in the hands of people who have made a success of this industry. The Company can ill afford any other experiment in this respect. The Board of Directors must be reconstituted so that its members may be in a position to supervise, control and directly administer the affairs of the Company. Sufficient finance shuld be made available for the Management. ಇದು ಕೊನೆಗೆ ಅಂತಿಮ ವರದಿಯಲ್ಲಿ ಒಂದು ಮಾತು ಹೇಳಿದ್ದಾರೆ.

> "The Board of Directors must contain people who can be expected to take an intelligent and real interest in the working of the Company. The person or persons who is or who are expected to manage the affairs of the Company must know something of this textile industry and must have integrity and honesty. The Company must be assured of sufficient working capital. It should be from sources like State or Central Government or Financial Corporation so that the Company may

be allowed to dishcharge loans over a period of years. The labour strength must be reduced to the minimum requirement but there shou'd be no attempt to decrease the present wage rates. The Mills should concentrate in the manufacture of only a few varieties of cloth that are in good demand and easily saleable and the Mills should stop manufacturing of those varieties that are not profitable or popular."

ಇದು ಅವರ ಕೊನೆಯ ಫೈನಲ್ ರಿಪೋರ್ಟು. ಇನ್ನು ಮತ್ತೊಂದು ಕಮಿಟಿಯವರ ರಿಪೋರ್ಟಿನ ಭಾಗವನ್ನು ಓದಿ ಇದನ್ನು ಇಷ್ಟಕ್ಕೆ ನಾನು ಮುಗಿಸುತ್ತೇನೆ:

"The Government of Mysore has recently taken some steps to improve the state of affairs by rendering financial assistance from time to time and so far the Government of Mysore and the Mysore State Finance Corporation have together advanced Rs. 18 lakhs but it is insufficient for a mill with huge liability and heavy amount of acumulated losses. The mills have no working capital. Financial requirement is therefore of such quantum as to provide for the following:

Immediate expenses for renovating the existing machinery temporarily and putting them into commission till the rehabilitation scheme is carried out so that the mills should be started early.

Working capital: Liquidation of liabilities: immediate amount necessary for rehabilitation and mondernisation without which the mills cannot run economically. Incidental expenses required to erecting new machineries and Contingency."

ಈ ಪ್ರಕಾರ ಬೇರೆ ಬೇರೆ ಕಮಿಟಿಯವರು ವರದಿ ಮಾಡಿದ್ದಾರೆ. ಈ ವರದಿ ಆದಮೇಲೆ ಇದೊಂದು ದೊಡ್ಡ ಇಂಡಸ್ಟ್ರೀ, ಇದು ಮುಚ್ಚಿಹೋದರೆ ಅಥವಾ ಮುಚ್ಚಿದರೆ ಮತ್ತೊಂದು ಇಂಡಸ್ಟ್ರೀ ಸ್ಥಾಪನೆ ಮಾಡಲು ಸರಕಾರಕ್ಕೆ ಕನಿಷ್ಠ ಪಕ್ಷ 3 ಕೋಟಿ ರೂಪಾಯಿ ಬೇಕಾಗುತ್ತದೆ. ಸರ್ವ ಪ್ರಯತ್ನ ಮಾಡಿ ಇದನ್ನು ಪುನರುದ್ಧಾರ ಮಾಡಬೇಕು ಎಂದು ಸರಕಾರ ಮಾಡಿದೆ.

ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರವನ್ನು ಇನ್ನು ಹೆಚ್ಚಿಗೆ ಬೆಳೆಸಲು ಬಯಸುವುದಿಲ್ಲ. ಒಂದೇ ಒಂದು ಮಾತು ಹೇಳಬಯಸುತ್ತೇನೆ. ಇದು ಒಳ್ಳೇ ಉದ್ದೇಶದಿಂದ ಮಾಡಿದ ಕೆಲಸ. ಇದು ಅಷ್ಟೊಂದು ಸಮರ್ಪಕವಾಗಿ ಸದಸ್ಯರಿಗೆ ಕಾಣಿಸುತ್ತಿಲ್ಲ. ನಾನು ಮೊದಲೇ ಹೇಳಿದಹಾಗೆ ಕೆಲವು ಸಂದರ್ಭಗಳಲ್ಲಿ ಆರ್ಥಿಕ ದೃಷ್ಟಿಯ ಒಂದೇ ದೃಷ್ಟಿಯಿಂದ ನಾವು ನೋಡಿದರೆ ಯಾವ ಕೆಲಸವನ್ನೂ ಸಮಾಜದ ದೃಷ್ಟಿಯಿಂದ ಮಾಡುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ.

Sri H. SIDDAVEERAPPA.—If the hon'ble Minister yields. In the month of July 1967, in this House, while answering a Short-Notice Question said that there is no question of reopening of this mill. I am saying this by memory. He has said: 'every month we are losing three lakhs of rupees; we have paid off the labourers.'

To that effect the Chief Minister made a statement. That is the reason why we all feel that the Government have again revived it in spite of their knowing that it is a losing concern. With this amount and perhaps with a little more, you could have started a first class new mill n that area.

Sri RAMAKRISHNA HEGDE.—Sir, it is true that the Chief Minister has stated it. Again, during the course of discussion last year on the Budget and on Industries Demand, several members have again reopened this question and they suggested that Government should take difinite steps to revive this mill. Any way, I do not want to go further in this matter.

ಶ್ರೀ ಬಿ. ವಿ. ಮಾಗಾವಿ.—ಹುಬ್ಬಳ್ಳಿ ಮಿಲ್ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಎಂ. ಎಸ್. ಕೆ. ಮಿಲ್ಸ್‌ನಲ್ಲಿ ಬರುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಕೃಷ್ಣನ್ ಅವರು ಒಂದು ಪ್ರಶ್ನೆ ಕೇಳಿದರು. ಒಂದೂವರೆ ವರ್ಷಗಳ ಹಿಂದೆ ಬೆಂಗಳೂರಿನಲ್ಲಿಯ ಮಿನರ್ವ ಮಿಲ್ಸ್ ಲಾಕೌಟ್ ಮಾಡಿದಾಗ ಅದನ್ನು ಎತ್ತಿ ತೋರಿಸಿದರು. ನೀವು ಏತಕ್ಕೆ ಇದನ್ನು ತೆಗೆದುಕೊಳ್ಳುವುದಿಲ್ಲ ಎಂದು ಅವರು ಕೇಳಿದರು. ಒಂದು ದೃಷ್ಟಿಯಿಂದ ಸರಕಾರ ತೆಗೆದುಕೊಳ್ಳಬೇಕು ಎಂದು ಹೇಳುವುದು ನ್ಯಾಯವಾದುದು. ಆದರೆ ಮತ್ತೊಂದು ದೃಷ್ಟಿಯಿಂದ ನೋಡಿದರೆ ಸರಕಾರ ತೆಗೆದುಕೊಳ್ಳುವುದು, ಅದು ಸರಿಯಾಗಿ ನಡೆಯದೇ ಇದ್ದರೆ ದುಡ್ಡು ಹಾಕುವುದು ಸರಿಯಲ್ಲ ಎಂದು ಹೇಳುವುದು ಇದರಿಂದ ಕಷ್ಟದ ಪರಿಸ್ಥಿತಿ ಬರುತ್ತದೆ. ಆದುದರಿಂದ ಆಯಾಯ ಸಂದರ್ಭಕ್ಕೆ ಸರಿಯಾಗಿ ಸರಕಾರ ಸೂಕ್ತ ಕ್ರಮ ಕೈಕೊಳ್ಳುತ್ತದೆ.

ಮಾನ್ಯ ಅಧ್ಯಕ್ಷರೇ, ನಾನು ಕೈಗಾರಿಕೆಗಳ ವಿಚಾರಕ್ಕೆ ಹೋಗುವುದಕ್ಕಿಂತ ಮೊದಲು ನನಗೆ ಸಂಬಂಧಪಟ್ಟಂತೆ ಇನ್ನೂ ಎರಡು ವಿಚಾರಗಳಿಗೆ ಸಂಬಂಧಪಟ್ಟಂತೆ ಎರಡು ಮಾತನ್ನು ಹೇಳುತ್ತೇನೆ. ಮೊದಲನೆಯದು ಕಮರ್ಷಿಯಲ್ ಟ್ಯಾಕ್ಸಸ್ ಇಲಾಖೆಗೆ ಸಂಬಂಧಪಟ್ಟುದು, ಮತ್ತೊಂದು ಎಕ್ಸೈಸ್‌ಗೆ ಸಂಬಂಧಪಟ್ಟುದು.

ಮಾರಾಟ ತೆರಿಗೆಯ ವಿಚಾರದಲ್ಲಿ ಸದಸ್ಯರು ಅನೇಕ ರೀತಿಯಿಂದ ಟೀಕೆಯನ್ನು ಮಾಡಿದರು. ಅದರಲ್ಲಿ ಪ್ರಮುಖರಾದವರು ಮಾನ್ಯ ಐತಾಳ ಅವರು. He is an able advocate. But I am afraid when he was arguing with all vehemence at his command, he thought that he was arguing before a Sales-Tax Appellate Tribunal.

Sri P. V. AITHALA (Suratkal).—Throughout my speech you were not present.

Sri RAMAKRISHNA HEGDE.—I have read every word of what you spoke. I have heard your voice also because at that time I was in the Speaker's room.

ಮಾನ್ಯ ಸದಸ್ಯರು ಮತ್ತೊಂದು ಜವಾಬ್ದಾರಿಯನ್ನು ಆಗ ಮರೆತರು. ಆ ಜವಾಬ್ದಾರಿ ಈ ಮನೆಯ ಸದಸ್ಯರಾಗಿರುವ ಜವಾಬ್ದಾರಿ. We do not hold any brief for any member. Therefore when he offers criticism he has to be objective and he has to satisfy himself that the stand taken by him is realistic and is in the interest of the State.

ಆ ವಿಚಾರವನ್ನು ಮಾನ್ಯ ಸದಸ್ಯರಾದ ಐತಾಳ ಅವರು ಆ ಹೊತ್ತಿನಲ್ಲಿ ಮರೆತರು.

ಶ್ರೀ ಪಿ. ವಿ. ಐತಾಳ.—ಸೇಲ್ಸ್‌ಟ್ಯಾಕ್ಸ್ ಅಡ್ವೋಕೇಟ್ ಆಗಿ ನನ್ನ ಅನುಭವಕ್ಕೆ ಬಂದಿರುವುದನ್ನು ಈ ಸಭೆಯ ಸದಸ್ಯನಾಗಿ ಪರಿಹರಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರದು ಮೊದಲನೆಯ ಟೀಕೆ ಸೇಲ್ಸ್ ಟ್ಯಾಕ್ಸ್ ಆಕ್ಟಿನಲ್ಲಿ ರೂಲ್ಸ್‌ನಲ್ಲಿ ಪುನಃ ಪುನಃ ಬದಲಾವಣೆ ಮಾಡುವುದರಿಂದ ತುಂಬ ತೊಂದರೆಯಾಗುತ್ತದೆ ಎನ್ನುವುದು, ನಿಜ. ರೂಲ್ಸ್‌ಗಳಲ್ಲಾಗಲೀ ಎಕ್ಟ್‌ನಲ್ಲಾಗಲೀ ಪುನಃ ಪುನಃ ಬದಲಾವಣೆಯಾದರೆ ಎಲ್ಲಕ್ಕಿಂತ ಹೆಚ್ಚು ತೊಂದರೆಯಾಗತಕ್ಕದು ವಕೀಲರಿಗೆ. ಅವರು ಅದನ್ನೆಲ್ಲ ಓದಬೇಕಾಗುತ್ತದೆ ಹಿಂದೆ ಮಾಡಿದ್ದ ರೂಲ್ಸ್‌ಗೂ ಈಗ ಮಾಡಿರುವ ರೂಲ್ಸ್‌ಗೂ ವ್ಯತ್ಯಾಸವಿದೆಯೋ ಎಂದು ನೋಡಬೇಕಾಗುತ್ತದೆ. ಆದರೆ ರೂಲ್ ಮಾಡತಕ್ಕದು ಮತ್ತು ಆಕ್ಟ್‌ನಲ್ಲಿ ಬದಲಾವಣೆ ಮಾಡತಕ್ಕದು ಪರಿಸ್ಥಿತಿ ಯಾವ ರೀತಿ ಬದಲಾಗುತ್ತದೆ ಅದಕ್ಕೆ ಅನುಗುಣವಾಗಿ ಮತ್ತು ಈಗಿರತಕ್ಕ ಆಕ್ಟ್‌ನಲ್ಲಿ ಮತ್ತು ರೂಲ್ಸ್‌ನಲ್ಲಿ ಟ್ಯಾಕ್ಸನ್ನು ಕೊಡದೆ ತಪ್ಪಿಸಿಕೊಳ್ಳತಕ್ಕ ಯಾವುದಾದರೂ ಒಂದು ಉಪಾಯವನ್ನು ಹುಡುಕಿದರೆ ಅದನ್ನು ನಿಲ್ಲಿಸುವುದಕ್ಕೆ ಮತ್ತೊಂದು ರೂಲ್ ನಾವು ಸೇರಿಸುತ್ತೇವೆ.

ಶ್ರೀ ಪಿ. ವಿ. ಐತಾಳ.—ಹೈಕೋರ್ಟಿನ ಆದೇಶಗಳಿಗೆ ನೀವು ಬೆಲೆ ಕೊಡುತ್ತಿಲ್ಲ, ಅವರ ರೂಲಿಂಗಿಗೆ ವಿರೋಧವಾಗಿ ವ್ಯಾಲಿಡೇಷನ್ ಮಾಡುತ್ತ ಬಂದಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಹೈಕೋರ್ಟ್ ತೀರ್ಮಾನಕ್ಕೆ ನಾವು ಬೆಲೆ ಕೊಡದೆಇದ್ದರೆ ನಮ್ಮ ಹೈಕೋರ್ಟ್‌ನವರು ಸುಮ್ಮನೆ ಕೂಡುವುದಿಲ್ಲ ಮತ್ತು ಹೈಕೋರ್ಟ್ ತೀರ್ಮಾನಕ್ಕೆ ವಿರುದ್ಧವಾಗಿ ನಾವು ಯಾವ ಕೆಲಸವನ್ನು ಮಾಡುವುದಕ್ಕೂ ಸಾಧ್ಯವಿಲ್ಲ.

ನಾವು ಸೇಲ್ಸ್ ಟ್ಯಾಕ್ಸ್ ಹೆಚ್ಚು ಮಾಡುವಾಗ ಆಕ್ಟ್ ಬದಲಾಯಿಸಬೇಕು. ಉದಾಹರಣೆಗೆ ಒಂದು ಮಾತನ್ನು ಹೇಳುತ್ತೇನೆ. ಚೆಕ್ ಪೋಸ್ಟ್‌ಗಳ ವಿಚಾರದಲ್ಲಿ ಬರೀ ಮಂಗಳೂರಿನಲ್ಲಿ ಹಾಕಿದ್ದೀರಿ, ಧಾರವಾಡ, ಕಾರವಾರ, ಮತ್ತೊಂದು ಕಡೆ ಹಾಕಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಚೆಕ್‌ಪೋಸ್ಟ್ ಹಾಕಿರತಕ್ಕದ್ದು ಎಲ್ಲಿ ಎವೆಷನ್‌ಗೆ ಹೆಚ್ಚು ಅವಕಾಶವಿದೆ, ಎಲ್ಲಿ ಟ್ಯಾಕ್ಸ್ ವಸೂಲಿ ಹೆಚ್ಚಾಗುತ್ತದೆ, ಆ ಜಾಗದಲ್ಲಿ ಮಾತ್ರ ಚೆಕ್‌ಪೋಸ್ಟ್ ಹಾಕಿದ್ದೇವೆ. ಇದನ್ನು ಹಾಕಿರುವುದು ಪ್ರಯೋಗಾರ್ಥವಾಗಿ. ನಮಗೆ ಅನುಭವ ಬಂದಮೇಲೆ, ಈ ಚೆಕ್‌ಪೋಸ್ಟ್‌ಗಳಿಂದ ಬಹಳ ಪರಿಣಾಮವಾಗಿದೆ ಎಂದು ಗೊತ್ತಾಗಿದೆ.

ಶ್ರೀ ಪಿ. ವಿ. ಐತಾಳ.—ಮಂಗಳೂರು ಮತ್ತು ಬೆಂಗಳೂರಿಗೆ ಅಪವಾದ ಹಾಕುತ್ತಿದ್ದೀರಿ. ಬೇರೆ ಕಡೆ ಏಕೆ ಪ್ರಯೋಗಾರ್ಥ ಮಾಡಬಾರದಾಗಿತ್ತು ?

Sri B. V. MAGAVI.—There is another fundamental issue. This was imposed in lieu of loss of revenue on account of prohibition. After the relaxation of prohibition. have they examined it ?

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೆ ನಾನು ಆಗಲೇ ಉತ್ತರ ಕೊಟ್ಟಿದ್ದೇನೆ.

ಈ ವಿಚಾರದಲ್ಲಿ ನಾವು ರೂಲ್ಸ್ ಮಾಡಬೇಕು. ಆದುದರಿಂದ ಪರಿಸ್ಥಿತಿ ಬದಲಾದಹಾಗೆ ರೂಲ್ಸನ್ನು ಬದಲಾವಣೆ ಮಾಡದೆ ಇದ್ದರೆ ಸರ್ಕಾರ ಇದನ್ನು ಕಾರ್ಯಗತ ಮಾಡುವುದೂ ಸಾಧ್ಯವಾಗುವುದಿಲ್ಲ.

ಮಾನ್ಯ ಸದಸ್ಯರು ಮತ್ತೊಂದು ವಿಚಾರವನ್ನು ಹೇಳಿದರು. ಅದೇನೆಂದರೆ, 75 ಪರ್ಸೆಂಟು ನಷ್ಟ ಹಾರ್ಡ್ ಕೇಸಸ್‌ನಲ್ಲಿ ನೀವು waive ಮಾಡಿದ್ದೀರಿ, ಅದು favouritism ತೋರಿಸಿದ ಹಾಗೆ, ಕೆಲವೇ ಕೇಸುಗಳಲ್ಲಿ ಮಾಡಿದ್ದೀರಿ ಎಂದು. ಆ ವಿಚಾರದಲ್ಲಿ ನಾನು ಕೇವಲ ಸೆಲೆಕ್ಟ್ ಕಮಿಟಿಯವರು ಏನು ರಿಪೋರ್ಟ್ ಮಾಡಿದ್ದಾರೆ ಅದರಲ್ಲಿರತಕ್ಕ ಒಂದೇ ಒಂದು ಪ್ಯಾರಾ ಓದುತ್ತೇನೆ. ಆ ನಂತರ ಅವರು ಕಾಮೆಂಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. I will read it.

> "The committee discussed the provisions of the clause in great detail."

This is in respect of levy of sales tax with retrospective effect because the Government had to take action in view of the High Court Judgment in Mallarappa's case in respect of clause 7 :

> "The committee discussed the provisions of the clause in great detail. The representatives of the Mysore Chamber of Commerce, Bangalore, and Karnatak Chamber of Commerce, Hubli, mainly related to the provisions of this clause. It was urged by the representatives of the two chambers that business-men had not made provision for payment of sales tax to the Government from........ and to now require them to make this payment would be inequitable. The Government Pleader who appeared before the Committee on behalf of the Advocate General said that tax has been collected in large number of cases and any distinction between people who had made payments and not done, would be the difference based on accidental circumstances and could not form a proper basis for making any distinction. The committee have carefully

(ಶ್ರೀ ರಾಮಕೃಷ್ಣ ಹೆಗಡೆ)

> examined several aspects of the question and have come to the conclusion that the clause may remain as it is. The Government have assured the Commiteee that any case of hardship brought to their notice would be considered sympathetically and that the Government would exercise powers available to them to treat such cases favourably. With this assurance the committee approve of the clause as it is."

It is in this context that we have to see this.

ಮಾನ್ಯ ಸದಸ್ಯರು ಬಿಜಾಪುರ, ಬೆಳಗಾಂ, ಧಾರವಾಡ ಡಿಸ್ಟ್ರಿಕ್ಟ್‌ನವರಿಗೆ ಮಾತ್ರ ಇದನ್ನು ಕೊಟ್ಟಿದ್ದೀರಿ. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಕೊಟ್ಟಿಲ್ಲ ಎಂದು ಹೇಳಿದರು. ಈ ರಿಲೀಫ್ ಕೊಡುವಾಗಲೂ ಕೂಡ ನಾವು ಕೆಲವೊಂದು ಕ್ರೈಟೀರಿಯಾ ಹಾಕಿಕೊಂಡಿದ್ದೇವೆ.

ಶ್ರೀ ಪಿ. ವಿ. ಐತಾಳ.—ಬೇಸಿಸ್ ಇಲ್ಲದೆ ಕ್ರೈಟೀರಿಯಾ ಹಾಕಿದ್ದೀರಿ. ಯಾವ ರೂಲ್ ಪ್ರಕಾರ ಹಾಗೆ ಮಾಡಿದ್ದೀರೆಂದು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕ್ರೈಟಿರಿಯಾ ಸರಿಯಾದುದಲ್ಲ ಎಂದು ಹೇಳಲಿಲ್ಲ; ನನಗೆ ಬೇಜಾರಿಲ್ಲ. ಆದರೆ ಏನೂ ಕ್ರೈಟಿರಿಯಾ ಇಲ್ಲ ಎಂದು ಹೇಳುವಂಥದ್ದು ಸರಿಯಲ್ಲ. ಕ್ರೈಟಿರಿಯಾ ಏನು ಹಾಕಿದ್ದೇವೆ ಅದು ಸರಿಯಾಗಿ ಇಲ್ಲದೆ ಇದ್ದರೆ, ಅದು ಸರಿಯಾಗಿಲ್ಲ ಎಂದು ಹೇಳಲಿ, ನಾನು ಅದನ್ನು ಒಪ್ಪಲಿಕ್ಕೆ ತಯಾರಾಗಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಏಕೆ ರಿಲೀಫ್ ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಕೇಳಿದರು. ಕೆಲವು ಕಡೆ ವ್ಯಾಪಾರಸ್ಥರು ಇದಕ್ಕೆ ಸಂಬಂಧಪಟ್ಟಂತೆ ಟ್ಯಾಕ್ಸ್ ವಸೂಲಿ ಮಾಡಿರಲಿಲ್ಲ, ಅದು ಅವರಿಗೆ ಗೊತ್ತಿರಲಿಲ್ಲ. ಮೊದಲಿನಿಂದಲೂ ಅದು ಆಗುವುದಿಲ್ಲ ಎನ್ನುವ ಸ್ಟ್ಯಾಂಡ್ ನಾವು ತೆಗೆದುಕೊಂಡಿದ್ದೆವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆ ರೀತಿಯ ಸ್ಟ್ಯಾಂಡ್ ಅಲ್ಲಿನ ವ್ಯಾಪಾರಸ್ಥರು ತೆಗೆದುಕೊಳ್ಳದೆ ಟ್ಯಾಕ್ಸನ್ನು ವಸೂಲಿ ಮಾಡಿದ್ದರು. ಯಾರು ತಿಳಿದೂ ಟ್ಯಾಕ್ಸನ್ನು ವಸೂಲು ಮಾಡಿದ್ದಾರೆ, ಯಾರಿಗೆ ಗೊತ್ತಿದ್ದು ಟ್ಯಾಕ್ಸ್ ರಿಕವರಿ ಮಾಡಿದ್ದಾರೆ ಅಂಥವರಿಗೆ ಇಂಥ ಒಂದು ರಿಲೀಫ್ ಕೊಡತಕ್ಕದು ನ್ಯಾಯವಾದುದಲ್ಲ. ಆ ದೃಷ್ಟಿಯಿಂದ ಸರ್ಕಾರ ಇದನ್ನು ಮಾಡಿದೆಯೆ ಹೊರತು ಬೇರೇನೂ ಇಲ್ಲ.

ಆಮೇಲೆ The penalty under section 13 (2) is very high; It works to 30 per cent ; this is therefore unreasonable ಎಂದು ಟೀಕೆ ಮಾಡಿದರು. ಯಾವ ಒಬ್ಬ ವ್ಯಕ್ತಿ ಬೆಳೆದವರಿಂದ ಹಣ ತೆಗೆದುಕೊಂಡು ತನ್ನ ಹತ್ತಿರ ಇಟ್ಟುಕೊಳ್ಳುತ್ತಾನೋ ಮತ್ತು ಸರಕಾರಕ್ಕೆ ಸಕಾಲದಲ್ಲಿ ಕೊಡುವುದಿಲ್ಲವೋ That will amount actually to misappropriation. ಅದನ್ನು ಸಕಾಲದಲ್ಲಿ ಕೊಡದೆ ವಿಳಂಬಮಾಡಿದರೆ ಪೆನಾಲ್ಟಿ ಹಾಕಬಾರದು ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಅದರಂತೆಯೇ The final assessments are not being completed properly and this is causing hardship to the traders ಎಂದು ಟೀಕೆ ಮಾಡಿದರು. ಇವರಲ್ಲಿ ಕೂಡ ವಿಶೇಷ ಸತ್ಯವಿಲ್ಲ, ಕೆಲವೊಂದು ಕಾರಣದಿಂದ ಕೆಲವೊಂದು ಕೇಸುಗಳಲ್ಲಿ ಸ್ವಲ್ಪ ವಿಳಂಬವಾಗಬಹುದು. ಆದರೆ ಅಂಕಿ ಸಂಖ್ಯೆಗಳ ಆಧಾರದಮೇಲೆ ಹೇಳುವುದಾದರೆ ಬಹಳ ವಿಳಂಬ ಈ ಕೆಲಸದಲ್ಲಿ ಆಗುತ್ತಿಲ್ಲ. ಫೈನಲ್ ಅಸೆಸ್‌ಮೆಂಟ್ ಆದಷ್ಟು ಬೇಗ ನಿಗದಿ ಮಾಡುವುದಕ್ಕೆ ಪ್ರಯತ್ನ ಮಾಡಿದೆ.

ಮತ್ತೊಂದು ವಿಚಾರ ಮಾನ್ಯ ಸದಸ್ಯರು ಎತ್ತಿದರು. The provision regarding payment of assessed tax before admitting appeal is causing hardship. It should be modified by providing payment of actual admitted tax. ಇದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇದನ್ನು ಒಪ್ಪಿದರೆ ಯಾವ ಒಬ್ಬ ವ್ಯಾಪಾರಸ್ಥ ಅಸೆಸ್ ಮಾಡಿರುವುದರಿಂದ ತೆರಿಗೆ ಕೊಡುವುದಿಲ್ಲ, ಅದಕ್ಕೆ ಆಸ್ಪದವಿರಲಿ, ಇಲ್ಲದಿರಲಿ, ಅಪೀಲು ಫೈಲುಮಾಡಿ ಅಷ್ಟನ್ನೂ ಬಂಡವಾಳಕ್ಕೆ ಉಪಯೋಗಿಸಿಕೊಳ್ಳುತ್ತಾನೆ.

ಜ್ಯುಡಿಷಿಯರಿಯನ್ನು ಎಗ್ಸಿಕ್ಯುಟಿವ್‌ನಿಂದ ಬೇರೆ ಮಾಡುವ ವಿಚಾರ ಹೇಳಿದರು. ಹಾಗೆ ಬೇರೆ ಮಾಡಬೇಕೆಂಬುದು ಒಳ್ಳೆಯ ಸೂಚನೆ. ಬೆಂಗಳೂರಿನಲ್ಲಿ ಅದನ್ನು ಈಗಾಗಲೇ ಜಾರಿಗೆ ಕೊಡಲಾಗಿದೆ. ಬೇರೆ ಕಡೆ ಜಾರಿಗೆ ಕೊಡುವುದನ್ನು ವಿಚಾರಮಾಡುತ್ತೇವೆ.

ತೆರಿಗೆಯ ದರವನ್ನು ಕಡಿಮೆಮಾಡುವ ವಿಚಾರ ಹೇಳಿದರು. ಆಹಾರಧಾನ್ಯಗಳಿಗೆ ತೆರಿಗೆ ಕಡಿಮೆಮಾಡಬೇಕು ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ವಿಷಾದದಿಂದ ಹೇಳುತ್ತೇನೆ.

ಮಾನ್ಯ ಸಿದ್ಧವೀರಪ್ಪನವರು ಹೆಚ್ಚು ಟೀಕೆ ಮಾಡಿದರು. ಅದೇನೆಂದರೆ, ಸುಮಾರು ಒಂದು ಒಂದೂವರೆ ಕೋಟಿ ರೂಪಾಯಿಗಳನ್ನು ಸರಕಾರ ವ್ಯಾಪಾರಸ್ಥರಿಗೆ ರೀಫಂಡ್ ಮಾಡಿದೆ, ಅದನ್ನು ಮಾಡಬಾರದಾಗಿತ್ತು ಮತ್ತು ಅದನ್ನು ರೈತರಿಗೆ ಕೊಡಬೇಕಾಗಿತ್ತು ಎಂಬುದು. ಅದಕ್ಕೆ ಒಂದು ಪೊಲಿಟಿಕಲ್ ಮೋಟಿವ್ ಕೂಡ ಹೇಳಿದರು. ಅವರು ನಂಬುತ್ತಾರೋ ಇಲ್ಲವೋ ಗೊತ್ತಿಲ್ಲ, ಮಾನ್ಯ ಸದಸ್ಯರಿಗೆ ಈ ವಿಚಾರದಲ್ಲಿ ನಾನು ಹೇಳಬಯಸುವುದು ಇಷ್ಟು: ಸರಕಾರದವರು ತಮ್ಮ ಸ್ವೇಚ್ಛೆಯಿಂದ ಈ ಹಣವನ್ನು ವ್ಯಾಪಾರಸ್ಥರಿಗೆ ಸಲ್ಲಿಸಲಿಲ್ಲ, ಸುಪ್ರೀಂ ಕೋರ್ಟಿನಲ್ಲಿ ಒಂದು ನಿರ್ಣಯವಾಯಿತು, ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಯಾವುದಕ್ಕೆ ಲಾಗು ಇದೆಯೋ ಅದಕ್ಕೆ ಪುನಃ ಮಾರಾಟ ತೆರಿಗೆ ತೆಗೆದುಕೊಳ್ಳುವುದು ಸರಿಯಲ್ಲ, ಎರಡು ತೆರಿಗೆ ಹಾಕಿದಂತಾಗುತ್ತದೆ ಎಂದು ನಿರ್ಣಯವಾಗಿದೆ. ಇದೇ ರೀತಿಯಲ್ಲಿ ಮತ್ತೊಂದು ಸಂದರ್ಭದಲ್ಲಿ ಹೈಕೋರ್ಟಿನಲ್ಲಿ ನಿರ್ಣಯವಾದುದರಮೇಲೆ ಅನಿವಾರ್ಯವಾಗಿ ವಾಪಸು ಕೊಡಬೇಕಾಯಿತು. ಮೈಸೂರು ಹೈಕೋರ್ಟಿನಲ್ಲಿ ನಿರ್ಣಯವಾಗುವವರೆಗೆ ಮೈಸೂರು ಸರಕಾರ ಒಂದು ಸ್ಟ್ಯಾಂಡ್ ತೆಗೆದುಕೊಂಡಿತ್ತು. ಅದೇನೆಂದರೆ, ತೆರಿಗೆ ವಸೂಲಾಗಿದೆ, ಆದ್ದರಿಂದ ಕೊಡಬೇಕಾಗಿಲ್ಲ ಎಂಬುದು ಆದರೆ ಹೈಕೋರ್ಟಿನವರು ತಮ್ಮ ಜಡ್ಜ್‌ಮೆಂಟ್‌ನಲ್ಲಿ ಈ ರೀತಿಯಾಗಿ ಹೇಳಿದ್ದಾರೆ:

> "In these cases therefore there is no doubt that the assessing authority was bound to rectify the orders. The direct consequence of this is to quash the order itself levying tax on the petitioners. Hence in those cases there will have to be an order quashing the assessment orders straightaway and directing refund of the tax collected."

This is the direction from tha Mysore High Court. May I ask the hon'ble. Member who is a very able Advocate himself whether in the face of such direction from the High Court it is possible for the State Government to withhold payment ?

SRI H. SIDDAVEERAPPA.—I am not now finding fault with regard to refund because you were bound by the Supreme Court decision and the High Court decision. I have read both the judgments. What they say is that they must refund to the persons from whom it is collected. It was not collected from the commission agent or the *dalal*. The man who really paid was the one who sold at the first source, *viz.*, the producer or the consumer. It is only to those two classes that it must be refunded. That is all my point.

SRI RAMAKRISHNA HEGDE.—I am coming to that. Supposing in a particular transaction the sales tax is not collected from the ryots. Under the provisions of the Act we hold the merchant or the commission agent concerned responsible and liable to pay the tax. In the High Court order it is absolutely clear that this amount will have to be refunded to the petitioners not to the ryots. So, Government was helpless.

SRI H. SIDDAVEERAPPA.—It is not so; I beg to differ from the Hon'ble Minister. Herein is a fundamental issue. The point really is,

(SRI H. SIDDAVEERAPPA)

if really that tax had to be refunded according to the Supreme Court decision, it should be refunded to the persons from whom it was collected. They could have moved the High Court and sought a direction as to whom it should be refunded. The alternative would have been to deposit the amount in the High Court, file an inter-pleader suit and say that whoever was entitled might take it. I have absolutely no doubt in my mind that you have refunded the amount to a person who has not paid this tax. Simply by an adventitious circumstance he was only a trustee for the time being of the money.

Mr. CHAIRMAN.—The viewpoint of the hon'ble Member is known to the Hon'ble Minister.

Sri H. SIDDAVEERAPPA.—I want him to proceed with the matter and not stop there. I want him to get it further examined by the Law Department.

Sri RAMAKRISHNA HEGDE.—I have also studied law to some extent. It is absolutely patent that we have to refund, if at all, to the persons from whom we have collected the amount; our liability is to those people and not to the people who have paid the tax. It is a matter between the ryot and the merchant or the commission agent, as the case may be, to settle among themselves. I shall, however, get this matter examined again and if it is possible to implement it, I have no objection at all.

Sri H. SIDDAVEERAPPA.—I would request the Government to get it examined.

Sri P. V. AITHAL.—What about raising the taxable limit from Rs. 10,000 to 20,000 and the composition limit from Rs. 15,000 to 25,000; it is a matter affecting the poor dealers.

Sri RAMAKRISHNA HEGDE.—I did not refer to it at all because I have already answered it on the floor of the House on a different occasion when a question was raised. The Government cannot agree to raise the limit either in respect of composition or the taxable limit.

Sri B. V. MAGAVI.—I did not get sufficient time to put forward all my points in my speech. Will I get some time for clarification after the Minister's speech?

Mr. CHAIRMAN.—Let the hon'ble Member have patience.

12-30 P.M.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ರಾಜಯ್ಯಶೆಟ್ಟರು ಬಹಳಷ್ಟು ಟ್ಯಾಕ್ಸ್ ಇವೇಷನ್ ಆಗುತ್ತಿದೆ ಎಂದು ಹೇಳುತ್ತಾ, ಉದಾಹರಣೆಗೆ ತಮ್ಮ ಊರಾದ ಚಿಕ್ಕನಾಯಕನಹಳ್ಳಿಯಲ್ಲಿ ಹೋದವರ್ಷ ಎಷ್ಟು ಆಗಿತ್ತೊ, ಅದಕ್ಕಿಂದ 4—5ರಷ್ಟು ಕೂಡ ಆಗಿಲ್ಲ ಎಂದು ಹೇಳಿದರು. ನನ್ನ ಹತ್ತಿರ ಇರತಕ್ಕ ಅಂಕಿಅಂಶ ಹೋದ ವರ್ಷ 66-67ರಲ್ಲಿ ತಿಪಟೂರು, ಚಿಕ್ಕನಾಯಕನಹಳ್ಳಿ ಮತ್ತು ತುಮಕೂರು ಈ ಮೂರೂ ಒಂದು ಸರ್ಕಲ್ ಇದರ ಬಗ್ಗೆ ಹೇಳುತ್ತೇನೆ. ಪ್ರತ್ಯೇಕವಾಗಿ

ಇಲ್ಲ. ಇಡೀ ವರ್ಷದಲ್ಲಿ 67 ಸಾವಿರ ಚಿಲ್ಲರೆ ವಸೂಲಾಗಿದೆ. ಈ ವರ್ಷ ಫೆಬ್ರುವರಿಯುವರೆಗೆ ಮಾತ್ರ 61—62 ಸಾವಿರ ರೂಪಾಯಿ ವಸೂಲಾಗಿದೆ. ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಆಗಲಿ, ಅಥವಾ ಸೇಲ್ಸ್‌ಟ್ಯಾಕ್ಸ್ ಆಗಲಿ ಇದರಲ್ಲಿ ಚೋರೂಕೂಡ ಸೋರಿಹೋಗಿಲ್ಲ ಎಂದು ನಾನು ಎಂದೂ ಹೇಳಿಲ್ಲ, ಅದು ಸಾಧ್ಯವೂ ಇಲ್ಲ ಅಂತ ಒಪ್ಪಿಕೊಂಡಿದ್ದೇನೆ. ಎಲ್ಲಿಯವರೆಗೆ ನಮ್ಮ ಕಲೆಕ್ಷನ್ ಮೆಷಿನರಿ ಮತ್ತು ಕೊಡತಕ್ಕ ಜನರು ಇವರಿಬ್ಬರಲ್ಲೂ ಸಂಪೂರ್ಣವಾದ ಪ್ರಾಮಾಣಿಕತೆ ಬರುವುದಿಲ್ಲವೋ, ಜನತೆಗೆ ಇದು ಸರ್ಕಾರಕ್ಕೆ ಸಲ್ಲಬೇಕಾದ ದುಡ್ಡು ಅಂತ ಭಾವನೆ ಬರುವುದಿಲ್ಲವೋ ಅಲ್ಲಿಯವರೆಗೂ ಬೇಕಾದಷ್ಟು ಚೆಕ್‌ಪೋಸ್ಟ್ ತೆರೆಯಬಹುದು, ಬೇಕಾದಷ್ಟು ರೂಲ್ಸ್ ಮಾಡಬಹುದು, ಬೇಕಾದಷ್ಟು ಶಿಕ್ಷೆ ಮಾಡಬಹುದು ನೂರಕ್ಕೆ ನೂರು ವಸೂಲಾಗುತ್ತದೆ ಅನ್ನುವುದು ಸಾಧ್ಯವಿಲ್ಲ. ಶ್ರೀಮಾನ್ ರಾಜಯ್ಯಶೆಟ್ಟರು ಮದರಾಸಿನಲ್ಲಿ 60 ಕೋಟಿ ರೂಪಾಯಿನಷ್ಟು ಸೇಲ್ಸ್‌ಟ್ಯಾಕ್ಸ್ ವಸೂಲಾಗುತ್ತದೆ ನಮ್ಮಲ್ಲಿ 32 ಕೋಟಿ ರೂಪಾಯಿ ಮಾತ್ರ ಮಾಡಿದೆ ಎಂದು ಹೇಳಿದರು. ಮದರಾಸಿನಲ್ಲೂ ಕೂಡ 60 ಕೋಟಿ ರೂಪಾಯಿಗಳಷ್ಟು ಕೊಟ್ಟಿಲ್ಲ. ನನ್ನ ಗಮನಕ್ಕೆ ಬಂದಂತೆ ಮದರಾಸಿನಲ್ಲಿ 2 ವರ್ಷದಿಂದ 40 ಕೋಟಿ ರೂಪಾಯಿ ಇತ್ತು ಈಗ ಬಹುಶಃ 50 ಕೋಟಿ ರೂಪಾಯಿಗಳ ಹತ್ತಿರ ಮುಟ್ಟಿರಬೇಕು. ಅದು ಹೇಗೆ ಇರಲಿ, ಮದ್ರಾಸಿಗೂ ನಮಗೂ ತುಲನೆ ಮಾಡುವುದು ಸರಿಯಲ್ಲ. ಮದರಾಸಿನಲ್ಲಿ ಮದರಾಸ್ ಪೋರ್ಟ್ ಇದೆ. ಯಾವ ರಾಜ್ಯದಲ್ಲಿ ದೊಡ್ಡ ಬಂದರು ಇರುತ್ತದೆಯೋ ಅಲ್ಲಿ ವ್ಯಾಪಾರ ವ್ಯವಹಾರ ಆಗುವುದೂ ಕೂಡ ಹೆಚ್ಚು; ಮತ್ತು ಮದರಾಸಿನಲ್ಲಿ ಕೈಗಾರಿಕೆಗಳು ನಮಗಿಂತ ಹೆಚ್ಚಾಗಿವೆ ಆದ್ದರಿಂದ ಸ್ವಾಭಾವಿಕವಾಗಿ ಅವರ ಸೇಲ್ಸ್ ಟ್ಯಾಕ್ಸಿನಿಂದ ಬರುವ ವರಮಾನ ಹೆಚ್ಚು. ಕಳೆದ 4 ವರ್ಷದ ಅಂಕಿಸಂಖ್ಯೆಗಳನ್ನು ಈ ಮನೆಯ ಮುಂದೆ ಇಟ್ಟಿದ್ದೇನೆ, ಅದರ ಆಧಾರದ ಮೇಲೆ ನೋಡುವುದಾದರೆ ನಮ್ಮ ಮೈಸೂರು ರಾಜ್ಯದ ಸೇಲ್ಸ್‌ಟ್ಯಾಕ್ಸ್ ಕಲೆಕ್ಷನ್‌ನಲ್ಲಿ ಬಹಳಮಟ್ಟಿಗೆ ಉತ್ತಮ ಆಗಿದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಎಕ್ಸೈಜ್‌ಗೆ ಸಂಬಂಧಪಟ್ಟಂತೆ ಕೇವಲ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಸದಸ್ಯರು ಎಲ್ಲರಿಗೂ ಗೊತ್ತಿರುವ ಹಾಗೆ ಸುಮಾರು 6—7 ತಿಂಗಳಿನಿಂದ ಈಚೆಗೆ ಈ ಪ್ರೊಹಿಬಿಷನನ್ನು ನಮ್ಮ ರಾಜ್ಯದಲ್ಲಿ ಸಡಿಲಗೊಳಿಸಿದ್ದೇವೆ. ಅದರಿಂದ ಎಷ್ಟು ವರಮಾನ ಬರುತ್ತದೆ ಎಂಬುದನ್ನೂ ಕೂಡ ಹೇಳಿದ್ದೇನೆ. ಈಗ ಕೆಲವು ಜನ ಸದಸ್ಯರು ವ್ಯಥೆಯಿಂದ ಹೇಳಿದರು, ಇದರಿಂದ ಬಹಳ ದುಷ್ಪರಿಣಾಮವಾಗಿದೆ ಅದಕ್ಕಾಗಿ ಇದನ್ನು ಪುನರಾಲೋಚನೆ ಮಾಡಿ ಎಂದು. ಅನೇಕ ವರ್ಷಗಳಿಂದ ತಡೆಹಾಕಿದ ಈ ಒಂದು ಕೆಲಸ ಏನಿದೆ ಇದನ್ನು ಈಗ ತೆಗೆದುಹಾಕಿದ್ದರಿಂದ— ಒಂದು ಸಲ ಆ ತುರ್ತಿನಲ್ಲೋ ಅಥವಾ ಏನೊಂದು ಉತ್ಸಾಹ ಇದೆ ಆದ್ದರಿಂದಲೋ ಕೆಲವು ಕಡೆ ಕೆಲವೊಂದು ಘಟನೆಗಳು ಆಗಿರಬಹುದು. ಆದರೆ ಎಲ್ಲಿ ಮೊದಲಿನಿಂದಲೂ ಪ್ರೊಹಿಬಿಷನ್ ಜಾರಿಯಲ್ಲಿ ಇರಲಿಲ್ಲ ಉದಾಹರಣೆಗೆ, ಗುಲ್ಬರ್ಗದಲ್ಲಿ, ರಾಯಚೂರಿನಲ್ಲಿ, ಬೆಂಗಳೂರು ಜಿಲ್ಲೆಯಲ್ಲಿ ಯಾವುದೇ ಒಂದು ತರಹದ ಪ್ರಮಾದ ಆದದ್ದು ನನ್ನ ದೃಷ್ಟಿಗೆ ಬರಲಿಲ್ಲ. ಪಾನನಿರೋಧದ ತತ್ವದ ದೃಷ್ಟಿಯಿಂದ ಅದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾದ ವಿಚಾರ, ಆದರೆ ಕಾಯಿದೆ ಮುಖಾಂತರ ಇದನ್ನು ಜಾರಿಗೆ ತರುವುದು ಕಷ್ಟ ಅಷ್ಟೇ ಅಲ್ಲ ಇದು ಅಸಾಧ್ಯ ಅಂತ ಹೇಳುವುದನ್ನು ಒಪ್ಪಿಕೊಳ್ಳಬೇಕು. ನಾನು ಒಂದು ಸಂಧರ್ಭದಲ್ಲಿ ಹೇಳಿದೆ, ಈ ಪಾನನಿರೋಧವನ್ನು ನಾವು ಶಿಕ್ಷಣ ಮತ್ತು ಪ್ರಚಾರಮಾಡಿ ಜಾರಿಯಲ್ಲಿ ತರಬೇಕೇ ಹೊರತು ಮತ್ತು ಅದಕ್ಕೆ ಅಗತ್ಯವಾದಂತಹ ಜನಜಾಗೃತಿ, ಸಮಾಜ ಜಾಗೃತಿಯನ್ನು ಉಂಟುಮಾಡುವುದಕ್ಕೆ ಪ್ರಯತ್ನಮಾಡಿ ಅದರ ಮುಖಾಂತರ ಜಾರಿಗೆ ತರಬೇಕೇ ಹೊರತು ಕಾಯಿದೆಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು ಉದಾಹರಣೆ ಹೇಳುತ್ತೇನೆ, ಹಿಂದೆ ಹೇಳಿದ್ದ ಅದನ್ನು ಈಗ ಪುನರುಚ್ಚಾರ ಮಾಡುತ್ತೇನೆ, ಶಾರದಾ ಬಿಲ್ ಅಂತ ಹೇಳಿ ಒಂದು ಬಿಲ್ಲನ್ನು ತಂದು ಬಾಲ್ಯವಿವಾಹವನ್ನು ನಿರೋಧಿಸಲಾಯಿತು. 8—10—11 ವರ್ಷದ ಹೆಣ್ಣುಮಕ್ಕಳನ್ನು ಕದ್ದು ಮದುವೆ ಮಾಡುತ್ತಾ ಇದ್ದರು ಅಂದರೆ ಏನಾಯಿತು, ಯಾವ ಕಾಯಿದೆಗೆ, ಯಾವ ಸುಧಾರಣೆಗೆ ಸಮಾಜ ಇನ್ನೂ ತಯಾರಾಗಿಲ್ಲವೋ ಆ ಸುಧಾರಣೆಯನ್ನು ಕಾಯಿದೆ ಮುಖಾಂತರ ಸಮಾಜದ ಮೇಲೆ ಹೊರಿಸಲಿಕ್ಕೆ ಹೋದರೆ ಎಂದೆಂದಿಗೂ ಅದು ಸಾಧ್ಯವಾಗುವುದಿಲ್ಲ ಆದರಿಂದ ದುಷ್ಪರಿಣಾಮವಾಗುತ್ತದೆ. ಇಂದು ಬಾಲ್ಯವಿವಾಹ ಸಮಾಜದಲ್ಲಿ ಅಥವಾ ದೇಶದಲ್ಲಿ ಇದೆಯೇ ಎಂದು ಕೇಳುತ್ತೇನೆ. ಯಾವ ಒಬ್ಬ ತಂದೆತಾಯಿಯೂ ಕೂಡ ಹೆಣ್ಣುಮಕ್ಕಳಿಗೆ 18—20 ವರ್ಷ ಆಗುವವರೆಗೂ ಕೂಡ ಸಾಕಾದಷ್ಟು ವಿದ್ಯಾಭ್ಯಾಸವನ್ನು ಕೊಟ್ಟು ಅವರ ವಿದ್ಯಾಭ್ಯಾಸ ಮುಗಿಯುವವರೆಗೂ ಕೂಡ ಅವರಿಗೆ ಮದುವೆ ಮಾಡತಕ್ಕ ವಿಚಾರ ಇವತ್ತು ಮಾಡುವುದಿಲ್ಲ. ಅದೇ ರೀತಿ ಈ ಪಾನನಿರೋಧದ ವಿಚಾರದಲ್ಲೂ ಕೂಡ ಮೊಟ್ಟಮೊದಲು ಸಮಾಜದಲ್ಲಿ ಇದರಿಂದ ತನ್ನ ಜೀವನಕ್ಕೆ ಕೆಡಕು, ಸಮಾಜಕ್ಕೆ ಕೆಡಕು, ದೇಶಕ್ಕೆ ಕೆಡಕು ಎಂಬ ಒಂದು ಜಾಗೃತಿಯನ್ನುಂಟು

(ಶ್ರೀ ರಾಮಕೃಷ್ಣ ಹೆಗಡೆ)

ಮಾಡಬೇಕು. ಇದರಿಂದ ಏನು ದುಷ್ಪರಿಣಾಮವಾಗಿದೆ ಎಂದು ಹೇಳುವುದನ್ನು ಎರಡು ನಿಮಿಷದಲ್ಲಿ ಈ ಪುಸ್ತಕದಿಂದ ಓದಿ ಹೇಳುತ್ತೇನೆ :

> "The noble experiment of prohibition had the immediate effect of filling almost the entire Nation with the overwhelming desire to drink alcohol in every shape or form. In a singale 'Dry' year, the victims of the noble experiment consumed 997,000,000 gallons of the forbidden liquid, about half of which was smuggled into to country from abroad. Bootlegging became the largest single industry in America employing some 800,000 individuals and grossing an estimated annual revenue of 4,000 million dollars. And the largest and most profitable bootlegging centre—the plum position in the country—was the New York Waterfront".

ಮಾನ್ಯ ಅಧ್ಯಕ್ಷರೇ, ಆದ್ದರಿಂದ ನಾವು ವ್ಯಾವಹಾರಿಕ ದೃಷ್ಟಿಯಿಂದ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಈಗಲೇ ಇದನ್ನು ಪುನರ್ವಿಮರ್ಶೆ ಮಾಡುವಂತಹದ್ದು ಸಾಧ್ಯವಿಲ್ಲ. ಮತ್ತು ಕೆಲವು ಸದಸ್ಯರು ಸ್ಕೂಲ್ ಹತ್ತಿರ, ಹರಿಜನರ ಕಾಲೋನಿ ಹತ್ತಿರ, ದೇವಸ್ಥಾನಗಳ ಹತ್ತಿರ ಈ ಅಂಗಡಿಗಳನ್ನು ಇಡಕೂಡದು ಎಂದು ಹೇಳಿದರು, ಅದನ್ನು ಸರ್ವಥಾ ಒಪ್ಪುತ್ತೇನೆ ಮತ್ತು ಅದರ ಬಗ್ಗೆ ಏನು ಕಾರ್ಯಕ್ರಮ ಅಗತ್ಯ ಇದೆ ಅದನ್ನು ತಗೆದುಕೊಳ್ಳುತ್ತೇವೆ. ಶ್ರೀಮಾನ್ ಅಗ್ನಿಹೋತ್ರಿಯವರು ಟೆಂಪರೆನ್ಸ್ ಕಮಿಟಿ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಗಂಭೀರವಾಗಿ ಪರಿಶೀಲನೆ ಮಾಡಿ, ಆಳವಾಗಿ ಪರಿಶೀಲನೆಮಾಡಿ, ಗಂಭೀರ ದೃಷ್ಟಿಯಿಂದ ಹೇಳಿದ್ದೇನೆ. ಇಂದು ಶಾಲೆಯಲ್ಲಿ, ಕಾಲೇಜಿನಲ್ಲಿ, ಯೂನಿವರ್ಸಿಟಿಯಲ್ಲಿ ಓದತಕ್ಕ ಮಕ್ಕಳಿಗೆ ಇದರಿಂದಾಗತಕ್ಕ ಕೆಡಕೇನು ಎಂಬುದನ್ನು ಮನವರಿಕೆಮಾಡಿ ಅವರ ಮನಸ್ಸಿನಲ್ಲಿ ಪ್ರತಿಬಂಧವನ್ನುಂಟುಮಾಡಬೇಕು. ಶಾಲಾ ಪುಸ್ತಕಗಳಲ್ಲಿ ಲೇಖನಗಳನ್ನು ಬರೆಸಬೇಕು, ಪತ್ರಿಕೆಗಳಲ್ಲಿ ಲೇಖನಗಳು ಬರಬೇಕು. ಇದು ಅನಿಷ್ಟ ಎಂಬತಕ್ಕ ಅರಿವನ್ನು ಸಮಾಜದಲ್ಲಿ ಉಂಟುಮಾಡಬೇಕು. ಆ ಜವಾಬ್ದಾರಿ ಕೇವಲ ಸರ್ಕಾರದವರದೇ ಅಲ್ಲ ಸಾರ್ವಜನಿಕರದು, ಸಾರ್ವಜನಿಕ ಮುಖಂಡರದು, ಅದಕ್ಕೆ ಒಂದು ಅನುಕೂಲತೆ ಮಾಡಿಕೊಡಬೇಕೆಂದು ಮಾಡಿದ್ದೇವೆ.

ಮಾನ್ಯ ಅಧ್ಯಕ್ಷರೇ, ಕೆಲವೊಂದು ಟೀಕೆಗಳು ಈ ಹರಾಜು ಮಾಡಿಸಿದ ಬಗ್ಗೆ ಬಂತು. ಅದೇನೆಂದರೆ, ಒಂದು ಜಿಲ್ಲೆ ಅಥವಾ ಎರಡು ಜಿಲ್ಲೆಗಳನ್ನು ಸೇರಿಸಿ ಆಕ್ಷನ್‌ಮಾಡುತ್ತೀರಿ, ಅದನ್ನು ಒಂದು ತಾಲ್ಲೂಕು ಅಥವಾ ಹೋಬಳಿ ಲೆವೆಲ್‌ನಲ್ಲಿ ಆಕ್ಷನ್ ಮಾಡಬೇಕು ಎಂದು ಹೇಳತಕ್ಕ ಟೀಕೆ ಇದೆ. ಎರಡನೆಯದಾಗಿ ಶ್ರೀಮಾನ್ ಇದಿನಬ್ಬ ಮತ್ತು ಇನ್ನೊಬ್ಬರು ಶ್ರೀಮಾನ್ ಅಗ್ನಿಹೋತ್ರಿಯವರು ಅಂತ ಕಾಣುತ್ತದೆ, ಕಳೆದ ವರ್ಷ ಪಾನನಿರೋಧವನ್ನು ಸಡಿಲಿಸಿದರಿ, 6 ತಿಂಗಳಿಗೆ ಹರಾಜನ್ನು ಹಾಕಿದ್ದರೆ ಬಹಳಷ್ಟು ಲಾಭವಾಗುತ್ತಾ ಇತ್ತು ಒಂದೂವರೆವರ್ಷಕ್ಕೆ ಮಾಡಕೂಡದಾಗಿತ್ತು ಅಂತ ಹೇಳಿದರು. ಅದಕ್ಕೆ ಸ್ಪಷ್ಟವಾದ ಉತ್ತರ ಇದು, ಮೊದಲನೆಯದಾಗಿ ನಾವು ಹರಾಜನ್ನು ಹಾಕುವಾಗ ಹೋಬಳಿಯನ್ನೂ ಹಾಕುತ್ತೇವೆ, ತಾಲ್ಲೂಕನ್ನೂ ಹಾಕುತ್ತೇವೆ ಮತ್ತು ಡಿಸ್ಟ್ರಿಕ್ಟನ್ನೂ ಹಾಕುತ್ತೇವೆ. ಕಳೆದ ವರ್ಷ ಎರಡು ಡಿಸ್ಟ್ರಿಕ್ಟ್‌ನ್ನು ಸೇರಿಸಿ ಹಾಕಿದ್ದೇವೆ. ಈಗ ಆ ವಿಚಾರದಲ್ಲಿ ಒಂದು ಸ್ಪಷ್ಟವಾದ ತೀರ್ಮಾನ ಕ್ರಮೇಣ ಸಣ್ಣಪುಟ್ಟ ಕಂಟ್ರಾಕ್ಟುದಾರರುಗಳಿಗೆ ಪ್ರೋತ್ಸಾಹ ಕೊಡುವುದು ನಿಮ್ಮ ಉದ್ದೇಶವೇ ಅಥವಾ ಬೇರೆ ಏನಾದರೂ ಉದ್ದೇಶ ಇದೆಯೇ ಎಂಬ ಪ್ರಶ್ನೆ ಇದೆ, ಒಪ್ಪುತ್ತೇನೆ. ಎರಡು ಡಿಸ್ಟ್ರಿಕ್ಟ್ ಅಥವಾ ಮೂರು ಡಿಸ್ಟ್ರಿಕ್ಟ್‌ಗಳನ್ನು ಒಂದುಗೂಡಿಸಿದರೆ ಎಲ್ಲಾ ಜನರಿಗೂ ಕಾಂಪೀಟ್ ಮಾಡತಕ್ಕ ಶಕ್ತಿ ಇರಲಿಕ್ಕಿಲ್ಲ. ಆದ್ದರಿಂದ ತಾಲ್ಲೂಕನ್ನೂ ಹರಾಜು ಹಾಕುತ್ತೇವೆ, ಡಿಸ್ಟ್ರಿಕ್ಟನ್ನೂ ಹರಾಜು ಹಾಕುತ್ತೇವೆ, ಕಾಂಬಿನೇಷನ್ ಆಫ್ ಡಿಸ್ಟ್ರಿಕ್ಟನ್ನು ಹರಾಜು ಹಾಕುತ್ತೇವೆ, ಯಾವುದರಲ್ಲಿ ಹೆಚ್ಚು ಹಣ ಬರುತ್ತದೆ ಎಂಬುದನ್ನು ತಿಳಿದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಹೆಂಡ, ಸಾರಾಯಿ, ಬೀರ್—ಇವುಗಳಲ್ಲಿ ಯಾವುದು ರುಚಿ ಎಂಬುದನ್ನು ಹೇಳುತ್ತೀರಾ?

(ಉತ್ತರವಿಲ್ಲ)

ಶ್ರೀ ರಾಮಕೃಷ್ಣ ಹೆಗಡೆ.—ಈ ರೀತಿಯಲ್ಲಿ ತಾಲ್ಲೂಕು ಮತ್ತು ಅದಕ್ಕೂ ಕೆಳಗಿನ ಮಟ್ಟದಲ್ಲಿ ನಾವು ಹರಾಜು ಹಾಕಿದಾಗ ರಾಯಚೂರು, ಗುಲ್ಬರ್ಗಾ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಆಕ್ಷನ್‌ಗೆ ಬಿಡ್ಡರ್ಸ್ ಇಲ್ಲ ಮತ್ತು ಟೆಂಡರ್ ಹಾಕಿದವರೂ ಸಹಾ ಇಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಮಂತ್ರಿಗಳು ಹೇಳಿದ್ದು ಅಸತ್ಯವೆಂದು ನಾನು ಹೇಳುತ್ತೇನೆ. ರಾಯಚೂರು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ತಾಲ್ಲೂಕು ಮತ್ತು ಹೋಬಳಿಗಳಲ್ಲಿ ಎಷ್ಟು ಟೆಂಡರುದಾರರಿಗೆ ಕೊಟ್ಟಿದ್ದಾರೆ? ಇವರು ದೊಡ್ಡ ದೊಡ್ಡ ಕಂಟ್ರಾಕ್ಟರ್ಸ್ ಸಹಾಯ ತೆಗೆದುಕೊಂಡು ಸಣ್ಣ ಸಣ್ಣ ಕಂಟ್ರಾಕ್ಟರುಗಳನ್ನು ಬಲ ಕೊಡುತ್ತಿದ್ದಾರೆ.

Sri DIGAMBARA RAO B. KALMANKAR.—What about those small contractors who make living by that.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ನಾನು ಹೇಳಿದಂಥ ಮಾತು ಅಸತ್ಯವೆಂದು ಹೇಳಿದರು. ಇದು ಅಸತ್ಯವೋ ಸತ್ಯವೋ, ಸತ್ಯ ಯಾರು ಮಾತನಾಡುತ್ತಾರೋ ಅಸತ್ಯ ಯಾರು ಮಾತನಾಡುತ್ತಾರೋ ಎಂಬುದು ನಾಳೆ ಮಾನ್ಯ ಸದಸ್ಯರಿಗೇ ಗೊತ್ತಾಗುತ್ತದೆ. ಮಾನ್ಯ ಸದಸ್ಯರು ಬೇಕಾದರೆ ಒಂದು ಪ್ರಶ್ನೆಯನ್ನು ಇದರ ಬಗ್ಗೆ ಕಳುಹಿಸಿದರೆ ಆಗ ಸತ್ಯ ಯಾರು ಮಾತನಾಡುತ್ತಾರೆ, ಅಸತ್ಯ ಯಾರು ಮಾತನಾಡುತ್ತಾರೆಂಬುದು ಗೊತ್ತಾಗುತ್ತದೆ. ಅಸತ್ಯವನ್ನು ಇಲ್ಲಿ ಮಾತನಾಡಬೇಕೆಂದು ನಾನು ಇಲ್ಲಿಲ್ಲ. ಅವರಿಂದ ಯಾವ ತರಹ ಕೆಲಸವನ್ನೂ ಮಾಡಿಸಿಕೊಳ್ಳಬೇಕೆಂದು ನನಗೆ ಮನಸ್ಸು ಇಲ್ಲ. ಇನ್ನು 6 ತಿಂಗಳುಗಳಿಗೆ ಹರಾಜು ಹಾಕಬೇಕು, ಒಂದು ವರ್ಷಕ್ಕೆ ಹಾಕಬಾರದು ಎಂಬುದಾಗಿ ಸೂಚನೆ ಕೊಟ್ಟರು. ಒಳ್ಳೆಯ ಯೋಚನೆಯನ್ನು ಮಾಡಿದ್ದಾರೆ. ಈ ವಿಚಾರ 20-22-10 ವರ್ಷಗಳಿಂದಲೂ ಇದೆ. ಅನೇಕ ಕಡೆಗಳಲ್ಲಿ ಆ ಮರಗಳೇ ಇಲ್ಲ. ಸರಂಜಾಮುಗಳ ತೊಂದರೆ ಇದೆ. ಇದೆಲ್ಲಾ ಸಿಗುವುದಿಲ್ಲ. ಅದಕ್ಕಾಗಿ 6 ತಿಂಗಳುಗಳಿಗೆ ಹರಾಜು ಹಾಕಿದರೆ ಅದರಿಂದ ಬರತಕ್ಕ ಉತ್ಪನ್ನ ಕೇವಲ ನಿಮಿತ್ತ ಮಾತ್ರ ಆಗುತ್ತದೆಂದು ಒಂದು ಭಯ. 6 ತಿಂಗಳು ಮತ್ತು 1 ವರ್ಷ– ಹೀಗೆ ಹರಾಜು ಹಾಕುತ್ತೇವೆ. ಅದಕ್ಕಿಂತ ಹೆಚ್ಚು ಅಂದರೆ ಒಂದೂವರೆ ವರ್ಷಕ್ಕೆ ಖಾಯಂ ಹರಾಜು ಹಾಕುತ್ತೇವೆ. ಇದನ್ನು ಉತ್ಪನ್ನ ಹೆಚ್ಚು ಬರುತ್ತದೆಂಬ ದೃಷ್ಟಿಯಿಂದ ಮಾಡುತ್ತಿದ್ದೇವೆ. ಅದರಿಂದ ಅನೇಕ ಕಂಟ್ರಾಕ್ಟರಿಗೆ ಲಾಭ ಆಗಿರಬೇಕು. ಒಂದೂವರೆ ವರ್ಷದಿಂದ ಇದನ್ನು ಖಾಸಗಿಯಾಗಿ ಮತ್ತೊಮ್ಮೆ ಕೆಲವು ಕಡೆಗಳಲ್ಲಿ ಅಂದರೆ ಯಾವ್ಯಾವ ಭಾಗಗಳಲ್ಲಿ ಪ್ರೊಹಿಬಿಷನ್ ಜಾರಿಯಲ್ಲಿದೆಯೋ ಅಲ್ಲಿಂದ ಅರ್ಜಿ, ಪತ್ರಗಳು ಬರುತ್ತಾ ಇವೆ. ಉದಾಹರಣೆಗೆ ಹೇಳುವುದಾದರೆ, ಬಿದರ್‌ನಿಂದ ಅರ್ಜಿಗಳು ಪುನಃ ಪುನಃ ಬಂದಿವೆ. ಇವನ್ನು ಏಕೆ ಹಾಗೆಯೇ ಇಟ್ಟಿದ್ದಾರೋ ಅದನ್ನು ತೆಗೆದುಹಾಕಬೇಕು ಎಂದು ಹೇಳುತ್ತಿದ್ದೇನೆ. ಅದನ್ನು ಯೋಚನೆಮಾಡಿ ಸರ್ಕಾರ ಈಗ ನಿರ್ಧಾರಮಾಡಿದೆ. ಬಿದರ್ ಇಡೀ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಕುಮುಟ ಮತ್ತು ಹೊನ್ನಾವರ–ಇಷ್ಟು ಕಡೆಗಳಲ್ಲಿ ಅದು ಜಾರಿಗೆ ಬರುವುದು ಜೂನ್ ಮೊದಲನೆಯ ತಾರೀಖಿನಿಂದ.

ಶ್ರೀ ಎಸ್. ಎಸ್. ಅರಕೇರಿ (ಬೆಳ್ಳೊಳ್ಳಿ).—ಬಿಜಾಪುರ ಮತ್ತು ಜಮಖಂಡಿ ತಾಲ್ಲೂಕುಗಳಲ್ಲಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನೂ ಯೋಚನೆ ಮಾಡೋಣ. ಬರುವ ಜೂನ್ 1ನೇ ತಾರೀಖಿನಿಂದ ಪಾನನಿರೋಧವನ್ನು ಇನ್ನೂ ಸಡಿಲಿಸಬೇಕೆಂದು ತೀರ್ಮಾನ ಮಾಡಿದ್ದೇವೆಂಬುದನ್ನು ಈ ಸಂದರ್ಭದಲ್ಲಿ ಈ ಸಭೆಗೆ ತಿಳಿಸುವುದಕ್ಕೆ ಬಹಳ ಸಂತೋಷವಾಗುತ್ತದೆ. ಇದು ಕೈಗಾರಿಕೆಗಳಿಗೆ ನೇರವಾಗಿ ಸಂಬಂಧ ಪಟ್ಟಿಲ್ಲ. ಕೈಗಾರಿಕೆಗಳು ಇನ್ನೂ ಹೆಚ್ಚಿಗೆ ಅಭಿವೃದ್ಧಿಪಡಿಸಬೇಕು. ಕೇಂದ್ರ ಸರ್ಕಾರದವರು ಈಗ ಸುಮಾರು 3 ಕೋಟಿ ರೂಪಾಯಿಗಳ ವೆಚ್ಚ ತಗಲತಕ್ಕ ರಬ್ಬರ್ ಪ್ಲಾಂಟೇಷನ್ ಸ್ಕೀಮನ್ನು ರಿಹ್ಯಾಬಿಲಿಟೇಷನ್ ಪ್ರೋಗ್ರಾಂನಲ್ಲಿ ಮಂಜೂರು ಮಾಡಿದ್ದೇವೆ. ಅದಕ್ಕಾಗಿ ಇವತ್ತು 19 ಲಕ್ಷ ರೂಪಾಯಿಗಳ ಮಂಜೂರಾಗಿರತಕ್ಕಂಥ ಟೆಲಿಗ್ರಾಂ ಬಂದಿದೆಯೆಂದು ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದರು. ಆ ವಿಚಾರವನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಸಂತೋಷವಾಗುತ್ತದೆ.

ಇನ್ನು ಕೈಗಾರಿಕೆಗಳ ವಿಚಾರ. ನನಗೆ ಇರತಕ್ಕ ಸ್ವಲ್ಪ ಸಮಯದಲ್ಲಿ ಕೇವಲ ಕೆಲವೇ ವಿಷಯಗಳಿಗೆ ನಾನು ಉತ್ತರ ಕೊಡಬಲ್ಲೆ. ಮೊದಲನೆಯದಾಗಿ ಕೈಗಾರಿಕೆ ಸರ್ಕಾರೀ ಕ್ಷೇತ್ರದಲ್ಲಿರಬೇಕೇ ಅಥವಾ ಖಾಸಗೀ ಕ್ಷೇತ್ರದಲ್ಲಿರಬೇಕೇ ಎಂಬುದು. ಅದನ್ನು ನಡೆಸಿಕೊಂಡು ಬರುವುದಕ್ಕೆ ಯಾರಿಗೆ ಸಹಾಯ ಮಾಡಬೇಕೆಂಬುದಾಗಿ ಹೇಳುವುದು ಒಂದು ವಾದ. ನಾನು ಬಜೆಟ್ ಭಾಷಣ ಮಾಡುವಾಗ ಈ ವಿಚಾರವನ್ನು ಪ್ರಸ್ತಾಪಿಸಿದ್ದೇನೆ. ಮಾನ್ಯ ಶ್ರೀ ಕೃಷ್ಣನ್ ಅವರು ತಮ್ಮ ಭಾಷಣದಲ್ಲಿ ಈ ನೀತಿಯನ್ನು ಟೀಕೆ ಮಾಡುತ್ತಾ ಹೇಳಿದರು. ಏನು ಸರ್ಕಾರಕ್ಕೆ ಇಡಿ

(ಶ್ರೀ ರಾಮಕೃಷ್ಣ ಹೆಗಡೆ)

ಯಾಲಜಿ ಮೇಲೆ ವಿಶ್ವಾಸ ಹೋಯಿತೋ ಅಥವಾ ಸೋಷಿಯಾಲಿಜಂ ಮೇಲೆ ವಿಶ್ವಾಸ ಹೋಯಿತೋ ಎಂಬುದಾಗಿ ಕೇಳಿದರು. ನಾನು ಬಹಳ ಸ್ಪಷ್ಟವಾಗಿ ನಮ್ಮ ಸರ್ಕಾರದ ನೀತಿಯನ್ನು ಈ ಸಭೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಇದು ಹೊಸ ನೀತಿ ಅಲ್ಲ. ಮಾನ್ಯ ಸದಸ್ಯರಿಗೆ ನೆನಪು ಇರಬಹುದು. ಕೆಲವು ಕಾಲದ ಹಿಂದೆ ದಿವಂಗತ ಮಾನ್ಯ ಶ್ರೀ ದಾಸಪ್ಪನವರು ಒಂದು ಹೇಳಿಕೆಯನ್ನು ಮಾಡಿದ್ದರು. ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅದು ಈ ರೀತಿ ಇದೆ:

> "Mysore's plan was nationalised on basic and key concerns like, Electricity, Railways and Iron and Steel Works. In the case of some new industries also, where private enterprise was lacking, Government would start them on their own. With regard to other medium scale industries, Government would generally sponsor them on a join-stock basis and become participators in the capital and management, granting certain concessions and facilities. The rest of the industries were open to private enterprise, Government extending their help by way of certain concessions in the matter of water, power and land. The scheme has worked as a model for many other Governments. In the case of industries which were started on pilot plan scale, the idea is that when they are established on a sound basis and competent organisations are forthcoming, they can de-officialise them on a joint-stock basis retaining a share in the capital and management, if need be."

ಮಾನ್ಯ ಅಧ್ಯಕ್ಷರೇ, ಇವತ್ತಿಗೂ ಕೂಡ ಸರ್ಕಾರದ ನೀತಿ ಮಾನ್ಯ ಶ್ರೀ ದಾಸಪ್ಪನವರು ಏನು ಹೇಳಿಕೆ ಕೊಟ್ಟಿದ್ದಾರೋ ಅದಕ್ಕನುಗುಣವಾಗಿ 1958ನೇ ಇಸವಿಯಲ್ಲಿ ಕೇಂದ್ರ ಸರ್ಕಾರದವರು ಒಂದು ಇಂಟರಸ್ಟೇಟ್ ಪಾಲಸಿಯನ್ನು ಘೋಷಣೆಮಾಡಿದರು. ನಮ್ಮ ಮುಂದೆ ಇರತಕ್ಕ ಪ್ರಶ್ನೆ ಯಾವುದು ಒಂದು ತತ್ವ ಇರಬೇಕೆಂಬುದು. ಅದು ಮಾರ್ಗದರ್ಶನ ಮಾಡುತ್ತದೆ. ನಾವು ಸೋಷಿಯಾಲಿಜಂನಲ್ಲಿ ವಿಶ್ವಾಸ ಇಟ್ಟಿದ್ದೇವೆ. ಸೋಷಿಯಾಲಿಜಂ ಅರ್ಥವೇನು ? ಜನರಲ್ಲಿ ಬಡತನ ಖಾಯಂ ಆಗಿ ಇರಬೇಕು, ಬಡತನವನ್ನು ಹಂಚಬೇಕು ಎಂಬುದಾಗಿ ಎಂದೂ ಇಲ್ಲ. ಆರ್ಥಿಕ ಅಸಮತೆ ಕ್ರಮೇಣ ಕಮ್ಮಿಯಾಗಬೇಕು, ಕ್ರಮೇಣ ಅದು ಹೋಗುತ್ತದೆ. ಇದು ಸಮಾಜವಾದದ ತಿರುಳು.

Therefore, we have to have very clear idea about what we want to achieve. To-day, the greatest problem before us is economic prosperity, generating additional wealth. ಈ ಸಂಪತನ್ನು ನಾವು ಉತ್ಪಾದನೆ ಮಾಡಿದಮೇಲೆ ಅದರ ಮೇಲೆ ಹತೋಟಿ ಯಾವರೀತಿ ಇರಬೇಕು, ಸಮಾಜದಲ್ಲಿ ಹಂಚುವಾಗ ಯಾವರೀತಿ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನಾವು ಸರಿಯಾದ ರೀತಿಯಲ್ಲಿ ಮಾಡಬೇಕು. ಈ ದೃಷ್ಟಿಯಿಂದ ಔದ್ಯೋಗಿಕ ಅಭಿವೃದ್ಧಿ ಕ್ರಮವನ್ನು ನೋಡಬೇಕು ಎಂಬುದಾಗಿ ನಾನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಕೇವಲ ಕೆಲವೊಂದು ಕಾರಣಗಳಿಂದ ಪ್ರತಿಯೊಂದನ್ನು ಸರ್ಕಾರವೇ ಮಾಡಬೇಕೆಂದು ಹೇಳಿದರೆ ಅದು ಸಾಧ್ಯವಾಗಲಾರದು. ಆದರೆ ಪ್ರೈವೇಟ್ ಇಂಡಸ್ಟ್ರಿ ಅಥವಾ ಪ್ರೈವೇಟ್ ಸೆಕ್ಟರಿನಲ್ಲಿರುವವರಿಗೆ ಈ ರೀತಿಯಾಗಿ ಕೊಟ್ಟಿದ್ದರಿಂದ ಏನು ಪ್ರಯೋಜನವಾಗಲಿಲ್ಲವೆಂದು ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಮಾನ್ಯ ಶ್ರೀ ಕೃಷ್ಣನ್ ಅವರು ಈಗ ಈ ಸಭೆಯಲ್ಲಿಲ್ಲ. ಅವರು ಒಂದೇ ಉಸುರಿನಲ್ಲಿ ಎರಡು ಪರಸ್ಪರ ವಿರೋಧವಾದಂಥ ಅಭಿಪ್ರಾಯಗಳನ್ನು ಹೇಳಿದ್ದಾರೆ.

ಮೊದಲು ಅವರು ಸರ್ಕಾರದವರೇ ಎಲ್ಲವನ್ನೂ ಮಾಡಬೇಕು, ಅವರು ಪಬ್ಲಿಕ್ ಸೆಕ್ಟಾರಿಗೇಕೆ ಬಿಟ್ಟು ಕೊಡಬೇಕು ಎಂದು ಹೇಳಿ ಕಡೆಯಲ್ಲಿ ಅವರು ಆ ಮೈಸೂರು ಫ್ರಂಟ್ ಪ್ರಾಡಕ್ಟ್ಸ ಪ್ರೈವೇಟ್ ಲಿಮಿಟೆಡ್ ಅವರಿಗೆ ಅಂದರೆ ಆ ಖಾಸಗಿ ಸಂಸ್ಥೆಯವರಿಗೆ ಉತ್ತೇಜನ ಕೊಟ್ಟಿದ್ದನ್ನು ನಾನೂ ಅನುಮೋದಿಸುತ್ತೇನೆಂದು ಹೇಳಿದ್ದಾರೆ. ಅಲ್ಲದೆ ಅವರಿಗಿನ್ನೂ ಸರ್ಕಾರದವರೇಕೆ ಲೈಸೆ

ನ್ನನ್ನು ಕೊಡಲಿಲ್ಲ ಎಂದು ಕೇಳಿದ್ದಾರೆ. ಆದರೆ ಈ ಕೈಗಾರಿಕೆಗಳ ವಿಷಯದಲ್ಲಿ ಮಾತನಾಡುವಾಗ ಸರ್ಕಾರದವರ ಕೈಲಿರತಕ್ಕ ಕಾರ್ಖಾನೆಗಳು ಅಥವಾ ಕೈಗಾರಿಕೆಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಖಾಸಗೀ ವಲಯದಲ್ಲಿರತಕ್ಕ ಕೈಗಾರಿಕೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಮತ್ತು ಇನ್ನಿತರೇ ರಾಜ್ಯಗಳಲ್ಲಿ ಇವು ಸರ್ಕಾರಿ ಕ್ಷೇತ್ರದಲ್ಲಿ ಹಾಗೂ ಖಾಸಗೀ ಕ್ಷೇತ್ರದಲ್ಲಿ ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ಮನಸ್ಸಿನಲ್ಲಿಟ್ಟು ಪರಿಶೀಲಿಸಬೇಕಾದ್ದು ಅತ್ಯವಶ್ಯಕ. ನಮಗೆಷ್ಟು ಅಗಿಯುವುದಕ್ಕೆ ಸಾಧ್ಯವೋ ನಾವು ಅಷ್ಟನ್ನು ಮಾತ್ರ ಬಾಯಿನಲ್ಲಿ ಹಾಕಿಕೊಳ್ಳಬೇಕು. ಅದನ್ನು ಬಿಟ್ಟು ಬಾಯಿ ದೊಡ್ಡದಾಗಿದೆ ಎಂದು ದೊಡ್ಡ ತುತ್ತನ್ನು ಹಾಕಿಕೊಂಡರೆ ಅದರಿಂದ ಬಹಳ ತೊಂದರೆಯಾಗುತ್ತದೆ. ಹಾಗೆ ಮಾಡುವುದರಿಂದೇನೂ ಪ್ರಯೋಜನವಿಲ್ಲ. ನಮ್ಮ ದೇಶದಲ್ಲಿ 1964-65 ರ ಕೆಲವು ಅಂಕೆಸಂಖ್ಯೆಗಳನ್ನು ನಾನೀಗ ತಮ್ಮ ಮುಂದೆ ಇಡಲಿಚ್ಛಿಸುತ್ತೇನೆ. ಆದರೆ ಈ ಅಂಕೆಸಂಖ್ಯೆಗಳು ಸರಿಯಾಗಿ ಸ್ಕ್ರುಟಿನಿಯಾದವುಗಳಲ್ಲ—ಅಧಿಕೃತವಾದವುಗಳಲ್ಲ.

1964-65 ರಲ್ಲಿ ಕೆಮಿಕಲ್ ಇಂಡಸ್ಟ್ರೀಸ್ ಪಬ್ಲಿಕ್ ಸೆಕ್ಟರ್‌ನಲ್ಲಿ ಹಾಕಿದ ಒಟ್ಟು ಬಂಡವಾಳ 77 ಕೋಟಿ 83 ಲಕ್ಷ. ಅದರಿಂದ ಮಾರಾಟ ಮಾಡಲು ಉತ್ಪನ್ನವಾದ ಸಾಮಾನುಗಳ ಮೌಲ್ಯ 34 ಕೋಟಿ. ಇದರಿಂದ ಅಂದರೆ 2 ಕೋಟಿ ಅಂದರೆ ಸುಮಾರು ಮೂರು ಪರ್ಸೆಂಟಿಗಿಂತ ಸ್ವಲ್ಪ ಹೆಚ್ಚಿಗೆ ಲಾಭ ಬಂದಿದೆ. ಇನ್ನು ಆ ನ್ಯಾಷನಲ್ ಕೋಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಹಾಕಿದ ಬಂಡವಾಳ 99 ಕೋಟಿ. ಬಿಕರಿಗಾಗಿ ಅದರಲ್ಲಿ ಉತ್ಪತ್ತಿಯಾದ ಸಾಮಾನುಗಳ ಬೆಲೆ 18 ಕೋಟಿ. ಅಂದರೆ ಇದರಲ್ಲಿ 70 ಲಕ್ಷ ನಷ್ಟವಾಯಿತು —ಲಾಭವೇನೂ ಬರಲಿಲ್ಲ. ಇನ್ನು ಗೌರ್ನಮೆಂಟ್ ಆಫ್ ಇಂಡಿಯಾ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್—ಇಂಜನಿಯರಿಂಗ್ ಇಂಡಸ್ಟ್ರಿ—ಇದರಲ್ಲಿ ಹಿಂದೂಸ್ಥಾನ್ ಸ್ಟೀಲ್‌ಗೆ ಹಾಕಿದ್ದ ಬಂಡವಾಳ 697 ಕೋಟಿ. ಬಂದ ಉತ್ಪತ್ತಿ 184 ಕೋಟಿ. ಲಾಭ 2 ಕೋಟಿ 79 ಲಕ್ಷ. ಇದಾದಮೇಲೆ ಇನ್ನು ಆ ಹೆಚ್.ಎಂ.ಟಿ., ಬಿ.ಇ.ಎಲ್. ಮತ್ತು ಐ.ಟಿ.ಐ. ಇವುಗಳೆಲ್ಲದರಮೇಲೆ ಹಾಕಿದ ಒಟ್ಟು ಬಂಡವಾಳ 84 ಕೋಟಿ. ಬಂದ ಉತ್ಪತ್ತಿ 41 ಕೋಟಿ. ಬಂದ ಲಾಭ 6 ಕೋಟಿ. ಅಂದರೆ ಮೂರು ಅಥವಾ ಮೂರೂವರೆ ಪರ್ಸೆಂಟ್ ಲಾಭ ಬಂದ ಹಾಗಾಯಿತು. ಇನ್ನು ಎಂ.ಎಂ.ಟಿ.ಸಿ. ಮತ್ತು ಎಸ್.ಟಿ.ಸಿ. ಇವೆಲ್ಲಾ ಟ್ರೇಡಿಂಗ್ ಕಾರ್ಪೊರೇಷನ್ನುಗಳು. ಇವುಗಳಲ್ಲಿ ಲಾಭ ಸ್ವಲ್ಪ ಹೆಚ್ಚಾಗೇ ಬಂದಿದೆ. 85 ಕೋಟಿ ರೂಪಾಯಿಗಳ ವ್ಯವಹಾರದಲ್ಲಿ 231 ಕೋಟಿ ರೂಪಾಯಿಗಳ ಉತ್ಪನ್ನ ಬಂದಿದೆ. ಅಲ್ಲಿಗೆ ಲಾಭ ಮೂರು ಕೋಟಿ ಆಯಿತು. ಅಂದರೆ ಮೂರು-ಮೂರೂವರೆ ಪರ್ಸೆಂಟ್ ಲಾಭ ಬಂದಹಾಗೆ ಆಯಿತು. ನಾನು ಈ ಮಾತುಗಳನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನಾವು ನಮ್ಮ ಉದ್ಯೋಗೀಕರಣವನ್ನು ಪರಿಶೀಲನೆ ಮಾಡುವಾಗ ಕೆಲವೊಂದು ಭಾವನೆಗಳನ್ನು ಅಥವಾ ದೃಷ್ಟಿಯನ್ನು ಇಟ್ಟುಕೊಂಡು ಅವುಗಳ ವಾಸ್ತವಿಕತೆ ಯೇನಿದೆ ಅನ್ನುವುದರ ಬಗ್ಗೆ ಕುರುಡರಾಗಿ ಮಾತನಾಡಬಾರದು ಎಂದು ಹೇಳುತ್ತಿದ್ದೇನೆ. ಆದರೆ ಇದರಲ್ಲಿ ಒಂದು ವಿಚಾರವಿದೆ—ಯಾವ ದೇಶದಲ್ಲಿ ಜನರಲ್ಲಿ ಒಂದು ಶಿಸ್ತು, ಕಾರ್ಯ ದಕ್ಷತೆ ಮತ್ತು ರಾಷ್ಟ್ರಾಭಿಮಾನಗಳು ಇರುವುದಿಲ್ಲವೋ ಅಲ್ಲಿ ಇವು ಅಷ್ಟು ಯಶಸ್ವಿಯಾಗಿ ನಡೆಯಲಾರವು, ನಡೆಯುವುದಕ್ಕೆ ಸಾಧ್ಯವೂ ಇಲ್ಲ ಎಂದು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ—ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನೇ ತೆಗೆದುಕೊಳ್ಳೋಣ. ಅದೊಂದು ಪಬ್ಲಿಕ್ ಸೆಕ್ಟರ್ ಎಂಟರ್‌ಪ್ರೈಸ್. ಅದರಲ್ಲಿ ಕೆಲಸ ಮಾಡತಕ್ಕ ಜನರೇನಿದ್ದಾರೆ ಅಲ್ಲಿ ಕೂಲಿ ಕೆಲಸ ಮಾಡತಕ್ಕ ಜನರೂ ಮತ್ತು ಸಂಬಳದಮೇಲೆ ಕೆಲಸ ಮಾಡತಕ್ಕ ಜನರೂ—ಇದು ನಮ್ಮ ಕಾರ್ಖಾನೆ, ಇದು ಮುಂದುವರಿಯಬೇಕು ; ಇದು ಚೆನ್ನಾಗಿ ಮುಂದುವರಿದರೆ ಇದರ ಉತ್ಪತ್ತಿಯಿಂದ ನಮ್ಮ ದೇಶ ಮುಂದಕ್ಕೆ ಬರುತ್ತೆ ಅನ್ನುವ ಆಸಕ್ತಿ ಮತ್ತು ಭಾವನೆಗಳಿಂದ ಕೆಲಸ ಮಾಡಿದರೆ ಅವುಗಳಿಂದ ಚೆನ್ನಾಗಿ ಅನುಕೂಲ ಬರುತ್ತದೆ. ಹಾಗೆ ಮಾಡದೆ ಇದರಲ್ಲಿ ನಮಗೆ ಸ್ವಾತಂತ್ರ್ಯವಿಲ್ಲ, ಇದಕ್ಕೆ ಒಂದು ಹೆಚ್ಚಿನ ಪ್ರತಿಫಲ ಬಂದರೆ ನಮಗೆ ಒಂದು ಹೆಚ್ಚಿನ ಅನುಕೂಲವಿಲ್ಲ, ನಮಗೆ ಅಂಥ ಯಾವ ಒಂದು incentive ಇದರಲ್ಲಿಲ್ಲ ಎನ್ನುವ ಮನೋಭಾವದಿಂದ ಮಾಡಿದರೆ ಅದರ ಬೆಳವಣಿಗೆಯಲ್ಲಿ ಕುಂಠಿತವಾಗುವುದು. ಆದರೆ ಇಂಥ ಒಂದು ಇನ್‌ಸೆಂಟೀವ್ ಪ್ರೈವೇಟ್ ಸೆಕ್ಟರಿನಲ್ಲಿದೆ. ಅದು ನಮ್ಮಲ್ಲಿಲ್ಲ. ಆದುದರಿಂದ ನಮಗೆಷ್ಟು ಸಾಧ್ಯವಿದೆಯೋ ಅಷ್ಟನ್ನು ಮಾತ್ರ ನಾವು ನಡೆಸಿಕೊಂಡು ಹೋಗಬೇಕಾಗಿದೆ. ಇನ್ನು ಈ ಆರ್.ಎಸ್.ಟಿ. ಇಂಡಸ್ಟ್ರಿ ಮತ್ತು ಎಲೆಕ್ಟ್ರಿಕಲ್ ಇಂಡಸ್ಟ್ರಿಗಳಲ್ಲಿ ಹೊರಗಡೆ ಯಾರಾದರೂ ಹೆಚ್ಚಿನ ತರಪೇತಾದವರೂ ಮತ್ತು ಹೆಚ್ಚಿನ ಅನುಭವವುಳ್ಳವರೂ ಇದ್ದರೆ ಅವರನ್ನು ಬರಮಾಡಿಕೊಂಡು ಅವರಿಂದ ಮಾರ್ಗದರ್ಶನ ಪಡೆದು ಕೆಲಸ ಮಾಡುತ್ತೇವೆ. ಹೊಸ ಇಂಡಸ್ಟ್ರಿಗಳನ್ನು ಪ್ರೈವೇಟ್ ಸೆಕ್ಟರಿಗೆ ಕೊಡುವುದಿಲ್ಲ ಅನ್ನುವುದಿಲ್ಲ. ನಾವು ನಮಗೆಷ್ಟು ಸಾಧ್ಯವಿದೆಯೋ ಅಷ್ಟನ್ನು ಮಾತ್ರ ನಾವು ನಡೆಸಿಕೊಂಡು ಬರುತ್ತೇವೆ. ಇದು ನಮ್ಮ ಸರ್ಕಾರದ ಖಚಿತವಾದ ನೀತಿಯಾಗಿದೆ.

(ಶ್ರೀ ರಾಮಕೃಷ್ಣ ಹೆಗಡೆ)

ಇನ್ನು ಭದ್ರಾವತಿ ಕಾರ್ಖಾನೆಯ ವಿಚಾರ ಬಂದಿದೆ. ಇಲ್ಲಿರತಕ್ಕ ಮಾನ್ಯ ಸದಸ್ಯರನೇಕರು—ನಾವೆಲ್ಲರೂ ಹಿಂದಿನ ಮೈಸೂರಿನ ಬಗ್ಗೆ ಒಂದು ಅಭಿಮಾನದಿಂದ ಒಂದು ಉತ್ಪ್ರೇಕ್ಷೆಯಿಂದಲೂ ಮಾತನಾಡುತ್ತಿದ್ದೇವೆ. ನಾವು ನಮ್ಮ ಮೈಸೂರಿನ ಕೀರ್ತಿಯನ್ನು ದೇಶದೇಶಕ್ಕೂ ಹರುಡುತ್ತೇವೆಂದು ಹೇಳಿಕೊಳ್ಳುವುದು ಸ್ವಾಭಾವಿಕ. ಆದರೆ ಹಾಗೆ ಹೇಳಿಕೊಳ್ಳುವಾಗ ನಮ್ಮ ಹಳೇ ಮೈಸೂರು ಒಂದು ಸುಖೀ ರಾಜ್ಯವಾಗಿತ್ತು—ರಾಮ ರಾಜ್ಯ ಆಗಿತ್ತು ಎಂಬುದಾಗಿ ನಾವು ಒಂದು ಹೊಗಳಿಕೆಯನ್ನು ಮುಂದುವರಿಸುತ್ತಲೇ ಬಂದಿದ್ದೇವೆ. ಆದರೆ ತಮ್ಮನ್ನು ತಾವು ಹೊಗಳಿಕೊಳ್ಳಲೇಬೇಕು. ಆದರೆ ಈ ಹೊಗಳಿಕೆಗಳ ನಿಜಾಂಶ ಮಾತ್ರ ಬೇರೆಯಾಗಿದೆ. ಮೈಸೂರು ರಾಜ್ಯದಲ್ಲಿ ಬಹಳ ಹಿಂದೆಯೇ ಕೆಲವು ಕಾರ್ಖಾನೆಗಳನ್ನು ಪ್ರಾರಂಭ ಮಾಡಿದರು, ನಿಜ. ಮೊಟ್ಟಮೊದಲನೆಯ ಹೈಡ್ರೋ ಎಲೆಕ್ಟ್ರಿಕ್ ಕೆಲಸ ಇಲ್ಲೇ ಷುರುವಾಯಿತು. ಆದರೆ ಭದ್ರಾವತಿಯಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶ ಹುಟ್ಟಿದ್ದು 1915 ರಲ್ಲಿ. ಅನಂತರ 5-6 ವರ್ಷಗಳು ಕಳೆದ ಮೇಲೆ ಅದು ಒಂದು ಮಟ್ಟಕ್ಕೆ ಬಂತು. ಆಗ ನಮ್ಮ ಹಳೇ ಮೈಸೂರಿನಲ್ಲಿದ್ದ ಪರಿಸ್ಥಿತಿಯನ್ನು ಒಂದು ಗೋಲ್ಡನ್ ಏಜ್ ಎಂದು ಹೇಳಬಹುದು. ಆದರೆ ಹಾಗೆ ಇಲ್ಲಿ ಸ್ಥಾಪನೆಯಾದ ಕಾರ್ಖಾನೆಗಳು ಏನೇನಿದ್ದವೋ ಅವೆಲ್ಲಾ 1940ರ ವರೆಗೂ ಒಂದು ಅಲಂಕಾರ ಪ್ರಾಯವಾಗಿದ್ದವು ಎನ್ನಬಹುದು. ಆ ಕೈಗಾರಿಕೆಗಳನ್ನೆಲ್ಲಾ ಒಂದು ಪೈಲಟ್ ಬೇಸಿಸ್ ಮೇಲೆ ಪ್ರಾಂಭಮಾಡಲಾಯಿತು. ಅದರೆ ಅವುಗಳ ಯೋಗ್ಯತೆಯನ್ನು ಅವುಗಳ ಪ್ರೊಡಕ್ಷನ್ ಕ್ಯಪಾಸಿಟಿ optimum ಮುಟ್ಟಿದಾಗಲೇ ನಾವು ನಿರ್ಧರಿಸುವುದು ಸೂಕ್ತ. ಆದರೆ ಅಂಥ ಅಲಂಕಾರ ಪ್ರಾಯವಾದ ಕೈಗಾರಿಕೆಗಳನ್ನು ನಡೆಸುವುಕ್ಕಿಂತ ಅವುಗಳನ್ನು ಮುಚ್ಚುವುದೇ ಲೇಸು. ಭದ್ರಾವತಿಯಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸತಕ್ಕ ಉದ್ದೇಶ 1915 ರಲ್ಲಿ ಹುಟ್ಟಿದ್ದು ಸುಮಾರು 35 ವರ್ಷಗಳ ಕಾಲ ಯಾವ ಒಂದು ಲಾಭವನ್ನೂ ಕಾಣಲಿಲ್ಲ. ಆದರೆ 1928-1929ರಲ್ಲಿ—ಆ ಎರಡು ವರ್ಷಗಳಲ್ಲಿ ಮಾತ್ರ ಒಂದು ನೆಪಮಾತ್ರಕ್ಕೆ ಲಾಭ ಅನ್ನುವುದು ಕಂಡಿತು. ಅನಂತರ ಪ್ರತಿ ವರ್ಷವೂ ಅದಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ಆದರೆ ಪ್ರಥಮ ಬಾರಿಗೆ 1936-1937 ಮತ್ತು 1938 ರಲ್ಲಿ ಮಾತ್ರ ಈ ಮೂರು ವರ್ಷಗಳಲ್ಲಿ ಕ್ರಮವಾಗಿ 94 ಸಾವಿರ, 89 ಸಾವಿರ ಮತ್ತು 70 ಸಾವಿರ ಲಾಭ ಬಂದಿದೆ. ಅನಂತರ ಎರಡನೆ ಪ್ರಪಂಚ ಮಹಾಯುದ್ಧ ಪ್ರಾರಂಭವಾದ ನಂತರ 1939-1940 ರಿಂದೀಚೆಗೆ ಮೊದಲನೇ ಒಂದು ವರ್ಷದಲ್ಲಿ ಇದು 9 ಲಕ್ಷ ಲಾಭ ಗಳಿಸಿತು. ಆದರೆ ಇದರ ಬಗ್ಗೆ 1923 ಮತ್ತು 1924 ರ ಕೆಲವು ಅಂಕಿಅಂಶಗಳು ಬಹಳ ಕುತೂಹಲಕಾರಿಯಾಗಿವೆ. ಇಲ್ಲಿ ಅನೇಕರು ನಾವು ಕೊಡತಕ್ಕ ಒರಿಜಿನಲ್ ಎಸ್ಟಿಮೇಟಿಗೂ ಮತ್ತು ರಿವೈಜ್ಡ್ ಫಿಗರ್ಸಿಗೂ ಬಹಳ ವ್ಯತ್ಯಾಸವಿರುತ್ತದೆ ಎಂದು ಬಹಳವಾಗಿ ಟೀಕೆ ಮಾಡತಕ್ಕ ಅಭ್ಯಾಸವನ್ನು ಇಟ್ಟುಕೊಂಡಿದ್ದಾರೆ. ಆದರೆ ಈ ಕಾರ್ಖಾನೆಯು ಕೆಲಸದಲ್ಲಿ ಯಾವರೀತಿ ಆಗಿದೆ ಎಂದರೆ

				Rs.
1923	...	Total losses	Lakhs	5,22,000
1924	...	Total losses	Lakhs	5,00,000
1925	...	Total losses	Lakhs	7,00,000

1-00 P.M.

In this report they say :

> "At the close of the year, the Board recommended that certain losses which had occurred either during the construction period or later and which may unnecessarily be swelling working advances without presenting any realisable asset may be written off. The amount was Rs. 6,10,000. This does not include losses in depreciation in value of stores purchased during the construction period estimated at about 3 lakhs."

ಎಂದರೆ ಹಿಂದಿನವರದ್ದು ಟೀಕೆ ಮಾಡುವ ಉದ್ದೇಶವಲ್ಲ. ಯಾವುದೇ ಒಂದು ಹೊಸ ಕಾರ್ಖಾನೆ ಶುರು ಮಾಡಿದಾಗ ಪ್ರಾರಂಭದಲ್ಲಿ ಅನೇಕ ಅಡಚಣೆಗಳನ್ನು ಅನುಭವಿಸಬೇಕಾಗುತ್ತದೆ.

ರೂಪಾಯಿ ಡೀವ್ಯಾಲ್ಯೂಯೆಷನ್ ಆದಾಗ ಎನ್. ಜಿ. ಇ. ಎಫ್. ಫ್ಯಾಕ್ಟರಿಯ ಕ್ಯಾಪಿಟಲ್ ಜಾಸ್ತಿ ಆಯಿತು. ಆದುದರಿಂದ ಟೀಕೆ ಮಾಡುವಾಗ ಎಲ್ಲಾ ವಿಚಾರವನ್ನೂ ಗಮನದಲ್ಲಿಟ್ಟುಕೊಂಡು ಟೀಕೆಯನ್ನು ಮಾಡಬೇಕು. ಹಿಂದೆ ಹಳೇ ಮೈಸೂರಿನಲ್ಲಿ ರಿಪ್ರೆಸೆಂಟೇಟೀವ್ ಅಸೆಂಬ್ಲಿ ಇತ್ತು. ಆಗ ಮೈಸೂರಿನಲ್ಲಿ ಇದ್ದಂಥ ಕಾರ್ಖಾನೆಗಳ ಬಗ್ಗೆ ಏನು ಅಭಿಪ್ರಾಯ ಇಟ್ಟುಕೊಂಡಿದ್ದರು ಎಂದು ಈ ಸಂದರ್ಭದಲ್ಲಿ ನೆನಪು ಮಾಡಿಕೊಂಡರೆ ಅಷ್ಟು ತಪ್ಪಾಗಲಿಕ್ಕಿಲ್ಲ. 1926 ನೇ ಇಸವಿ ಫೆಬ್ರವರಿ 26, ಮೈಸೂರು ಲೆಜಿಸ್ಲೇಟೀವ್ ಕೌನ್ಸಿಲ್ ಪ್ರೊಸೀಡಿಂಗ್ಸ್, 170ನೇ ಪುಟದಲ್ಲಿ ಪಬ್ಲಿಕ್ ಸೆಕ್ಟರ್ ಹೇಗೆ ಇತ್ತು ಎನ್ನುವ ವಿಚಾರದಲ್ಲಿ ಹೀಗೆ ಹೇಳಿದ್ದಾರೆ :

(Extract from the Proceedings of the Mysore Legislative Council—Feb. Session 1926)

> "Mr. Mohamad Abbas Khan.—Suppose we had done it at that stage, a savings of a crore and a half would have been effected. How could we close our eyes to these glaring facts which are eating away the vitality of our State? If the Hon'ble Members are not prepared to vote against the demand then they must know the responsibility which rests upon them as the representatatives of the people. Before they vote they should realise the importance of the situation and its bearing on the country. Whose money is that? It is the money of the poor raiyats. It was worthily remarked in one of the Sessions of the Representative Assembly that our rupees are being melted at Bhadravati into iron. Is it for the mere pleasure and glory that our iron is being sent to England and America and sold there, that we must allow our resource to be eaten up by this concern? How many such concerns have not been closed all over the world? I beg to submit that Government ought to give us a lead in such matters and they ought to lay the cards on the table and tell us what the actual situation and facts are. It is only then we would be justified in voting."

I am reminded of the remarks in identical terms by Sri Siddaveerappa.

SRI H. SIDDAVEERAPPA.—I want the Hon'ble Minister to bear with me for a minute. That statement was made by Mr. Abbas Khan was purely for political purposes; it was purely a political statement. Probably the Minister does not know the political background in existence at that time. It was then a question of brahmin-non-brahmin movement. Sir M. Visveswaraiya was a Brahmin. He wanted to say that he was interested in that. That was the reason why political statement was made. They wanted to remove him.

SRI RAMAKRISHNA HEGDE.—They succeeded in that. If the Hon'ble Member Sri Siddaveerappa would bear with me, I would like to say that the statement made by Sri Siddaveerappa is also a political statement. The object of Sri Siddaveerappa is to unseat this Government. He cannot succeed in that today.

Sri H. SIDDAVEERAPPA.—We need not do it. You are yourself doing it.

(*Extract from the proceedings of the Mysore Reprsentative Assembly,* (*June-October 1926*)

"Mr. G. Paramasiviah (Page 164).—As regards the Mysore Iron Works, he regretted that Government had incurred a loss of Rs. 114 lakhs on the whole including the depreciation and interest charges. Government should devise measures to put a stop to further losses, and invest their funds only on more lucrative concerns. Instead of concentrating funds on big projects that would not yield an adequate return in the immediate future, it was more desirable to utilise the funds for the restoration of tanks that would improve whole village areas."

"*Extract from the proceedings of the Mysore Legislative Council, February Session 1927*)"

"Mr. B. K. Garudachar (Pages 50-51):

"*Industries*—It is really an alarming thing for a non-industrialist to see the losses in different Government concerns. The losses are inevitable in a business concern, whether it is an industry or a commercial concern. But there is a limit for everything. We will have to examine in detail how the loss occurred. As for as I can see, the loss in the Central Industrial Workshop is an accumulated one, greatly due to the depreciation in value of machinery."

Mr. D. H. Chandrasekharaiah (Same volume P. 138):

"VI: *Industrial and other works.*—In regard to the programme of industrial works I should like to state that the Bhadravati Iron Works is still to justifiy its existence as a commercial concern. Although it is believed to show an equilibrium this year, yet we must know the real fact as it stands at the end of the year. The stocks here are also to be revalued and the losses written off. The question of getting a profit of 3 lakhs in the next year is still a matter for the future. Anyway, until the present works come to a stable condition, any more financing excepting in very absolutely necessary directions does not seem to be desirable. The other industrial concerns are a matter of the deepest anxiety. They are continually working at a loss due to the inability of the Government to work a commercial concern. In fact they could not be otherwise when businessmen are not associated with these concerns. Government Officers cannot be expected to be commercial in their instincts. Hence these may be disposed of as early as possible from Governmrnt care or a non-official Committee of management might be appointed to look after these concerns as in the case of Iron Works. The Industrial

Workshop might advantageously be merged in the Bhadravati Iron Works."

"*Extract from the proceedings of the Mysore Legislative Council May June and December 1928.*

"Mr. Bagamane Deve Gowda ***

"So far as the Industrial Works are concerned, I have to say that the Soap Factory and Weaving Factory have out-run their utility, and they may be transferred to private agencies at the earliest."

And, lastly, I would add, with a view to giving an idea to the Hon'ble Members, I would read an extract from the Proceedings of the Representative Assembly 1927.

(June and Octr. 1927)

(Appendix *VIII* - *Vide* Answer to Q. No. 48)

Sl. No.	Name of Concern	Profit or loss for the official year 1921-22			Profit or loss from July 1922 to end of June 1926			Profit or loss during 1926-27		
		Rs.	As.	P.	Rs.	As.	P.	Rs.	As.	P.
1.	Central Industrial Workshop.	—53,716	15	5	—30,719	4	1	—99,221	14	7
2.	Govt. Art Workshop.	—19,488	1	2	—62,799	13	4	—25,937	6	1
3.	Industrial Depot.	—847	11	10	—499	7	9	—6,745	2	11
4.	Govt. Weaving Factory.	—10,731	9	6	—50,578	6	4	—44,670	13	0
5.	Govt. Soap Factory.	Net profit from commencement, exclusive of interest paid amounting to Rs. 50,004, is						*plus* 67,298	0	0

SRI H. SIDDAVEERAPPA.—These are figures belonging to the bullock-cart age.

ಶ್ರೀ ರಾಮಕೃಷ್ಣ ಹೆಗಡೆ.—ಈಗ ನಾನು ಏತಕ್ಕೆ ಹೇಳಿದ್ದು ಎಂದರೆ 1940 ರವರೆಗೆ ನಮ್ಮ ದೇಶದಲ್ಲಿ ಗೋಲ್ಡನ್ ಏಜ್ ಇತ್ತು, ಬಂಗಾರ ಇದ್ದುದು ಈಗ ಕಬ್ಬಿಣ ಆಯಿತು ಎಂದು ಹೇಳುವುದು ಸರಿಯಿಲ್ಲ. ಆಗಲೂ ಸರಿಯಾಗಿ ನಡೆದಿಲ್ಲ. ಇದೇ ರೀತಿ ಲಾಸ್ ಆಗುತ್ತಿತ್ತು; ಎಂದು ಹೇಳಲು

(ಶ್ರೀ ರಾಮಕೃಷ್ಣ ಹೆಗಡೆ)

ಇಷ್ಟು ಸಮಯ ತೆಗೆದುಕೊಂಡೆ, ಕ್ಷಮಿಸಬೇಕು. ಈಗ ಭದ್ರಾವತಿಯ ಕಾರ್ಖಾನೆಯ ಸ್ವರೂಪ ಸಂಪೂರ್ಣವಾಗಿ ಬದಲಾಗಿದೆ. ಮೊದಲು ಯಾವ ರೀತಿಯಲ್ಲಿ ಇತ್ತೋ ಅದಕ್ಕಿಂತ ಜಾಸ್ತಿ ಬೆಳೆದಿದೆ. ಮೊದಲು ಒಂಪೂವರೆ ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಪ್ರಾರಂಭವಾದಂಥ ಈ ಕಾರ್ಖಾನೆಗೆ ಈಗ 60 ಕೋಟಿ ರೂಪಾಯಿಗಳನ್ನು ಬಂಡವಾಳ ಹಾಕಿದ್ದೇವೆ. 1929 ರಲ್ಲಿ ಇದರ ಬಂಡವಾಳ 1·16 ಲಕ್ಷ ಇದ್ದಾಗ 3 ಲಕ್ಷ ರೂಪಾಯಿಗಳು ಲುಕ್ಸಾನಾಗಿತ್ತು. ಈಗ ಈ ಕಾರ್ಖಾನೆಯ ಅಸೆಟ್ಸ್ 52·38 ಲಕ್ಷ ರೂಪಾಯಿಗಳು. ವ್ಯಾಲ್ಯೂ ಆಫ್ ಪ್ರೊಡಕ್ಷನ್ 35·10 ಲಕ್ಷ ರೂಪಾಯಿಗಳು. 1969–70ರ ಹೊತ್ತಿಗೆ ಈ ಕಾರ್ಖಾನೆಯಿಂದ ಸುಮಾರು ನಾಲ್ಕು ಕೋಟಿ ರೂಪಾಯಿಗಳು ಲಾಭ ಬರುತ್ತದೆಂದು ನಿರೀಕ್ಷೆ ಇದೆ. ಪ್ರಾರಂಭದಲ್ಲಿ ಅನೇಕ ತೊಂದರೆಗಳು ಬರುತ್ತವೆ, ಅದನ್ನು ಸಹಿಸಬೇಕಾಗುತ್ತದೆ. ಈಗಲೂ ಸಹ ವರ್ಷಕ್ಕೆ 45 ರಿಂದ 50 ಲಕ್ಷ ರೂಪಾಯಿಗಳವರೆಗೆ ಲಾಭ ಬರುತ್ತಿದೆ.

ಇನ್ನು ಮಾನ್ಯ ಸದಸ್ಯರುಗಳು ಕೈಗಾರಿಕಾ ಇಲಾಖೆಯಲ್ಲಿ ಸಮರ್ಪಕವಾದಂಥ ರೀತಿಯಲ್ಲಿ ಕೆಲಸವಾಗುತ್ತಿಲ್ಲ, ವಿಳಂಬವಾಗುತ್ತಿದೆಯೆಂದು ಹೇಳಿದರು. ನಾನು ಇದರ ಬಗ್ಗೆ ಸಂಪೂರ್ಣವಾಗಿ ಸಮರ್ಥನೆ ಮಾಡುವುದಿಲ್ಲ. ಸರ್ಕಾರದಲ್ಲಿ ಪ್ರಾಮಾಣಿಕರಾದಂಥ ನೌಕರರೂ ಇದ್ದಾರೆ, ಅಪ್ರಮಾಣಿಕರಾದಂಥ ನೌಕರರೂ ಸಹ ಇದ್ದಾರೆ, ಕಾರ್ಯದಕ್ಷತೆ ಇದ್ದವರೂ ಇದ್ದಾರೆ, ಕಾರ್ಯದಕ್ಷತೆ ಇಲ್ಲದವರೂ ಸಹ ಇದ್ದಾರೆ. ಆದರೆ ಸಾಮಾನ್ಯವಾಗಿ ಹೇಳುವುದಾದರೆ, ಇಂದು ನಮ್ಮ ಕೈಗಾರಿಕಾ ಇಲಾಖೆಯಲ್ಲಿ ಬಹಳ ಚುರುಕಿನಿಂದ ಕೆಲಸವಾಗುತ್ತಿದೆಯೆಂದು ಮಾತ್ರ ಹೇಳುತ್ತೇನೆ. ಈ ವಿಚಾರವನ್ನು ಅಭಿಮಾನದಿಂದ ಹೇಳುತ್ತಿದ್ದೇನೆ. ಇದಕ್ಕಾಗಿ ನನಗೆ ಯಾರೂ ಸರ್ಟಿಫಿಕೇಟ್ ಕೊಡುವುದು ಬೇಡ. ನನಗೆ ಸಂಬಂಧವಿಲ್ಲದಂಥ ಒಬ್ಬರು ಇಂಗ್ಲೆಂಡ್‌ನಿಂದ ಬೆಂಗಳೂರಿಗೆ ಬಂದು ಇಲ್ಲಿಯ ಕೆಲವು ಕಾರ್ಖಾನೆಗಳನ್ನು ನೋಡಿ ಸಂಬಂಧಪಟ್ಟ ಆಫೀಸರ್ ಜೊತೆಯಲ್ಲಿ ಮತ್ತು ಸರ್ಕಾರದ ಅಧಿಕಾರಿಗಳ ಜೊತೆಯಲ್ಲಿ ಮಾತು ಕತೆಯಾಡಿ ವಾಪಸ್ ಇಂಗ್ಲೆಂಡ್‌ಗೆ ಹೋದಮೇಲೆ ಒಂದು ಪತ್ರವನ್ನು ಬರೆದಿದ್ದಾರೆ: ಅದು ಈ ರೀತಿ ಇದೆ :

> "During my recent visit to Bangalore I learned from Senior Officials of the Mysore State Government that Dupont may be considering locating their Indian operation in Mysore. Knowing of the good relations that have always existed between Smith Kline and French Laboratoris Ltd. and Dupont, I think it would be helpful to Dupont if somebody were able to tell them of the forward-looking and dynamic administration we have found in Mysore State, the freedom from bureaucratic delays, and the extreme co-operativeness of all the State officials. You will yourself know how readily they have met our various requirements and how easy it has been to conduct business with them. I am sure the experience of a Company such as ours will be of interest to Dupont and may help them in coming to a docision about their Indian location."

This is an unsolicited, unasked for and unexpected document. ನಾವೇನು ಅವರಿಗೆ ಬರೆಯಬೇಕೆಂದು ಹೇಳಿರಲಿಲ್ಲ, ಅವರೇ ಈ ರೀತಿ ಬರೆದಿದ್ದಾರೆ. ನಮ್ಮ ರಾಜ್ಯದ ಕೈಗಾರಿಕಾ ಪ್ರಗತಿ ಉತ್ತಮಗೊಂಡಿದೆಯೆಂಬುದಕ್ಕೆ ಈ ಉದಾಹರಣೆಯನ್ನು ಹೇಳಿದೆ.

ಶ್ರೀ ಎಸ್. ಎಸ್. ಅರಕೇರಿ.—ನಮ್ಮ ರಾಜ್ಯದ ಕೈಗಾರಿಕಾ ಪರಿಸ್ಥಿತಿ ಬಹಳ ಗಂಭೀರವಾಗಿದೆ!

ಶ್ರೀ ರಾಮಕೃಷ್ಣ ಹೆಗಡೆ.—ಈ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ಮಾನ್ಯ ಸಿದ್ಧವೀರಪ್ಪನವರು ಕೈಗಾರಿಕಾ ವಿಚಾರದಲ್ಲಿ 1940 ನೇ ಇಸವಿಯ ಎತ್ತಿನ ಗಾಡಿಯ ಯುಗದಲ್ಲಿ ಈ ಸರ್ಕಾರದವರು ಇನ್ನೂ ಇದ್ದಾರೆಂದು ಹೇಳಿದ್ದಕ್ಕೆ ಈ ಅಂಕಿ ಅಂಶಗಳನ್ನು ಕೊಡುತ್ತಿದ್ದೇನೆ :—

ಗೌರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ ತೆಗೆದುಕೊಂಡರೆ.—1940 ರಲ್ಲಿ 4 ಲಕ್ಷ 90 ಸಾವಿರ ರೂಪಾಯಿ ಬಂಡವಾಳ, 1947 ರಲ್ಲಿ 4 ಲಕ್ಷ 77 ಸಾವಿರ ರೂಪಾಯಿ ಬಂಡವಾಳ, 1955 ರಲ್ಲಿ

4 ಲಕ್ಷ 14 ಸಾವಿರ ರೂಪಾಯಿ ಬಂಡವಾಳ, 1967 ರಲ್ಲಿ 113 ಲಕ್ಷ 21 ಸಾವಿರ ರೂಪಾಯಿ ಬಂಡವಾಳ ಇದೆ.

ಪ್ರೊಡಕ್ಷನ್ ವ್ಯಾಲ್ಯು ತೆಗೆದುಕೊಂಡರೆ.—1940 ರಲ್ಲಿ 3 ಲಕ್ಷ 86 ಸಾವಿರ ರೂಪಾಯಿಗಳು, 1955 ರಲ್ಲಿ 112·20 ಸಾವಿರ ರೂಪಾಯಿಗಳು, 1967 ರಲ್ಲಿ 124·38 ಸಾವಿರ ರೂಪಾಯಿಗಳು.

ಇನ್ನು ಸ್ಯಾಂಡಲ್-ವುಡ್ ಆಯಿಲ್ ಫ್ಯಾಕ್ಟರಿಯನ್ನು ತೆಗೆದುಕೊಂಡರೆ.—1940 ರಲ್ಲಿ 8 ಲಕ್ಷ ರೂಪಾಯಿಗಳು ಬಂಡವಾಳ, 1950 ರಲ್ಲಿ 17 ಲಕ್ಷ ರೂಪಾಯಿಗಳು ಬಂಡವಾಳ, ಈಗ 44 ಲಕ್ಷ ರೂಪಾಯಿಗಳು ಬಂಡವಾಳ.

ಪ್ರೊಡಕ್ಷನ್ ವ್ಯಾಲ್ಯು ತೆಗೆದುಕೊಂಡರೆ.—1957 ರಲ್ಲಿ 43 ಲಕ್ಷ ರೂಪಾಯಿಗಳು, ಈಗ 190 ಲಕ್ಷ ರೂಪಾಯಿಗಳು.

ಇನ್ನು ಪೋರ್ಸಲಿನ್ ಫ್ಯಾಕ್ಟರಿ ತೆಗೆದುಕೊಂಡರೆ.—1940 ರಲ್ಲಿ 10 ಲಕ್ಷ 27 ಸಾವಿರ ರೂಪಾಯಿಗಳು ಬಂಡವಾಳ, 1947 ರಲ್ಲಿ 15 ಲಕ್ಷ ರೂಪಾಯಿಗಳು ಬಂಡವಾಳ, 1957 ರಲ್ಲಿ 33 ಲಕ್ಷ ರೂಪಾಯಿಗಳು ಬಂಡವಾಳ, 1967 ರಲ್ಲಿ 310 ಲಕ್ಷ 77 ಸಾವಿರ ರೂಪಾಯಿಗಳು ಬಂಡವಾಳ.

ಇನ್ನು ಪ್ರೊಡಕ್ಷನ್ ತೆಗೆದುಕೊಂಡರೆ.—1940 ರಲ್ಲಿ 0·61 ಲಕ್ಷ ರೂಪಾಯಿಗಳು, 1955 ರಲ್ಲಿ 47·0 ಲಕ್ಷ ರೂಪಾಯಿಗಳು, ಈಗ 100·39 ಲಕ್ಷ ರೂಪಾಯಿಗಳು.

ಇನ್ನು ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ತೆಗೆದುಕೊಂಡರೆ.—1940 ರಲ್ಲಿ 13 ಲಕ್ಷ ರೂಪಾಯಿಗಳು ಬಂಡವಾಳ, 1955 ರಲ್ಲಿ 66 ಲಕ್ಷ ರೂಪಾಯಿಗಳು ಬಂಡವಾಳ, ಈಗ 216 ಲಕ್ಷ ರೂಪಾಯಿಗಳಿಗೆ ಹೆಚ್ಚಿದೆ.

ಪ್ರೊಡಕ್ಷನ್ ತೆಗೆದುಕೊಂಡರೆ.—1940 ರಲ್ಲಿ 2·93 ಲಕ್ಷ ರೂಪಾಯಿಗಳು ಇದ್ದರೆ, 1955 ರಲ್ಲಿ 45·26 ಲಕ್ಷ ರೂಪಾಯಿಗಳು, 1967 ರಲ್ಲಿ 105.00 ಲಕ್ಷ ರೂಪಾಯಿಗಳು.

ಇನ್ನು ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ ತೆಗೆದುಕೊಂಡರೆ.—1940 ರಲ್ಲಿ 1·90 ಲಕ್ಷ ರೂಪಾಯಿಗಳು ಬಂಡವಾಳ ಇದ್ದರೆ, 1955 ರಲ್ಲಿ 4·02 ಲಕ್ಷ ರೂಪಾಯಿಗಳು, 1967 ರಲ್ಲಿ 67·12 ಲಕ್ಷ ರೂಪಾಯಿಗಳು, ಆಗ ಒಂದು ಲಕ್ಷ ರೂಪಾಯಿಗಳ ಉತ್ಪತ್ತಿ ಇದ್ದರೆ ಈಗ 29 ಲಕ್ಷ ರೂಪಾಯಿಗಳ ಉತ್ಪತ್ತಿ ಇದೆ.

ಇನ್ನು ಇಂಪ್ಲಿಮೆಂಟ್ ಫ್ಯಾಕ್ಟರಿ, ಹಾಸನ, ತೆಗೆದುಕೊಂಡರೆ.—1940 ರಲ್ಲಿ 1·77 ಲಕ್ಷ ರೂಪಾಯಿಗಳು ಬಂಡವಾಳ ಇದ್ದರೆ, 1955 ರಲ್ಲಿ 8·33 ಲಕ್ಷ ರೂಪಾಯಿಗಳು, ಈಗ 72·07 ಲಕ್ಷ ರೂಪಾಯಿಗಳಾಗಿದೆ.

ಪ್ರೊಡಕ್ಷನ್ ತೆಗೆದುಕೊಂಡರೆ.—1940 ರಲ್ಲಿ 0·75 ಲಕ್ಷ ರೂಪಾಯಿಗಳು, 1955 ರಲ್ಲಿ 4·13 ಲಕ್ಷ ರೂಪಾಯಿಗಳು, ಈಗ 38·37 ಲಕ್ಷ ರೂಪಾಯಿಗಳು.

ಇನ್ನು ಇದರ ಒಟ್ಟು ಅಬ್‌ಸ್ಟ್ರ್ಯಾಕ್ಟ್ ಕೊಡುತ್ತೇನೆ.—1940 ನೇ ಇಸವಿಯಲ್ಲಿ ಸರ್ಕಾರದ ಬೇರೆ ಬೇರೆ ಕಾರ್ಖಾನೆಗಳಲ್ಲಿ ಹಾಕಿದಂಥ ಒಟ್ಟು ಬಂಡವಾಳ 44 ಲಕ್ಷ 4 ಸಾವಿರ ಇದ್ದರೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಅಂದರೆ 1947 ರಲ್ಲಿ 69·61 ಸಾವಿರ ರೂಪಾಯಿಗಳಿಗೆ ಹೆಚ್ಚಿತು. 1955ನೇ ಇಸವಿಯಲ್ಲಿ ಇದು 2 ಕೋಟಿ 38 ಲಕ್ಷಕ್ಕೆ ಹೆಚ್ಚಿತು, ಈಗ 10 ಕೋಟಿ 9 ಲಕ್ಷಕ್ಕೆ ಹೆಚ್ಚಿದೆ. ಇದೇ ರೀತಿಯಲ್ಲಿ ಪ್ರೊಡಕ್ಷನ್ ತೆಗೆದುಕೊಂಡರೆ 1940 ರಲ್ಲಿ 11 ಲಕ್ಷ 76 ಸಾವಿರ ರೂಪಾಯಿಗಳು ಇದ್ದರೆ, 1955 ರಲ್ಲಿ 1 ಕೋಟಿ 98 ಲಕ್ಷ ರೂಪಾಯಿಗಳಿಗೆ ಹೆಚ್ಚಿತು. ಈಗ 8 ಕೋಟಿ ಚಿಲ್ಲರೆಗೆ ಹೆಚ್ಚಿದೆ.

ಮಾನ್ಯ ಅಧ್ಯಕ್ಷರೇ, ನಾನು ಇಷ್ಟೆಲ್ಲಾ ಅಂಕಿಅಂಶಗಳ ಮೂಲಕ ನಮ್ಮ ಕೈಗಾರಿಕೆಗಳು ಬಹಳಷ್ಟು ಬೆಳೆದಿವೆಯೆಂದು ಸಮರ್ಥನೆ ಮಾಡುತ್ತಾ ಹೇಳುವಾಗ ಎಲ್ಲವೂ ಸಮರ್ಪಕವಾಗಿ ನಡೆಯುತ್ತಿದೆಯೆಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಇನ್ನು ಫಿಲೇಚರ್ ಬಗ್ಗೆ ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ. ಸರ್ಕಾರಕ್ಕೆ ಸೇರಿದಂತೆ ಹಲವು ಫ್ಯಾಕ್ಟರಿಗಳು ಇವೆ. ಈ ಫ್ಯಾಕ್ಟರಿಗಳು ಲುಕ್ಸಾನಿನಿಂದ ನಡೆಯುತ್ತಿವೆ. ಅದಕ್ಕೆ ಏನು ಮಾಡಬೇಕೆಂಬುದನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಲ್ಲೂ ಅದರ ಬಗ್ಗೆ ಭಿನ್ನಾಭಿಪ್ರಾಯ ಇದೆ. ಸರ್ಕಾರದವರು ಅದನ್ನು ಬಂದ್ ಮಾಡಬೇಕೆಂದು ಯೋಚನೆ ಮಾಡಿದಾಗ ಸದಸ್ಯರೇ ಬಂದು ಅದರಿಂದ ರೈತರಿಗೆ ತೊಂದರೆಯಾಗುತ್ತದೆ, ಕೈಗಾರಿಕೆಯಲ್ಲಿ ಕೆಲಸಮಾಡತಕ್ಕವರಿಗೆ ತೊಂದರೆಯಾಗುತ್ತದೆ ಮತ್ತು ಸರ್ಕಾರದ ಕರ್ತವ್ಯ ದುಡ್ಡು ಗಳಿಸುವುದೇ ಅಲ್ಲ, ಸಮಾಜದ ನ್ಯಾಯ ಕೂಡ ಆಗ

(ಶ್ರೀ ರಾಮಕೃಷ್ಣ ಹೆಗಡೆ)

ಬೇಕೆಂದು ಅವರು ಹೇಳಿದ್ದಾರೆ. ಈಗ ಒಟ್ಟು 11 ಸರ್ಕಾರಿ ಕಾರ್ಖಾನೆಗಳಲ್ಲಿ ನೆಟ್ ರಿಸಲ್ಟ್ ಹೇಳುತ್ತೇನೆ.

ಸೋಪ್ ಫ್ಯಾಕ್ಟರಿ :—

1960–61 ರಲ್ಲಿ	...	22 ಲಕ್ಷ ರೂಪಾಯಿ ಲಾಭ
1966–67 ರಲ್ಲಿ	...	22 ಲಕ್ಷ ರೂಪಾಯಿ ಲಾಭ

ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ :—

1960–61 ರಲ್ಲಿ	...	33 ಲಕ್ಷ ಲಾಭ
1966–67 ರಲ್ಲಿ	...	44 ಲಕ್ಷ ಲಾಭ

ಸರ್ಕಾರಿ ಎಲೆಕ್ಟ್ರಿಕ್ ಫ್ಯಾಕ್ಟರಿ :—

1960–61 ರಲ್ಲಿ	...	5 ಲಕ್ಷ 30 ಸಾವಿರ ಲಾಭ
1966–67 ರಲ್ಲಿ	...	24 ಲಕ್ಷ ಲಾಭ

ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ :—

1960–61 ರಲ್ಲಿ	...	35 ಸಾವಿರ ಲುಕ್ಸಾನು
1966–67 ರಲ್ಲಿ	...	7 ಲಕ್ಷ ಲಾಭ

ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಹಾಸನ :—

1960–61 ರಲ್ಲಿ	...	1 ಲಕ್ಷ 20 ಸಾವಿರ ಲಾಭ
1965–66 ರಲ್ಲಿ	...	6 ಲಕ್ಷ 65 ಸಾವಿರ ಲಾಭ

ಸೆಂಟ್ರಲ್ ವರ್ಕ್‌ಶಾಪ್ ಮರ್ಕೆರಾ :—

	...	15 ಸಾವಿರ ಲಾಭ
ಈಗ		43 ಸಾವಿರ ಲಾಭ

ಈಗ ಒಂದು ಕೋಟಿ ರೂಪಾಯಿಯಷ್ಟು ಲಾಭವಾಗುತ್ತದೆ. ಗೌರ್ನಮೆಂಟ್ ಫ್ಯಾಕ್ಟರಿಯೊಳಗೆ ಲಾಭ ಲೆಕ್ಕ ಹಾಕಬೇಕಾದರೆ, ಒಂದು ಮಾತನ್ನು ನೆನಪಿನಲ್ಲಿಡಬೇಕು. ಈ ಕ್ಯಾಪಿಟಲ್ ಹಣ ಅದು ಇಕ್ವಿಟಿ ಷೇರ್ ರೂಪದಲ್ಲಿರುತ್ತದೆ. ಅದರಲ್ಲಿ ಕೇವಲ ಡಿವಿಡೆಂಟ್ಸ್ ಲೆಕ್ಕ ಹಾಕುತ್ತೇವೆ. ಇದರೊಳಗೆ ಏನು ಹಣ ಹಾಕುತ್ತೇವೆ, ಅದರಲ್ಲಿ ಹಾಕಿರತಕ್ಕ ಹಣಕ್ಕೆ, ಇಂಟರೆಸ್ಟ್ ಕೂಡ ಚಾರ್ಜ್ ಮಾಡುತ್ತೇವೆ. ಅದನ್ನು ನಾವು ಮರೆಯಕೂಡದು. 5 ಫಿಲೇಚರ್ ಪೈಕಿ ನಾಲ್ಕು ಲುಕ್ಸಾನು ಆಗುತ್ತದೆ. ಮೂರರಲ್ಲಿ ಹೇರಳವಾಗಿದೆ. ಅದು ಮೈಸೂರು, ಕೊಳ್ಳೆಗಾಲ ಮತ್ತು ಕನಕಪುರದವುಗಳು. ಚನ್ನಪಟ್ಟಣದಲ್ಲಿ 1960–61ರಲ್ಲಿ 30 ಸಾವಿರ ಲುಕ್ಸಾನು ಆಗಿದ್ದು 66–67ಕ್ಕೆ 12 ಲಕ್ಷ ಲಾಭವಾಗಿದೆ. ಮಾನ್ಯ ಸಿದ್ಧವೀರಪ್ಪನವರು ಸರ್ಕಾರಿ ಕಾರ್ಖಾನೆಗಳು ಸರಿಯಾಗಿ ಕೆಲಸಮಾಡುತ್ತದೋ ಇಲ್ಲವೋ ಎಂದು ಕೂಲಂಕಷವಾಗಿ ವಿಚಾರ ಮಾಡಲಿಕ್ಕೆ ಒಂದು ಶಾಸಕರ ಕಮಿಟಿ ಮಾಡಬೇಕೆಂದು ಹೇಳಿದರು. ಇದನ್ನು ಪದೇ ಪದೇ ಅವರು ಹೇಳುತ್ತಿದ್ದಾರೆ ಮಾನ್ಯ ಸದಸ್ಯರಿಗೆ ನಾನು ನೆನಪು ಮಾಡಿಕೊಡುತ್ತೇನೆ ಯಾವುದೇ ಒಂದು ಕಾರ್ಖಾನೆಯಲ್ಲಿ 100ಕ್ಕೆ 50ರಿಂದ ಹೆಚ್ಚು ಷೇರ್ ಬಂಡವಾಳ ಸರ್ಕಾರಕ್ಕೆ ಸೇರಿದರೆ, ಅದರ ಮೇಲೆ ಅನೇಕ ರೀತಿಯ ಕಂಟ್ರೋಲ್, ಹತೋಟಿ ಮತ್ತು ಅನೇಕ ರೀತಿಯ ಪರಿಶೀಲನೆ ಮಾಡತಕ್ಕ ವಿಧಾನ ಇದೆ. ಸರ್ಕಾರದ ವತಿಯಿಂದ ನಡೆಯತಕ್ಕ ಕಾರ್ಖಾನೆಗಳ ವಿಚಾರದಲ್ಲಿ ಒಂದು ಕಮಿಟಿ ಇದೆ. ಅದಕ್ಕೆ ಛೇರ್‌ಮನ್ ಸಂಬಂಧಪಟ್ಟ ಮಂತ್ರಿಯವರು. ಫಿಲೇಚರಿಗೆ ಸಂಬಂಧಪಟ್ಟ ಒಂದು ಪ್ರತ್ಯೇಕವಾದ ಕಮಿಟಿ ಇದೆ. ಕಮಿಟಿ ಆಫ್ ಇಂಡಸ್ಟ್ರೀಯಲ್ ಮ್ಯಾನೇಜ್‌ಮೆಂಟ್, ಕಮಿಟಿ ಆಫ್ ಮ್ಯಾನೇಜ್‌ಮೆಂಟ್ ಆಫ್ ಸೆರಿಕಲ್ಚರ್ ಎಂದು. ಇದರ ಹೊರತಾಗಿ ಎಲ್ಲಾ ಕಾರ್ಖಾನೆಗಳ ಲೆಕ್ಕಪತ್ರಗಳನ್ನು ಚಾರ್ಟರ್ಡ್ ಅಕೌಂಟೆಂಟ್ ಮಾಡುವುದಲ್ಲದೆ, ಅಕೌಂಟೆಂಟ್ ಜನರಲ್ ಆಫೀಸಿನವರು ಅದನ್ನು ನೋಡುತ್ತಾರೆ. ಮತ್ತು ಅವರು ಯಾವ ರೀತಿಯಾದ ಒಂದು ಪ್ರಶ್ನೆಯನ್ನು ಕೇಳಿ

ದರೂ ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡಬೇಕಾಗುತ್ತದೆ. ಇದರ ಹೊರತಾಗಿ ಇದೇ ಸಭೆಯ ಒಂದು ಉಪಸಮಿತಿಯಾದಂತಹ ಪಬ್ಲಿಕ್ ಅಕೌಂಟ್ಸ್ ಕಮಿಟಿ ಮತ್ತು ಎಸ್ಟಿಮೇಟ್ ಕಮಿಟಿ ಇವುಗಳಿಗೆ ಬಹಳ ವ್ಯಾಪ್ತವಾದಂತಹ ಅಧಿಕಾರ ಇದೆ. ಸರ್ಕಾರದ ಹಣ ಯಾವುದೇ ರೀತಿಯಲ್ಲಿ ಖರ್ಚಾಗಬೇಕು, ಅದು ದುರ್ವಿನಿಯೋಗವಾಗದಂತೆ, ಹತೋಟಿಯನ್ನು ಅಪ್ರತ್ಯಕ್ಷವಾಗಿ ಇವರು ಮಾಡಬಹುದು. ಕಳೆದ ವರ್ಷ ನಾನು ಅರ್ಥಿಕ ಮಂತ್ರಿಯಾಗಿ ಈ ವಿಚಾರದಲ್ಲಿ ಒಂದು ಹೊಸ ನಿರ್ಬಂಧ ವನ್ನು ಹೇಳಿದ್ದೇನೆ. ಅದೇನೆಂದರೆ, ಯಾವುದೇ ಒಂದು ಕಾರ್ಖಾನೆಯಲ್ಲಿ ಸರ್ಕಾರದ ಭಾಗ ನೂರಕ್ಕೆ 50 ರಿಂದ ಹೆಚ್ಚು ಇದ್ದಲ್ಲಿ ಕೆಲವೊಂದು ನಿರ್ಣಯ ತೆಗೆದುಕೊಳ್ಳುವ ಮೊದಲು ಸರ್ಕಾರ ಪೂರ್ವಭಾವಿಯಾದಂತಹ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕೆಂದು ನಿಯಮ. ಇದು ಅಕೌಂಟೆಂಟ್ ಜನರಲ್‌ನಿಂದ ಬಂದಂತಹ ಸೂಚನೆಯ ಮೇರೆಗೆ ಈ ನಿರ್ದೇಶನವನ್ನು ಕೊಟ್ಟಿದ್ದೇನೆ. ಯಾವ್ಯಾವ ವಿಚಾರದಲ್ಲಿ ಅಂದರೆ :—

(1) The State Government to exercise adequate direct control in regard to the approval of programme of capital expenditure exceeding certain monetary limits. The monetary limit will vary from industry to industry, depending upon the size of the industry.

(2) Appointments to the posts carrying maximnm pay of Rs. 2,250 or more ;

(3) Sale, lease or disposal of whole or substantially whole of the undertakings;

(4) Formation of a subsidiary company or winding up of the company ;

(5) Power to appoint Financial Adviser ; and

(6) Right of the president or Government to issue such directive or instruction as may be considered necessary in regard to the financial conduct of business affairs of the Companies or Directors thereof. ಇಷ್ಟೆಲ್ಲಾ ಆದಮೇಲೂ ಕೂಡ ಈ ಒಂದು ಕಮಿಟಿಬೇಕು ಎಂದು ಹೇಳಿ ಒತ್ತಾಯ ಮಾಡುವುದಾದರೆ ನನಗೇನೂ ಅಭ್ಯಂತರವಿಲ್ಲ. ಸರ್ಕಾರ ನೇರವಾಗಿ ನಡೆಸತಕ್ಕ ಕಾರ್ಖಾನೆಗಳೇನಿವೆ, ಸರ್ಕಾರ ಏನು ಉದ್ದೇಶದಿಂದ ಇದರಲ್ಲಿ ಹಣ ಹಾಕಿದೆ, ಆ ಹಣ ಸರಿಯಾಗಿ ಉಪಯೋಗವಾಗಬೇಕು, ಸರಿಯಾದ ಪ್ರತಿಫಲ ಸಿಗಬೇಕೆಂದು ನಮ್ಮ ಉದ್ದೇಶ.

I would like to assure the hon'ble Members that I would not like any money to be spent without any adequate return. It wiil be my effort to see that whatever action is necessary is taken to see that the investment made in various industrial projects, yield the maximum return.

ಇದನ್ನು ಕೈಗಾರಿಕೆಯ ಮಂತ್ರಿಯಾಗಿ, ಅರ್ಥಿಕ ಮಂತ್ರಿಯಾಗಿ ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತಿದ್ದೇನೆ. ಕೊನೆಯದಾಗಿ ಹೊಸದಾಗಿ ಯಾವ್ಯಾವ ಕಾರ್ಖಾನೆಗಳು ಇವೆ ಅವುಗಳ ಬಗ್ಗೆ ಎರಡು ನಿಮಿಷಗಳಲ್ಲಿ ವಿವರಿಸುತ್ತೇನೆ.

Sri H. SIDDAVEERAPPA.—With regard to the Corporations, I want to make one suggestion. The hon'ble Minister has said that in Bhadravathi, N.G.E.F . etc., a sum of Rs. 60 crores is invested. So, this House should be actively associated with the Board of Directors. At least one or two members of the Lower House should be in the Board so that the members of this House may have an inside probe into the matter and know as to how things are managed there. This is allowed in the Government of India concerns.

Sri RAMAKRISHNA HEGDE.—This may not be quite advisable because in the interest of efficient working of any industrial project, it is

(SRI RAMAKRISHNA HEGDE)

necessary that we give adequate freedom to the Board of Directors and fix responsibility. If the Members of this House are allowed to know what is going on in these industries, it will not be proper because Government stake is there, particularly in industries where Government hold more than 25 per cent of the shares. Every Member of this House is entitled to know what is happening in such industries ; every information will be made available to the hon'ble Members. ಆದರೆ ಒಂದು ಮಾತನ್ನು ಹೇಳುತ್ತೇನೆ. ಅದನ್ನು ಮೊನ್ನೆ ಕೂಡ ಹೇಳಿದೆ. ಆದರ ನಂತರ ಕೆಲವು ಸಂದರ್ಭಗಳಲ್ಲಿ, the sort of questions that are asked in this House and the sort of criticism that is made by certain Members, will disturb the claimate that is now created for the Industrial development.

1-30 P.M.

ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಮೊನ್ನೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಒಂದು ಮಾತು ಹೇಳಿದರು. ಭದ್ರಾವತಿಯಲ್ಲಿ ಸ್ಪೆಷಲ್ ಸ್ಟೀಲ್ ತಯಾರ್ಮಾಡುತ್ತಾರೆ. ಈಗ ಮಾರಾಟ ಮಾಡತಕ್ಕಂಥ ಒಂದು ಜವಾಬ್ದಾರಿಯನ್ನು ನಾವು ಯಾವುದಾದರೂ ಒಂದು ಪ್ರತ್ಯೇಕವಾದ ಸಮರ್ಥವಾದ ಸಂಸ್ಥೆಗೆ ವಹಿಸದೆ ಇದ್ದರೆ ಅದು ಮಾರಾಟವಾಗದೆ ಸ್ಟಾಕ್ ಬಿದ್ದರೆ ಅದಕ್ಕೆ ಯಾರು ಜವಾಬ್ದಾರರು ? ಬೇರೆ ಕಡೆ ಮಾಡಬೇಕು ಎಂದು ವಿಚಾರ ಮಾಡಿದಾಗ ಇದರ ಜವಾಬ್ದಾರಿ ವಹಿಸಿಕೊಂಡು ಕೆಲಸ ಮಾಡುವುದಕ್ಕೆ ಯಾರೂ ಬರಲಿಲ್ಲ. ಈ ಕೊಲ್ಯಾಬರೇಟರ್ಸ್ ಅವರ ಏಜೆಂಟರಿಗೆ ಮಾತ್ರ ನಾವು ಸ್ಪೆಷಲ್ ಸ್ಟೀಲ್ ತಯಾರ್ಮಾಡಿದ ಮೇಲೆ ಮಾರಾಟ ಮಾಡುವ ಈ ಏಜೆನ್ಸಿ ಕೊಟ್ಟರೆ ಒಳ್ಳೆಯದು ಎಂದು ಹೇಳಿದರು. ಅನುಭವ ಅವರಿಗೆ ಇದೆ. ಇಂದು ಈ ಸಭೆಯಲ್ಲಿ ನಡೆದ ಚರ್ಚೆಯಲ್ಲಿ ಟೀಕೆ ಆಯಿತು. ಇದರ ಪರಿಣಾಮ ಏನೇನು ಆಗುತ್ತದೆ ಅದಕ್ಕೆ ಗಮನಕೊಡಬೇಕಾಗುತ್ತದೆ. ಈ ಸಂಸ್ಥೆಯವರು ತಮಗೆ ಇದರಲ್ಲಿ ಆಸಕ್ತಿ ಇಲ್ಲ ಎಂದು ಹೇಳುತ್ತಿದ್ದಾರೆ.

They say they are not interested in this; they might have taken a wise decision but I do not know whether it is wise for us. Tomorrow if the steel is produced and if it has no market, the very hon'ble members will accuseus for producing such a material.

SRI H. SIDDAVEERAPPA.—I beg to state that the Hon'ble Minister has been ill-advised by his advisers. I know, so far as that steel is concerned, it is always a seller's market and not buyer's market. I may tell him if at all it manufactured properly, Bhadravathi will hold the monopoly for the whole of India so far as this special steel is concerned. I am sorry the Minister has been wrongly advised. That kind of advice should not be there and I am sorry for that advice.

SRI RAMAKRISHNA HEGDE.—Sir, I gave an instance where certain uncharitable remarks are adversely affecting the climate which we want for the industrial development in the State.

ಈಗ ಪಬ್ಲಿಕ್ ಸೆಕ್ಟರ್, ಪ್ರೈವೇಟ್ ಸೆಕ್ಟರ್ ಇವು ಸೇರಿ ಬೇರೆ ಬೇರೆ ಕಾರ್ಖಾನೆಗಳಿಗೆ ಕೊಟ್ಟಿರತಕ್ಕಂಥ ಒಟ್ಟು ಬಂಡವಾಳ 432 ಕೋಟಿ 46 ಲಕ್ಷ ರೂಪಾಯಿ. ಇದರಲ್ಲಿ ಸುಮಾರು 196 ಕೋಟಿಯಷ್ಟು ಬಂಡವಾಳ ಬೇರೆ ಬೇರೆ ಕಾರ್ಖಾನೆಗಳಿಗೆ ಕೊಟ್ಟಿದೆ. 234 ಕೋಟಿ ಬಗ್ಗೆ ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿದೆ.

ಇಷ್ಟು ಹೇಳಿ, ಈ ಡಿಮ್ಯಾಂಡನ್ನು ಪಾಸು ಮಾಡಬೇಕೆಂದು ಮಾನ್ಯ ಸಭೆಗೆ ಬಿನ್ನವಿಸಿಕೊಳ್ಳುತ್ತೇನೆ. ಅನೇಕ ಸೂಚನೆಗಳನ್ನು ಕೊಟ್ಟಿರುವುದಕ್ಕೆ ಕೃತಜ್ಞತೆಗಳನ್ನು ಅರ್ಪಣೆಮಾಡುತ್ತೇನೆ.

MR. CHAIRMAN.—I will put the demands to the Vote of the House. The question is:

"That the respective sums not exceeding the amounts mentioned in the Demands Nos. 1, 3, 5, 14, 16, 24, 34, 35, 36, 40, 41, 44, 52 and 54 including the sums already voted on account be guranted to Government to defray the charges which will come in course of payment during the financial year for the period ending the 31st day of March, 1969."

The motion was adopted.

As ordered by the Chair the motion for Demands for grants adopted by the House are reproduced below:—

DEMAND NO. 1—TAXES ON INCOME OTHER THAN CORPORATION TAX

4 Taxes on Income other than Corporation Tax.

"That a sum not exceeding Rs. 7,44,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Taxes on Income other than Corporation Tax'."

DEMAND NO. 3.—STATE EXCISE.

10. State Excise Duties

"That a sum not exceeding Rs. 72,26,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'State Excise Duties'."

DEMAND NO. 5.—SALES-TAX--ADMINISTRATION

12. Sales-tax.

"That a sum not exceeding Rs. 67,29,000 including the sums already voted on account be granted to Government to defray the charges which will come in course of payment during the financial year for the period ending 31st day of March 1969, in respect of 'Sales-tax'."

(MR. CHAIRMAN)

DEMAND NO. 14.—SUPPLIES AND DISPOSALS.

25. Supplies and Disposals.

"That a sum not exceeding Rs. 2,70,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Supplies and Disposals'."

DEMAND NO. 16.—SCIENTIFIC DEPARTMENTS.

27. Scientific Departments.

"That a sum not exceeding Rs. 42,23,000 including the sums already voted on account be grant to the Government to defray the charges which will come in course of payment during the financial year for the period ending 31st day of March 1969, in respect of 'Scientifie Departments'."

DEMAND NO. 24.—INDUSTRIES INCLUDING SERICULTURE.

35. Industries

"That a sum not exceeding Rs. 12,57,54,400 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Industries'."

DEMAND NO. 34.—PENSIONS AND OTHER RETIREMENT BENEFITS

65. Pensions and other Retirement Benefits.

"That a sum not exceeding Rs. 3,06,63,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Pensions and other Retirement Benefits'."

DEMAND NO. 35.—TERRITORIAL AND POLITICAL PENSIONS.

66. Territorial and Political Pensions.

" That a sum not exceeding Rs. 1,46,000 including the sums already voted on account be granted to the Government to defray the charges which will come in course of payment during the financial year for the period ending 31st day of Mach 1969, in respect of 'Territorial and Political Pensions'."

DEMAND NO. 36—PRIVY PURSES AND ALLOWANCES.

67. Privy Purses and Allowances of Indian Rulers.

" That a sum not exceeding Rs. 33,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of ' Privy Purses and Allowances of Indian Rulers'."

DEMAND NO. 40.—COMMUTATION OF PENSIONS.

72. Commutation of Pensions.

" That a sum not exceeding Rs. 27,52,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Commutation of Pensions'."

DEMAND NO. 41.—MISCELLANEOUS COMPENSATIONS AND ASSIGNMENTS

76. Other Miscellaneous compensations and Assignments.

" That a sum not exceeding Rs. 1,32,72,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of ' Other Miscellaneous Compensations and Assignments'."

DEMAND NO. 44.—INDUSTRIAL AND ECONOMIC DEVELOPMENT.

96. Capital Outlay on Industrial and Economic Development

" That a sum not exceeding Rs. 7,16,45,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of ' Capital Outlay on Industrial and Economic Development'."

(MR. CHAIRMAN)

DEMAND NO. 52.—COMMUTED VALUE OF PENSIONS.

120. Payments of Commuted Value of Pension.

"That a sum not exceeding Rs 26,25,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Payments of Commuted Value of Pensions'."

DEMAND NO. 54.—ADVANCES AND LOANS.

Q. Loans and Advances by State/Union Territory Governments.

"That a sum not exceeding Rs. 15,37,87,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Loans and Advances by State/Union Territory Governments'."

Mr. CHAIRMAN.—The House will now stand adjourned and meet on next Monday at 1 P.M.

The House adjourned at Thirty-five Minutes past One of the Clock to meet again at One of the Clock on Monday, the 25th March 1968.

WD 10713—GPB—600—12-7-1968

MYSORE LEGISLATIVE ASSEMBLY

Monday, 25th March 1968

The House met in the Assembly Chamber, Vidhana Soudha, Bangalore, at One of the Clock.

[MR. DEPUTY SPEAKER (SRI D. MANJUNATH) in the Chair.]

STARRED QUESTIONS

(to which oral answers were given)

Disputes referred to the Registrar of Co-operative Societies by Adjudication

316. Sri K. H. RANGANATH (Mudigere).—

Will the Minister for Development and Co-operation be pleased to state :—

(*a*) the number of disputes referred to the Ragistrar of Co-operative Societies in Bangalore District during the year 1965-66, 1966-67 for adjudication ;

(*b*) the number of Arbitrators appointed in Bangalore District during the year 1965–66 and 1966–67 mentioning their names and profession ;

(*c*) the total number of disputes referred to each Arbitrator in Bangalore District by the Registrar for disposal and total amount of remuneration that each Arbitrator got during 1965-66 and 1966-67 in Bangalore District ?

A.—Sri P. M. NADGOUDA (Minister for Development and Co-operation).—

(*a*) 1,574 and 1,295 respectively.

(*b*) 50 and 69 respectively as detailed in the statement placed on on the Table of the House. **

(*c*) As in columns 4, 5, 6 and 7 in the statement placed on the Table of the House.**

**Copy placed in the Mysore Legislature Library *vide* No. 36 dated 25th March 1968.

ಶ್ರೀ ಕೆ. ಎಚ್. ರಂಗನಾಥ್.—ಈ ವಿವಾದಗಳನ್ನು ಕಳಿಸುವಾಗ ಯಾವ ತತ್ವವನ್ನು ಅನುಸರಿಸುತ್ತೀರಿ ?

† ಶ್ರೀ ಪಿ. ಎಂ. ನಾಡಗೌಡ.—ಮಧ್ಯಸ್ಥ ನಿರ್ಣಯಗಾರರುಗಳಿಗೆ ವಿವಾದಗಳನ್ನು ಕಳಿಸುವಾಗ ಅವರುಗಳು ಹಿಂದೆ ಯಾವ ರೀತಿ ತೀರ್ಮಾನ ಮಾಡಿರುತ್ತಾರೆಂಬುದನ್ನು ನೋಡಿಕೊಂಡು ಅಸಿಸ್ಟೆಂಟ್ ರಿಜಿಸ್ಟ್ರಾರ್ ಡಿವಿಜನ್‌ಗಳಿಗೆ ಕಳಿಸುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ್.—1965-66 ಮತ್ತು 1966-67ನೇ ಸಾಲುಗಳಲ್ಲಿ ನೇಮಕ ಮಾಡಲಾಗಿದ್ದ ಮಧ್ಯಸ್ಥ ನಿರ್ಣಯಗಾರರುಗಳು ಕ್ರಮವಾಗಿ 50 ಮತ್ತು 69 ಎಂದು ತಿಳಿಸಿದ್ದೀರಿ. ಯಾವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಇವರನ್ನು ನೇಮಕಮಾಡುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಮಧ್ಯಸ್ಥ ನಿರ್ಣಯಗಾರರನ್ನು ನೇಮಕ ಮಾಡಬೇಕಾದರೆ ಕೋ-ಆಪರೇಟಿವ್ ಕ್ಷೇತ್ರದಲ್ಲಿ ಅವರಿಗಿರುವ ಅನುಭವವನ್ನು ಮತ್ತು ಅವರು ಅಡ್ವೊಕೇಟ್ಸ್ ಆಗಿದ್ದಾರೆಯೇ ಎಂಬುದನ್ನು ನೋಡಿಕೊಂಡು ಮಾಡುತ್ತೇವೆ.

ಶ್ರೀ ಕೆ. ಎಚ್. ರಂಗನಾಥ್.—ತಾವು ಅನುಕ್ರಮವಾಗಿ 50 ಮತ್ತು 69 ಜನರ ಒಂದು ಪಟ್ಟಿಯನ್ನು ಕೊಟ್ಟಿದ್ದೀರಿ. ಇವರಲ್ಲಿ 8-10 ಜನಕ್ಕೆ ಸಾವಿರಾರು ರೂಪಾಯಿಗಳು ರೆಮ್ಯುನರೇಷನ್ ಬರುವಂತೆ ಬೇರೆಯವರಿಗೆ ಕಡಿಮೆ ಬರುವಂತೆ ಅಲಾಟ್ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ಕೆಲವರು ಹಿಂದಿನ ಕೇಸಸ್‌ಗಳನ್ನು ತೀರ್ಮಾನಮಾಡಿರಲಿಕ್ಕಿಲ್ಲ. ಮತ್ತು ಕೆಲವು ಡಿವಿಜನ್‌ಗಳಲ್ಲಿ ಕೇಸಸ್‌ಗಳು ಹೆಚ್ಚು ಇರಲಿಕ್ಕಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಕೇಸ್‌ಗಳನ್ನು ತೀರ್ಮಾನ ಮಾಡುವ ವಿಚಾರದಲ್ಲಿ ಏನಾದರೂ ಕಾಲಮಿತಿಯನ್ನು ಇಟ್ಟಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಕಾಲಮಿತಿಯನ್ನು ಇಟ್ಟಿಲ್ಲ, ಶೀಘ್ರವಾಗಿ ಮಾಡಬೇಕೆಂದು ಇದೆ. ಕೆಲವು ಕೇಸ್‌ಗಳನ್ನು 2-3 ವರ್ಷವಾದರೂ ತೀರ್ಮಾನವಾಗಿರುವುದಿಲ್ಲ. ಅಂತಹ ಸಮಯದಲ್ಲಿ ಸಂಬಂಧಪಟ್ಟ ಮಧ್ಯಸ್ಥ ನಿರ್ಣಯಗಾರರನ್ನು ತೆಗೆದು ಬೇರೆಯವರಿಗೆ ಆ ಕೇಸನ್ನು ವಹಿಸಲಾಗುತ್ತದೆ.

ಶ್ರೀ ಎನ್. ಎ. ಚನ್ನೇಗೌಡ.—ಮಧ್ಯಸ್ಥಗಾರರನ್ನು ನೇಮಕ ಮಾಡುವಾಗ ಸ್ಥಳೀಯ ವ್ಯಕ್ತಿಗಳನ್ನು ನೇಮಕ ಮಾಡಿದರೆ ನ್ಯಾಯ ಸಿಗುವುದು ಕಷ್ಟವಾಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ಮತ್ತು ಲಾ ಗ್ರಾಜುಯೇಟ್ ಅಲ್ಲದವರನ್ನು ಇಂತಹ ಕೇಸ್‌ಗಳಿಗೆ ನೇಮಕ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅಂತಹ ಕೇಸ್‌ಗಳು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಬೆಂಗಳೂರಿನ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ರಾಮನಗರದ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಂದ ಬಂದ ಕೇಸ್‌ಗಳನ್ನು ಯಾರು ಯಾರಿಗೆ ರೆಫರ್ ಮಾಡಲಾಗಿದೆ ?

ಶ್ರೀ ಪಿ. ಎಂ. ನಾಡಗೌಡ.—ಅದು ದೊಡ್ಡ ಪಟ್ಟಿ ಇದೆ, ಬೇಕಾದರೆ ಕೊಡುತ್ತೇನೆ.

ಶ್ರೀ ಎಚ್. ಬಿ. ಚ್ಯಾಲನಯ್ಯ.—ಈ ಮಧ್ಯಸ್ಥ ನಿರ್ಣಯಗಾರರನ್ನು ನೇಮಕ ಮಾಡಿದಮೇಲೆ ಅವರುಗಳು ಕೇಸ್‌ಗಳನ್ನು ವಿಲೇವಾರಿ ಮಾಡುವುದರಲ್ಲಿ ತಡಮಾಡುತ್ತಿರುವುದು ಮತ್ತು ಕೆಲವರ ಪ್ರಭಾವಕ್ಕೆ ಒಳಗಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಆ ರೀತಿ ಕಂಡುಬಂದರೆ, ಅಂತಹ ಕೇಸ್‌ಗಳನ್ನು ಬೇರೆಯವರಿಗೆ ವಹಿಸಲಾಗುತ್ತದೆ.

SRI K. H. RANGANATH.—Has it come to the notice of the Government that Assistant Registrars, Second Circle, Bangalore and Ramanagaram have been allotting cases to particular people alwayas and have not been allotting cases equally to all the arbitrators in the district ?

ಶ್ರೀ ಪಿ. ಎಂ. ನಾಡಗೌಡ.—ಅಂತಹ ಕೇಸಸ್‌ಗಳು ಇರುವುದು ಕಂಡುಬಂದರೆ ಪುನರ್ವಿಮರ್ಶೆ ಮಾಡಿ ಸಂಬಂಧಪಟ್ಟವರಿಗೆ ಸೂಕ್ತ ತಿಳಿವಳಿಕೆ ಕೊಡುತ್ತೇವೆ.

† Indicates that the speeches or remarks have not been revised by the member concerned

Sri K. H. RANGANATH.—Has it come to the notice of the Government that these Assistant Registrars have been demanding money from these arbitrators and if they give, they will allot cases, otherwise not?

Sri P. M. NADGOUDA.—It has not come to the notice of the Government. If the Hon'ble Member gives concrete instances, The Government is prepared to deal with them.

Mr. DEPUTY SPEAKER.—Next Question No. 317.

Sri H. SIDDAVEERAPPA.—Sri G. Duggappa is not present. I request the Chair to put the question so that answers may be elicited.

Mr. DEPUTY SPEAKER.—I put Question No. 317.

Part taken by the Cabinet Ministers in the Bye-Election to Parliament

317. **Sri G. DUGGAPPA** (Bharamasagar).—

Will the Chief Minister be pleased to state :—

(*a*) whether any of the present Cabinet Ministers has taken part in the Bye-election to Parliament seats from Mandya Constituency ;

(*b*) if so, the number of days the Minister and the Chief Minister have spent in Mandya District during the above Bye-elections ;

(*c*) the number of public meetings addressed by these Ministers during the election period?

A.—**Sri S. NIJALINGAPPA** (Chief Minister).—

(*a*) Yes. *Vide* statement appended.

(*b*) *Vide* statement appended.

(*c*) *Vide* statement appended.